Swabhimani Sahakari
Pages : 40 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 17
Issue - 01
January - 2020

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಕಾಲಚಕ್ರ ಉರುಳುತಿದೆ,
ಗಾಳಿ ಮೊರೆದು ಹೊರಳುತಿದೆ ;
ಗೆಜ್ಜೆ ಸದ್ದು ಹೆಜ್ಜೆ ನೆರಳು ದಾರಿಯುದ್ದಕೂ.
ಅರ್ಧ ಸುಖ, ಅರ್ಧ ದುಃಖ,
ಬಾನ ಕಡೆಗೆ ತೆರೆದೆ ಮುಖ :
ತಾಯ ಸೆರಗ ಹಿಡಿದ ಕಂದ ದಾರಿಯುದ್ದಕೂ.

– ಕೆ ಎಸ್ ನರಸಿಂಹಸ್ವಾಮಿ



1 ಜನವರಿ
ಸೌಹಾರ್ದ ಸಹಕಾರಿ
ದಿನಾಚರಣೆ



ಜನವರಿ 12
ಸ್ವಾಮಿ ವಿವೇಕಾನಂದರ
ಜಯಂತಿ





ಮಕರ ಸಂಕ್ರಾಂತಿಯ
ಶುಭಾಶಯಗಳು

71 ನೇ
ಗಣರಾಜ್ಯೋತ್ಸವದ
ಶುಭಾಶಯಗಳು

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4892

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1310



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

# ಸೌಹಾರ್ದ ಸಹಕಾರಿ ಒಕ್ಕೂಟಗಳ ವಿಭಿನ್ನ ಕಾರ್ಯಚಟುವಟಿಕೆಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸ್ಫೂರ್ತಿ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಮಸ್ತ ಸಹಕಾರಿ ಸಂಸ್ಥೆಗಳ ಎಲ್ಲ ಸಹಕಾರಿಗಳಿಗೆ ಮತ್ತು ರಾಜ್ಯದ ಸಮಸ್ತ ನಾಗರಿಕರಿಗೆ ನೂತನ ವರ್ಷ 2020ರ, ಮಕರ ಸಂಕ್ರಾಂತಿಯ ಹಾಗೂ 71ನೇ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ಮಕರ ಸಂಕ್ರಾಂತಿಯ ಈ ಪರ್ವಕಾಲದಲ್ಲಿ ಸೂರ್ಯ ತನ್ನ ಪಥ ಸಂಚಲನವನ್ನು ದಕ್ಷಿಣಾಯಣದಿಂದ ಉತ್ತರಾಯಣದ ಕಡೆಗೆ ಬದಲಿಸುವ ಹಾಗೇ ಸಹಕಾರಿ ಕ್ಷೇತ್ರದ ಪಥ ಸಂಪೂರ್ಣ ಗುಣಮಟ್ಟದಕಡೆಗೆ (Total Quality Management) ಬದಲಾಯಿಸಿ ಕಾರ್ಯನಿರ್ವಹಿಸುವಂತಾಗಲಿ ಹಾಗೂ ದೇಶದ 70ನೇ ಗಣರಾಜ್ಯೋತ್ಸವದ ಸಂದರ್ಭದಲ್ಲಿ ದೇಶದ ಎಲ್ಲ ನಾಗರಿಕರಿಗೂ ಅವರ ಕರ್ತವ್ಯ ಪ್ರಜ್ಞೆ, ಜವಾಬ್ದಾರಿಗಳ ಅರಿವು ಹಾಗೂ ದೇಶದ ಬಗ್ಗೆ ಅಭಿಮಾನ ಇಮ್ಮಡಿಯಾಗಿ ಬೆಳೆಯುವುದರ ಜೊತೆಗೆ ಅವರ ಬಾಳಿನಲ್ಲಿ ಸುಖ ಶಾಂತಿ ಸಮೃದ್ಧಿಯಾಗಲೆಂದು ಭಾರತಾಂಬೆ ಹಾಗೂ ಕನ್ನಡ ತಾಯಿ ಭುವನೇಶ್ವರಿ ನಮ್ಮೆಲ್ಲರನ್ನು ಹರಸಲಿ ಎಂದು ಪ್ರಾರ್ಥಿಸುತ್ತೇನೆ. 19ನೇ ಸೌಹಾರ್ದ ಸಹಕಾರಿ ದಿನಾಚರಣೆಯ ಶುಭಹಾರೈಕೆಗಳನ್ನು ತಿಳಿಸುತ್ತ ಈ ದಿನದಂದು ತಾವೆಲ್ಲರೂ ಹಾಕಿಕೊಂಡಿರುವ ವಿಶೇಷ ಕಾರ್ಯಕ್ರಮಗಳ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರ ಇನ್ನೂ ಹೆಚ್ಚು ಗುಣಾತ್ಮಕವಾಗಿ ಬೆಳೆಯಲಿದೆ ಎಂದು ಆಶಿಸುತ್ತೇನೆ.

**ಆತ್ಮೀಯ ಸಹಕಾರಿ ಬಂಧುಗಳೇ,**

ಪ್ರಸಕ್ತ ವರ್ಷದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಬಹುತೇಕ ಜಿಲ್ಲಾ ಒಕ್ಕೂಟಗಳು ಸ್ಥಾಪನೆಯಾಗಿವೆ. ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖವಾಣಿಯಾಗಿ ಈ ಸೌಹಾರ್ದ ಸಹಕಾರಿಗಳ ಒಕ್ಕೂಟಗಳು ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಅಪೇಕ್ಷೆ. ಅದರಂತೆ ಬಹುತೇಕ ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿರುವುದು ಸಂತೋಷದ ಹಾಗೂ ಸ್ವಾಗತಾರ್ಹ ವಿಷಯ.

ದಿನಾಂಕ 21.12.2019 ರಂದು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ಅತ್ಯಂತ ಪರಿಣಾಮಕಾರಿಯಾಗಿ "ಸಹಕಾರ ಸ್ಫೂರ್ತಿ" ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಕ್ರೀಡಾಕೂಟವನ್ನು ಏರ್ಪಡಿಸಿದ್ದು ಜಿಲ್ಲೆಯ ಎಲ್ಲ ಸಹಕಾರಿಗಳ ಗಮನ ಸೆಳೆದಿದ್ದು, ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರಿಗೆ, ಸಿಬ್ಬಂದಿಯವರಿಗೆ ಹೊಸ ಹರುಷವನ್ನು ತಂದು ಕೊಟ್ಟಿದೆ. ಇದು ಸೌಹಾರ್ದ ಸಹಕಾರಿ ಒಕ್ಕೂಟಗಳ ಕಾರ್ಯಕ್ರಮಗಳಲ್ಲಿ ವಿಶೇಷ ಹಾಗೂ ವಿಭಿನ್ನವಾಗಿತ್ತು.

"ದಿನಾಂಕ 21.12.2019 ರಂದು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ಅತ್ಯಂತ ಪರಿಣಾಮಕಾರಿಯಾಗಿ "ಸಹಕಾರ ಸ್ಫೂರ್ತಿ" ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಕ್ರೀಡಾಕೂಟವನ್ನು ಏರ್ಪಡಿಸಿದ್ದು ಜಿಲ್ಲೆಯ ಎಲ್ಲ ಸಹಕಾರಿಗಳ ಗಮನ ಸೆಳೆದಿದ್ದು, ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರಿಗೆ, ಸಿಬ್ಬಂದಿಯವರಿಗೆ ಹೊಸ ಹರುಷವನ್ನು ತಂದು ಕೊಟ್ಟಿದೆ. ಇದು ಸೌಹಾರ್ದ ಸಹಕಾರಿ ಒಕ್ಕೂಟಗಳ ಕಾರ್ಯಕ್ರಮಗಳಲ್ಲಿ ವಿಶೇಷ ಹಾಗೂ ವಿಭಿನ್ನವಾಗಿತ್ತು."

ಸಹಕಾರಿ ಧ್ವಜಾರೋಹಣ, ವಿವಿಧ ಬಣ್ಣಗಳ ಬಲೂನ್‌ಗಳನ್ನು ಹಾರಿಬಿಡುವ, ಸೌಹಾರ್ದಗಳ ವರ್ಣಮಯ ಪಥಸಂಚಲನ, ವಾಲಿಬಾಲ, ಹಗ್ಗಜಗ್ಗಾಟ, ವೇಗದ ಓಟದ ಸ್ಪರ್ಧೆ, ಭಾರದ ಗುಂಡು ದೂರ ಎಸೆಯುವುದು, ಥ್ರೊ ಬಾಲ ಮುಂತಾದ ಆಟಗಳಲ್ಲಿ ಮಹಿಳೆಯರು ಹಾಗೂ ಪುರುಷರು ಸಮಾನ ಶಿಸ್ತು ಹಾಗೂ ಉತ್ಸಾಹದಿಂದ ಭಾಗವಹಿಸಿರುವುದು ಒಕ್ಕೂಟದ ವತಿಯಿಂದ ಕ್ರೀಡಾಪಟುಗಳಿಗೆ ಉತ್ತಮ ವ್ಯವಸ್ಥೆಗಳು ಕ್ರೀಡಾಕೂಟಕ್ಕೆ ಮೆರಗು ತಂದಿರುವುದು ಶ್ಲಾಘನೀಯ, ಅಭಿನಂದನೀಯ ಹಾಗೂ ಅನುಕರಣೀಯ.

ಅದೇ ರೀತಿ ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಸೌಹಾರ್ದ ಸಹಕಾರಿಗಳ ಒಕ್ಕೂಟದ ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ, ಪ್ರಬಂಧ ಸ್ಪರ್ಧೆ, ರಸ ಪ್ರಶ್ನೆ ಮುಂತಾದವುಗಳನ್ನು ಹಮ್ಮಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಿರುವುದು ಶ್ಲಾಘನೀಯ.

ಸೌಹಾರ್ದ ಸಹಕಾರಿಗಳ ನಿರ್ದೇಶಕರು ಹಾಗೂ ಸದಸ್ಯರುಗಳಲ್ಲಿ ಹಾಗೂ ವಿಶೇಷವಾಗಿ ಸಿಬ್ಬಂದಿಗಳಲ್ಲಿ ಕ್ಷೇತ್ರದ ಬೆಳವಣಿಗೆ ಬಗ್ಗೆ ಹೆಚ್ಚಿನ ಕಾಳಜಿಯನ್ನು ಬೆಳೆಸಿಕೊಳ್ಳುವ ಸಂದೇಶವನ್ನು ನೀಡಿದೆ. ಸಾರ್ವಜನಿಕರಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವ ಸಾರ್ವಜನಿಕವಾಗಿ ಪರಿಚಯಿಸುವ, ಪ್ರಗತಿ ಹಾಗೂ ಸಾಧನೆಗಳನ್ನು ಪ್ರಚಾರಗೊಳಿಸುವ, ಸರಕಾರ ಹಾಗೂ ಸಾರ್ವಜನಿಕರಲ್ಲಿ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಮಹತ್ವದ ಪ್ರಯತ್ನ ಹಾಗೂ ಸಾಧನೆ ಇದಾಗಿದೆ. ಇಂತಹ ವಿಭಿನ್ನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮತ್ತು ಯಶಸ್ವಿಯಾಗಲು ಸಹಕಾರ ನೀಡಿದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯು ಅಭಿನಂದಿಸುತ್ತದೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್: souharda@souharda.coop
swabhimani@souharda.coop
ವೆಬ್‌ಸೈಟ್: www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 5–12, 15–21
ಆರ್.ಬಿ.ಐ ಸುತ್ತೋಲೆ ..................19,22,23
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ........................................ 13–14, 24–28
ನಿಮ್ಮ ಪ್ರಶ್ನೆ – ನಮ್ಮ ಉತ್ತರ ................ 29
ಲೇಖನ........................................... 30–38

# ಸಂಪಾದಕೀಯ

## ಸಹಕಾರ ಸಂಸ್ಥೆಗಳ ಆದಾಯ ತೆರಿಗೆ ತಗಾದೆಗಳ ಪರಿಹಾರಕ್ಕೆ ಕೇಂದ್ರದ ಇಚ್ಛಾಶಕ್ತಿ ಅಗತ್ಯ. ಸಹಕಾರಿ ನಾಯಕರುಗಳಿಂದ ಕೇಂದ್ರದ ಮನವರಿಕೆ ಮಾಡುವ ಕಾರ್ಯಕ್ಕೆ ಪ್ರಥಮ ಆದ್ಯತೆ ಆಗಲಿ.

ದೇಶದ ಸಹಕಾರಿ ಕ್ಷೇತ್ರ ಹಿಂದೆಂದೂ ಕಾಣರಿಯದ ತೊಂದರೆಗಳನ್ನು ಆದಾಯ ತೆರಿಗೆ ಇಲಾಖೆಯಿಂದ ಅನುಭವಿಸುತ್ತಿದೆ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳೇ ಅಲ್ಲ, ಸಹಕಾರ ಸಂಸ್ಥೆಗಳು ಸದಸ್ಯರಲ್ಲದವರೊಡನೆ ವ್ಯವಹರಿಸಿ ಲಾಭಗಳಿಸಿರುವುದು, ಸಹಕಾರಿ ಸಂಸ್ಥೆಗಳು ಡಿಮಾನಿಟೈಸೇಶನ್ ಅವಧಿಯಲ್ಲಿ ಅಮಾನ್ಯ ಮಾಡಿದ ನೋಟುಗಳನ್ನು ಸ್ವೀಕರಿಸಿರುವುದು, 269ಎಸ್‌ಎಸ್, 269ಟಿ, ಮೂಲದಲ್ಲಿ ತೆರಿಗೆ ಕಡಿತ ಹೀಗೆ ಹಲವು ಕಾರಣಗಳನ್ನು ನೀಡಿ ಸಹಕಾರ ಸಂಸ್ಥೆಗಳಿಗೆ ನೋಟೀಸು ನೀಡುತ್ತಿರುವುದು ಅತ್ಯಂತ ಕಳವಳಕಾರಿ ವಿಷಯ.

ಈ ಬಗ್ಗೆ ಸಹಕಾರಿ ಸಂಸ್ಥೆಗಳ ನಾಯಕರು ಎಚ್ಚೆತ್ತುಕೊಂಡು ಹೋರಾಟಗಳನ್ನು ಮಾಡುತ್ತಿರುವುದು, ಕೇಂದ್ರದ ನಾಯಕರುಗಳನ್ನು ಭೇಟಿ ಮಾಡಿ ಅವರಿಗೆ ಮನವರಿಕೆ ಮಾಡಿಕೊಡುತ್ತಿರುವುದು ಕೇಂದ್ರದವರು ಈ ಬಗ್ಗೆ ಹೆಚ್ಚಿನ ಆಸಕ್ತಿತೋರದಿರುವುದು ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಹಿನ್ನಡೆಯಾಗುವುದರ ಸ್ಪಷ್ಟ ಸೂಚನೆಯಾಗಿದೆ. ಸಹಕಾರ ಕ್ಷೇತ್ರ ವ್ಯಾಪಾರ ಮಾಡುವ ವಾಣಿಜ್ಯ ಸಂಸ್ಥೆಗಳಲ್ಲ, ಸರಕಾರದ ಹಲವಾರು ಕಾಯ್ದೆ ಕಾಲಂಗಳನ್ನೂ ಕಾರ್ಯಗತ ಮಾಡುವ, ಜನಸಮುದಾಯದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುವ ಮತ್ತು ಜನ ಸಾಮಾನ್ಯರ ಹಿತರಕ್ಷಣೆಗಾಗಿ ಕಾರ್ಯನಿರ್ವಹಿಸುವ ಕ್ಷೇತ್ರ ಎಂಬುದನ್ನೇ ಕೇಂದ್ರ ಸರಕಾರ ಮರೆತಂತಿದೆ. ಸಹಕಾರ ತತ್ವಗಳ, ಸಹಕಾರ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಸಂಪೂರ್ಣ ಮಾಹಿತಿ ಇರದಿರುವವರು, ಸಹಕಾರ ಸಂಸ್ಥೆಗಳ ಕಾರ್ಯಾಚರಣೆಯ ಬಗ್ಗೆ ಅಸಮಾಧಾನವಿರುವವರು, ಕೇಂದ್ರದ ಹಾಗೂ ತೆರಿಗೆ ಇಲಾಖೆಯ ಉನ್ನತ ಮಟ್ಟದಲ್ಲಿರುವುದರಿಂದ ಈ ಸಮಸ್ಯೆಗಳ ಬಗ್ಗೆ ಅವರುಗಳಿಗೆ ಪೂರ್ಣ ವಿವರಗಳನ್ನು ಮನಮುಟ್ಟುವಂತೆ ವಿವರಿಸಿ ಸಹಕಾರ ಸಂಸ್ಥೆಗಳು ಪರಿಹಾರ ಕಂಡುಕೊಳ್ಳುವುದು ಇಂದಿನ ಅಗತ್ಯತೆ. ಈ ನಿಟ್ಟಿನಲ್ಲಿ ದಿನಾಂಕ 30.12.2019ರಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದಲ್ಲಿ ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳ ಸಭೆಯಲ್ಲಿ ಒಕ್ಕೊರಲಿನಿಂದ ಈ ಬಗ್ಗೆ ಉಗ್ರ ಪ್ರತಿಭಟನೆಯನ್ನು ಸಹ ಮಾಡುವ ಅವಶ್ಯಕತೆಯ ಬಗ್ಗೆ ಚರ್ಚೆಯಾಗಿರುವುದು ಸಮಸ್ಯೆಯ ಗಂಭೀರತೆಯನ್ನು ವಿವರಿಸುತ್ತದೆ.

ತಾತ್ವಿಕ, ಸಾಂಕೇತಿಕ ಹಾಗು ಪ್ರದರ್ಶನದ ಹೋರಾಟಗಳಿಂದ ಪ್ರಯೋಜನವಾಗುವುದಿಲ್ಲ. ಸಹಕಾರ ಕ್ಷೇತ್ರದ ವಿರಾಟ ಸ್ವರೂಪದ ಶಕ್ತಿ ಪರಿಚಯಿಸುವ ಮತ್ತು ಸಹಕಾರಿ ಸೈದ್ಧಾಂತಿಕ ವೈಚಾರಿಕತೆಯನ್ನು ಬಿಂಬಿಸುವ ಮತ್ತು ಸಂಬಂಧಿಸಿದ ವ್ಯಕ್ತಿಗಳ ಮಾನಸಿಕತೆಯನ್ನು ಬದಲಿಸುವ ನಿಟ್ಟಿನಲ್ಲಿ ಹೋರಾಟವಾಗಬೇಕು. ಸಹಕಾರಿ ನಾಯಕರುಗಳು ಒಂದಾಗಿ ರಾಷ್ಟ್ರದಾದ್ಯಂತ ಜನಪ್ರತಿನಿಧಿಗಳಿಗೆ ಈ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಅವರನ್ನು ಈ ನಾಯಕರುಗಳು ತಮ್ಮ ಜೊತೆಗೆ ಕರೆದುಕೊಂಡು ಸಂಬಂಧಿಸಿದವರ ಜೊತೆಗೆ ಚರ್ಚಿಸಿ ಸ್ಪಂದಿಸುವಂತೆ ಮನವೊಲಿಸುವ ಕಾರ್ಯವಾಗಬೇಕಿದೆ. ಈ ನಿಟ್ಟಿನಲ್ಲಿ ಸಹಕಾರಿಗಳು ಎಚ್ಚೆತ್ತುಕೊಂಡು ಸಹಕಾರಿ ಕ್ಷೇತ್ರಕ್ಕೆ ಬಂದಿರುವ ಈ ಗಂಡಾಂತರದಿಂದ ಮುಕ್ತಿ ಹೊಂದಬೇಕಿದೆ.

# ಜ್ಞಾನ ಜ್ಯೋತಿ



ಎಂ .ಬಸಪ್ಪ, ಸಹಕಾರ ಸಂಘಗಳ ನಿವೃತ್ತ ಉಪನಿಬಂಧಕರು, ಬೆಂಗಳೂರು.

## "ಹುದ್ದೆಯ ಆಡಂಬರಕ್ಕಿಂತ ಕರ್ತವ್ಯ ನಿರ್ವಹಣಾ ಉತ್ಕೃಷ್ಟತೆಗೆ ಆದ್ಯತೆ"

ವಿಶ್ವದ ಆಧ್ಯಾತ್ಮಿಕ ಭೂಪಟದಲ್ಲಿ ಭಾರತಕ್ಕೆ ಅಗ್ರಸ್ಥಾನವಿದೆ ಎಂಬ ಅಂಶ ಸರ್ವವಿಧಿತ. ಹಿಂದಿನ ಋಷಿಮುನಿಗಳಿಗೆ ಸಂತರು, ಚಿಂತನಶೀಲರುಗಳೂ ಭೌತಿಕ ಜೀವನ ನಡೆಸುತ್ತಲೇ ಆಧ್ಯಾತ್ಮ ಜೀವನದ ಉತ್ತುಂಗಕ್ಕೆ ಬಂದವರಾಗಿದ್ದರು. ಆತ್ಮ ಸ್ಥಿತಿಯ ಅನುಭವ, ಬದುಕಿನ ಅಂತಿಮ ಗುರಿಗಳ ಆಳವಾದ ಅರಿವಿದ್ದವರಾಗಿದ್ದ ಅವರುಗಳು ತಮ್ಮ ಕರ್ತವ್ಯಗಳ ಶ್ರೇಷ್ಠತೆಗೆ ಒತ್ತು ಕೊಟ್ಟವರೇ ಹೊರತು ಅಬ್ಬರ ಅಡಂಬರ, ಗತ್ತು ಗಮ್ಮತ್ತುಗಳಿಗೆ ಪ್ರಾಮುಖ್ಯತೆ ನೀಡಿದವರಲ್ಲವೆಂಬುದರ ದ್ಯೋತಕವಾಗಿಯೇ ರಾಮಾಯಣದ ರಾಮಭರತರ ರಾಜ್ಯ ಭಾರ ಹಸ್ತಾಂತರ ನಿರ್ವಹಣಾ ಗುಣಮಟ್ಟಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಪದ್ಯವನ್ನು ಆಧ್ಯಾತ್ಮರವ ಡಿವಿಜಿ ಯವರು ನೀಡುತ್ತ ಇಂದಿನ ಬಗುಮಾನದ ನಮಗೆ ವರ್ತನಾ ಪರಿವರ್ತನೆಯನ್ನು ತಂದುಕೊಳ್ಳಿರೆಂದು ಸೂಚ್ಯವಾಗಿ ನಿರ್ದೇಶಿಸಿರುತ್ತದೆ.

ಅರಸಡವಿಗೈದಿದೊಡಮ ಅವನಿತ್ತ ಪಾದುಕೆಗ  
ಳೊರೆಯದೊಡಮೇನನಂ ತಾಂ ವರದಿಯಾರೆದು  
ದೊರೆತನದ ಭಾರತನು ಹೊತ್ತು ದೊರೆಯಾಗದಾ  
ಭರತನ ವೊಲರು ನೀನು ॥ ಮಂಕುತಿಮ್ಮ॥

ಮಲತಾಯಿಯಾದ ಕೈಕೇಯಿಯನ್ನು ತಾಯಿಯೆಂದೇ ಪರಿಗಣಿಸಿದ್ದ ಶ್ರೀರಾಮನು ಪಿತೃವಾಕ್ಯ ಪರಿಪಾಲನೆಗಾಗಿ 14 ವರ್ಷಗಳ ವನವಾಸಕ್ಕೆ ತೆರಳಿದಾಗ ಭರತನಿಗೆ ರಾಜ್ಯಭಾರವಹಿಸಿದ ನಂತರ ಭರತನ ಕೋರಿಕೆಯ ಮೇರೆಗೆ ರಾಮನ ಪಾದುಕೆಗಳನ್ನು ಪಡೆದು ಅಂತಹ ಪಾದುಕೆಗಳನ್ನೇ ಸಿಂಹಾಸನದ ಮೇಲೆರಿಸಿ ರಾಮನ ಹೆಸರಿನಲ್ಲಿ ರಾಜ್ಯಭಾರವನ್ನು ಸ್ವಲ್ಪವೂ ಕುಂದು ಬಾರದಂತೆ ರಾಜ್ಯಭಾರ ಮಾಡಿ "ರಾಮರಾಜ್ಯಕ್ಕೆ ಭರತಖಂಡನೆಂಬ ಹೆಸರು ಬರಲು ಕಾರಣವಾಗುವಷ್ಟು ಶ್ರೇಷ್ಠಗುಣಮಟ್ಟದ ಆಡಳಿತವನ್ನು ನೀಡಿದ ಭರತನು ತಾನೆಂದು ರಾಜನೆಂಬ ಗರ್ವ ಗಮ್ಮತ್ತುಗಳನ್ನು ಪ್ರದರ್ಶಿಸದೇ ಶ್ರೀ ರಾಮನ ಪ್ರತಿನಿಧಿಯಾಗಿ ಆಳ್ವಿಕೆ ನಡೆಸಿದ ಅಂಶ ನಿಜಕ್ಕೂ ಹೆಗ್ಗಳಿಕೆಯದು, ಪ್ರಶಂಶನೀಯವಾದುದು. ದೊರೆತನದ ಎಲ್ಲ ಕರ್ತವ್ಯಗಳನ್ನು ಶ್ರೇಷ್ಠ ರೀತಿಯಲ್ಲಿ ನಿರ್ವಹಿಸಿದ ಭರತನು ರಾಜ್ಯ ತನದಲ್ಲವೆಂಬ ಆಂತರಿಕ ತ್ಯಾಗದ ಭಾರವನ್ನು ಸರ್ವತ್ರ ನಿರ್ವಹಿಸಿರುವುದು ಅದ್ವಿತಿಯವೆನಿಸಿದೆ.

ಇದಕ್ಕೆ ತದ್ವಿರುದ್ಧವಾಗಿ ಇಂದಿನ ನಾವುಗಳು ಕೇವಲ ಒಂದು ಸಣ್ಣ ಹುದ್ದೆ ದೊರತರೂ ಸಾಕು ಅದನ್ನು ಗುಣಮಟ್ಟದಲ್ಲಿ ನಿರ್ವಹಿಸುವವರಲ್ಲಿ ಅದಕ್ಕೆ ಸಂಬಂಧಿಸಿದ ಗತ್ತು ಗಾಣೆಯನ್ನು ಮೆರೆಯುವುದರಲ್ಲಿ ಅಥವಾ ಅಂತಹ ಹುದ್ದೆಗೆ ಸಂಬಂಧಿಸಿದ ಪ್ರತಿಫಲಗಳನ್ನು ಪಡೆಯುವುದರಲ್ಲೇ ಆಸಕ್ತಿ ತೋರಿಸುತ್ತೇನೆಂಬುದು ವಿಕ್ಷೀಸಬೇಕಾದ ಹಾಗೂ ಪರಿವರ್ತನೆಗೊಳ್ಳಬೇಕಾದ ಅಂಶ.

ಈ ಪದ್ಯವು ನಮಗೆಲ್ಲರಿಗೂ ನೀಡುತ್ತಿರುವ ಸಂದೇಶವೇನೆಂದರೆ ಈ ಜಗತ್ತಿಗೆ ಬಂದಿದ್ದೇವೆ. ಕೆಲವೇ ಕಾಲ ಇಲ್ಲಿರುತ್ತೇವೆ ಮತ್ತೆ ಜಗದತ್ಯಾಗ ಮಾಡಲೇ ಬೇಕಾದ ಕಾರಣ ನಮ್ಮ ನಮ್ಮಗಳ ಕರ್ತವ್ಯ ನಿರ್ವಹಣೆಯಲ್ಲಿ ಪಾವಿತ್ರ್ಯತೆಯನ್ನು ತರೋಣ, ಸ್ವಾರ್ಥ ಪರತೆಯನ್ನು ತೊರೆಯೋಣ. ಸಮಾಜದ ಎಲ್ಲ ವ್ಯಕ್ತಿಗಳನ್ನು ಸಹೋದರರಂತೆ ಕಾಣುತ್ತ ಸಹಕಾರ ಭಾರದಿಂದ ಅಭಿವೃದ್ಧಿಯತ್ತ ಸಾಗೋಣವೆಂಬುದೇ ಆಗಿದೆ. ಹಮ್ಮು ಬಮ್ಮುಗಳನ್ನು ತೊರೆಯೋಣ ಸತ್ಪ್ರಜ್ಞೆಗಳಾಗಿ ಇತರರನ್ನು ಸನ್ಮಾರ್ಗದತ್ತ ನಡೆಸೋಣವೆಂಬುದೇ ಈ ಪದ್ಯದ ಪರಮೋಚ್ಚ ಗುರಿಯಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ:–7,766, ಬೆಂಗಳೂರು:–1,806, ಮೈಸೂರು:–854 ಹಾಗೂ ಕಲಬುರಗಿ:–2003 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 12,429 ಆಗಿರುತ್ತದೆ. ಇವುಗಳ ಪೈಕಿ 5,866 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 6,563.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,134 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 216 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 146 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1772 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 993 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 88 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 80 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 825 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

# ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ನೇತೃತ್ವದಲ್ಲಿ ಹಾಗೂ ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ನಡೆದ ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ ಸೌಹಾರ್ದ ಸ್ಫೂರ್ತಿ - 2019 ಕಾರ್ಯಕ್ರಮ



**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ, ಇದರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಸಹಯೋಗದಲ್ಲಿ ರಾಜ್ಯದಲ್ಲೇ ಪ್ರಥಮ ಬಾರಿಗೆ ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ "ಸೌಹಾರ್ದ ಸ್ಫೂರ್ತಿ–2019" ಕಾರ್ಯಕ್ರಮವು ಸೌಹಾರ್ದ ಇತಿಹಾಸದಲ್ಲಿ ಮೊತ್ತ ಮೊದಲ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮವು ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಹಂಗಾರಕಟ್ಟೆ 'ಚೇತನಾ ಹೈಸ್ಕೂಲ್ ಕ್ರೀಡಾಂಗಣ'ದಲ್ಲಿ ದಿನಾಂಕ 21ನೇ ಡಿಸೆಂಬರ್ 2019 ರಂದು ನಡೆಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ 115 ಸೌಹಾರ್ದ ಸಹಕಾರಿಗಳಿಂದ 1500ಕ್ಕೂ ಅಧಿಕ ಸಹಕಾರಿಗಳು ಭಾಗವಹಿಸಿದ್ದರು. ಮೊದಲಿಗೆ ಈ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಲು ಕಾಪು, ಉಡುಪಿ, ಬ್ರಹ್ಮಾವರ, ಬೈಂದೂರು, ಹೆಬ್ರಿ, ಕಾರ್ಕಳ, ಕುಂದಾಪುರ ಈ ತಾಲ್ಲೂಕುಗಳನ್ನು 7 ವಲಯಗಳನ್ನಾಗಿ ರಚಿಸಿ ಸಹಕಾರಿಯ 7 ಬಣ್ಣಗಳ ಸಮವಸ್ತ್ರ ಧರಿಸಿ, ಸಹಕಾರಿಯ ಧ್ವಜ ಹಿಡಿದು ಪಥ ಸಂಚಲನ ಅತ್ಯಂತ ಶಿಸ್ತು ಬದ್ಧವಾಗಿ ನಡೆಯಿತು. ಈ ಪಥ ಸಂಚಲನದ ಮುಖ್ಯ ಪಥವಾಗಿ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಯ ನಿರ್ದೇಶಕರೊಂದಿಗೆ ಮುಖ್ಯಕಾರ್ಯನಿರ್ವಹಣಾಧಿಕಾರಿ ಭುವನೇಶ್ ಪ್ರಭು ಮೊದಲ ಪಥದಲ್ಲಿದ್ದರು. ಕ್ರೀಡೋತ್ಸವದ ಚಾಲನೆಯನ್ನು ಬಲೂನು ಹಾರಿಸುವ ಮೂಲಕ ಉಡುಪಿ ವಿಧಾನ ಸಭಾಕ್ಷೇತ್ರದ ಶಾಸಕರಾದ ಶ್ರೀ ರಘುಪತಿ ಭಟ್ ಚಾಲನೆ ನೀಡಿದರು. ನಂತರ ಅವರು ಮಾತನಾಡಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಅತ್ಯಂತ ಖುಷಿಯ ವಿಚಾರ ಇದಕ್ಕಾಗಿ ಒಕ್ಕೂಟಕ್ಕೆ ಮೊದಲನೆದಾಗಿ ವಂದನೆಯನ್ನು ಸಲ್ಲಿಸುತ್ತೇವೆ ಎಂದರು. ಜೊತೆಗೆ ಪ್ರತಿ ದಿನವೂ ಕಂಪ್ಯೂಟರ್ ಮೂಲಕ ಸದಸ್ಯರಿಗೆ ದೈನಂದಿನ ಬ್ಯಾಂಕಿಂಗ್ ವ್ಯವಹಾರವನ್ನು ನೀಡುತ್ತಿರುವ ಕೈಗಳಿಗೆ ಇಂದು ಕ್ರೀಡೆಯ ಮೆರುಗು ನೀಡಿರುವುದು ಸಂತೋಷವೆನಿಸಿದೆ ಎಂದರು. ಕ್ರೀಡಾ ಜ್ಯೋತಿ ಪ್ರಜ್ವಲನೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಜಗದೀಶ್ ಕಾರಂತ್ ಇವರು ನೆರವೇರಿಸಿದರು, ಅಧ್ಯಕ್ಷೀಯ ಭಾಷಣ ಮಾಡಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ಮಾತನಾಡಿ ಸೌಹಾರ್ದ ಇತಿಹಾಸದಲ್ಲಿ ಮೊತ್ತ ಮೊದಲ ಐತಿಹಾಸಿಕ ಕಾರ್ಯಕ್ರಮವನ್ನು ನಡೆಸಿರುವ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟಕ್ಕೆ ಅಭಿನಂದನೆ ಸಲ್ಲಿಸಿದರು. ಜೊತೆಗೆ ಇಂತಹ ಕಾರ್ಯಕ್ರಮವನ್ನು ರಾಜ್ಯದ ಎಲ್ಲೆಡೆ ಜಿಲ್ಲಾ ಮಟ್ಟದಲ್ಲಿ ನಡೆಸಲು ಈ ಬಾರಿಯ ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಎಲ್ಲೆಡೆ ಅನುಷ್ಠಾನ ನಡೆಸುವಂತೆ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ಈ ಸಂದರ್ಭ ಕಾರ್ಯಕ್ರಮದಲ್ಲಿ ಮಹಾಲಕ್ಷ್ಮಿ ಕೋ– ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರಾದ ಯಶ್‌ಪಾಲ್ ಎ. ಸುವರ್ಣ, ವಿಶ್ವಕರ್ಮ ಕೋ– ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರಾದ ಹರೀಶ್ ಆಚಾರ್ಯ, ಚೇತನಾ ಪ್ರೌಢ ಶಾಲೆಯ ಅಧ್ಯಕ್ಷರಾದ ಭರತ್ ಕುಮಾರ್, ಒಕ್ಕೂಟದ ಅಧ್ಯಕ್ಷರಾದ ಎಸ್. ಕೆ ಮಂಜುನಾಥ್, ಉಪಾಧ್ಯಕ್ಷರಾದ ಬಿ. ಮಧುಸೂದನ್ ನಾಯಕ್, ಮುಖ್ಯಕಾರ್ಯನಿರ್ವಹಣಾಧಿಕಾರಿ ಭುವನೇಶ್ ಪ್ರಭು, ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ. ಪಾಟೀಲ, ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸುರೇಶ್ ರೈ, ಸಿ.ಎ. ಗಿರೀಶ್ ಪೈ. ಬಿ, ಐರೋಡಿ ಪಂಚಾಯತ್ ಅಧ್ಯಕ್ಷರಾದ ಶ್ರೀ ಮೋಸೆಸ್ ರೋಡ್ರಿಗಸ್ ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇದರ ಮಾಜಿ ಅಧ್ಯಕ್ಷರು ಕ್ಯಾಂಪ್ಕೋ ಲಿ.ನ ಅಧ್ಯಕ್ಷರಾದ ಎಸ್. ಆರ್. ಸತೀಶ್ಚಂದ್ರ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಿ, ಮಂಗಳೂರು ಇದರ ಅಧ್ಯಕ್ಷರಾದ ಶ್ರೀ ಎಮ್.ಎನ್ ರಾಜೇಂದ್ರಕುಮಾರ್, ದಕ್ಷಿಣ ಕನ್ನಡ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷರಾದ ರವಿರಾಜ್ ಹೆಗ್ಡೆ ಇವರುಗಳು ಉಪಸ್ಥಿತರಿದ್ದರು. ಎಮ್.ಎನ್ ರಾಜೇಂದ್ರ ಕುಮಾರ್ ಇವರು ಕ್ರೀಡೆಯ ಪ್ರಾಂಗಣದಲ್ಲಿ ತೆರಳಿ ಆಟಗಾರರ ಜೊತೆಗೆ ಸೇರಿ ಆಟಗಾರರನ್ನು ಹುರಿದುಂಬಿಸಿದರು.

## ಸಮಾರೋಪ ಸಮಾರಂಭ

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಮಂಜುನಾಥ್ ಎಸ್.ಕೆ ಇವರು ಮಾತನಾಡಿ ಸೌಹಾರ್ದ ಇತಿಹಾಸವನ್ನು ಕ್ರೀಡೆಯ ಮೂಲಕ ಜನರನ್ನು ತಲುಪುವ ಕೆಲಸವಾಗಿದೆ ಜೊತೆಗೆ ಒಂದು ದಿನದ ಕ್ರೀಡಾಸ್ಫೂರ್ತಿ ಜೀವನದಲ್ಲಿ ಬೆಳಗಿಸುವಂತಾಗಲಿ ಎಂದರು. ಈ ಸಂದರ್ಭ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಮಂಗಳೂರು ಇದರ ನಿರ್ದೇಶಕರಾದ ರಾಜು ಪೂಜಾರಿ, ಒಕ್ಕೂಟದ ನಿರ್ದೇಶಕರುಗಳಾದ ಬಿ. ಮಧುಸೂದನ ನಾಯಕ್, ಬೋಳ ಸದಾಶಿವ ಶೆಟ್ಟಿ, ಭಾಸ್ಕರ್ ಕಾಮತ್, ವಿನಾಯಕ್ ರಾವ್, ನಾಗರಾಜ್, ಗಿರೀಶ್ ಪೈ ಬಿ., ವಿಜಯ ಕೆ., ಸುಧೀಶ್ ನಾಯಕ್, ರಮೇಶ್ ದೇವಾಡಿಗ,

ಸುಧಾಕರ ಮೂಳೂರು, ವಿವೇಕ್ ಯು., ಶಿರಿಯಾರ ಪ್ರಭಾಕರ ನಾಯಕ್, ಮೋಹನ್ ಉಪಾಧ್ಯ, ಬಿ.ಎಚ್ ಶೆಟ್ಟಿಗಾರ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಭುವನೇಶ್ ಪ್ರಭು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಕಾಂತ್ ಸಾಮಗ ಮತ್ತು ಅಭಿಷೇಕ್ ಇಬ್ಬರು ನೆರವೇರಿಸಿದರು. ಈ ಕ್ರೀಡಾಕೂಟದಲ್ಲಿ ಉಡುಪಿ ಜಿಲ್ಲೆಯ 115 ಸೌಹಾರ್ದ ಸಹಕಾರಿಗಳಿಂದ 400ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.



ಸೌಹಾರ್ದ ಸಹಕಾರಿಯ ಸಿಬ್ಬಂದಿಯವರ ಜೊತೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷ ಡಾ. ಎಂ.ಎನ್ ರಾಜೇಂದ್ರಕುಮಾರ್



ಪಥಸಂಚಲನದಲ್ಲಿ ಸೌಹಾರ್ದ ಸಹಾರಿಯ ಸಿಬ್ಬಂದಿಯವರಿಂದ ವಂದನೆ ಸ್ವೀಕರಿಸುತ್ತಿರುವ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು



ಹಗ್ಗ ಜಗ್ಗಾಟ ತೊಡಗಿರುವ ಪುರುಷ ಸಿಬ್ಬಂದಿಯವರು



ವೇಗದ ಓಟದ ಸ್ಪರ್ಧೆಯಲ್ಲಿ ಮಹಿಳಾ ಸಿಬ್ಬಂದಿಯವರು

## ಪತ್ರಿಕಾ ಗೋಷ್ಠಿ




**ಉಡುಪಿ:** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಆಶ್ರಯದಲ್ಲಿ ದಿನಾಂಕ 21.12.2019ರಂದು ನಡೆಯಲಿರುವ ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ ಸೌಹಾರ್ದ ಸ್ಪೂರ್ತಿ – 2019ರ ಕುರಿತು ದಿನಾಂಕ 20.12.2019ರಂದು ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಪತ್ರಿಕಾ ಗೋಷ್ಠಿ ಕಾರ್ಯಕ್ರಮ ನಡೆಯಿತು.

## ಮೈಸೂರು ಪ್ರಾಂತೀಯ ಕಛೇರಿಗೆ ನಿವೇಶನ ಖರೀದಿ



**ಮೈಸೂರು:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿಗೆ ವಿಶ್ವೇಶ್ವರ ನಗರದಲ್ಲಿ 5000 ಚದರ ಅಡಿಯ (50*100) ನಿವೇಶನವನ್ನು ಖರೀದಿಸಿ ದಿನಾಂಕ 03.01.2020ರಂದು ನೋಂದಾಯಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ವಾಗ್ದೇವಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ನವೀನ್ ರವರು ಉಪಸ್ಥಿತರಿದ್ದರು.

# ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ನೇತೃತ್ವದಲ್ಲಿ ಹಾಗೂ ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ನಡೆದ ಸೌಹಾರ್ದ ಸಹಕಾರಿಗಳ ಬೃಹತ್ ಸೌಹಾರ್ದ ಸಮಾವೇಶ - 2020 ಕಾರ್ಯಕ್ರಮ



**ದಕ್ಷಿಣ ಕನ್ನಡ** : ಸೌಹಾರ್ದ ದಿನಾಚರಣೆಯ ಅಂಗವಾಗಿ ದಿನಾಂಕ 01.01.2020ರಂದು ಮಂಗಳೂರಿನ ಪುರಭವನದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಯ ಆಶ್ರಯದಲ್ಲಿ ನಡೆದ ಜಿಲ್ಲಾ ಸೌಹಾರ್ದ ಸಹಕಾರಿಗಳ ಬೃಹತ್ ಸಮಾವೇಶವನ್ನು ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ಒಡಿಯೂರು ಕ್ಷೇತ್ರದ ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ ಇವರು ಉದ್ಘಾಟಿಸಿ ಮಾತನಾಡಿದರು. ಕರಾವಳಿ ಭಾಗದಲ್ಲಿ ಸಹಕಾರಿ ಕ್ಷೇತ್ರ ಉತ್ತಮವಾಗಿ ಬೆಳೆದಿದೆ. ಈ ಭಾಗದಲ್ಲಿ ಸಹಕಾರ ಎಂಬುದು ಜನರ ಬದುಕಿನ ತತ್ವವೇ ಆಗಿದೆ. ಅದರಲ್ಲಿ ಸೌಹಾರ್ದತೆ ಇರಬೇಕು. ಸಹಕಾರಿ ಕ್ಷೇತ್ರದಲ್ಲಿ ಪರಸ್ಪರ ಸಹಕರಿಸುವ ಮನೋಭಾವವಿದೆ. ಇಲ್ಲಿ ಸಾಮಾಜಿಕ ಬದ್ಧತೆ ಇರುವ ಸಹಕಾರಿ ಪ್ರಮುಖರಿಂದ ಕ್ಷೇತ್ರ ಉತ್ತಮವಾಗಿ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎ. ಸುರೇಶ್ ರೈ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರನ್ನು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಂಗಳೂರಿನ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರ ಇವರು ರಾಜ್ಯದಲ್ಲಿ ಸೌಹಾರ್ದ ಕಾಯ್ದೆಯ ಜಾರಿಯ ಹಿನ್ನೆಲೆ ಮತ್ತು ಆಶಯದ ಕುರಿತು ಬೆಳಕು ಚೆಲ್ಲಿದರು. ದೇಶದಲ್ಲಿ ಸಹಕಾರ ಕ್ಷೇತ್ರದ ಕುರಿತಾದ ರಾಷ್ಟ್ರೀಯ ನೀತಿ ರೂಪಿಸಬೇಕು. ವಿಧಾನಪರಿಷತ್‌ಗಳ ನಾಮನಿರ್ದೇಶನದ ಸಂದರ್ಭದಲ್ಲಿ ಸಹಕಾರ ಕ್ಷೇತ್ರಕ್ಕೂ ಪ್ರಾತಿನಿಧ್ಯ ಸಿಗುವಂತಾಗಬೇಕು. ಈ ಮೂಲಕ ಸಹಕಾರ ಕ್ಷೇತ್ರದ ಸಮಸ್ಯೆಗಳನ್ನು ಚರ್ಚಿಸಲು ಅವಕಾಶವಂತಾಗಬೇಕೆಂದು ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದದ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಮಾನ್ಯ ಮುಜರಾಯಿ ಮತ್ತು ಬಂದರು ಹಾಗೂ ಒಳನಾಡು ಸಚಿವ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಸಹಕಾರ ಕ್ಷೇತ್ರವನ್ನು ಬಲಪಡಿಸಲು ಸರ್ಕಾರ ಬದ್ಧವಾಗಿದೆ. ಸಹಕಾರಿ ಕಾಯ್ದೆಯಲ್ಲಿ ತಿದ್ದುಪಡಿ ಮಾಡಬೇಕೆಂಬ ಬೇಡಿಕೆಯನ್ನು ಸಹಕಾರಿ ಸಚಿವರ ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಮುಂದಿನ ಅಧಿವೇಶನದಲ್ಲಿ ಮಂಡಿಸಲು ವಿನಂತಿಸಲಾಗುವುದು ಎಂದು ತಿಳಿಸಿದರು. ಸಹಕಾರಿ ಸಂಘಗಳಿಂದ ಬಡವರ ಅಭ್ಯುದಯ, ಗ್ರಾಮಗಳ ಅಭಿವೃದ್ಧಿ ಹಾಗೂ ದೇಶದ ಆರ್ಥಿಕ ಪ್ರಗತಿ ಸಾಧ್ಯವಾಗಿದೆ. ಎಲ್ಲೆಡೆ ವಿಸ್ತರಿಸಿರುವ ಸಹಕಾರಿ ಕ್ಷೇತ್ರಕ್ಕೆ ರಾಷ್ಟ್ರೀಯ ಸಹಕಾರಿ ನೀತಿ ಜಾರಿ ಅವಶ್ಯವಾಗಿದ್ದು, ರಾಜ್ಯ ಸರ್ಕಾರ ಪೂರ್ಣ ಬೆಂಬಲ ನೀಡಲಿದೆ. ವಿಧಾನ ಪರಿಷತ್‌ನಲ್ಲಿ ಸಹಕಾರಿ ಕ್ಷೇತ್ರಕ್ಕೂ ಆದ್ಯತೆ ನೀಡಬೇಕೆಂಬ ಬೇಡಿಕೆ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು.

ನಂತರದಲ್ಲಿ ವೇದಿಕೆಯಲ್ಲಿದ್ದ ಗಣ್ಯರು ಸಂಯುಕ್ತ ಸಹಕಾರಿಯ 2020ರ ಡೈರಿ, ಟೇಬಲ್ ಕ್ಯಾಲೆಂಡರ್ ಮತ್ತು ಕ್ಯಾಲೆಂಡರ್ ಹಾಗೂ ಸಮಾವೇಶದ ಕುರಿತಾದ ಸ್ಮರಣ ಸಂಚಿಕೆಗಳನ್ನು ಅನಾವರಣಗೊಳಿಸಿದರು.

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರಕುಮಾರ್ ಕೋ–ಸಿಬಿಲ್ ತಂತ್ರಾಂಶ ಅನಾವರಣಗೊಳಿಸಿದರು. ಗ್ರಾಹಕರು ಮನೆಯಲ್ಲೇ ಬ್ಯಾಂಕ್ ಖಾತೆ ನಿರ್ವಹಿಸುವ ಈ ಕಾಲಘಟ್ಟದಲ್ಲಿ ಸಹಕಾರಿ ಸಂಘಗಳೂ ತಂತ್ರಜ್ಞಾನ ಅಳವಡಿಸಿಕೊಳ್ಳುವುದು ಅಗತ್ಯ. ಈ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿ ಅಳವಡಿಸಿರುವ ಕೋ–ಸಿಬಿಲ್ ತಂತ್ರಾಂಶ ಉತ್ತಮ ಯೋಜನೆಯಾಗಿದೆ ಎಂದು ಅವರು ಪ್ರಶಂಶಿಸಿದರು. ಸಹಕಾರಿ ಸಂಸ್ಥೆಗಳು ಪಾರದರ್ಶಕವಾಗಿ ಕಾರ್ಯ ನಿರ್ವಹಿಸಿದ ಕಾರಣ ಸದೃಢವಾಗಿ ಬೆಳೆದು ನಿಂತಿವೆ. ಸೌಹಾರ್ದ ಸಹಕಾರಿ ವ್ಯವಸ್ಥೆ ಬಗ್ಗೆಯೂ ಜನರಲ್ಲಿ ವಿಶ್ವಾಸ ಮೂಡಿದ ಪರಿಣಾಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ 101 ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವಾಣಿಜ್ಯ ಬ್ಯಾಂಕ್‌ಗಳು ಬಡ್ಡಿಗೆ ಬಡ್ಡಿ ವಿಧಿಸಿದರೂ ನಾವು ಪ್ರಶ್ನಿಸುವ ಸ್ಥಿತಿ ಇಲ್ಲ. ಸಹಕಾರಿ ಸಂಸ್ಥೆಗಳು ಈ ರೀತಿ ಬಡ್ಡಿ ವಿಧಿಸುವುದಿಲ್ಲ. ಇಂತಹ ವಿಚಾರಗಳ ಬಗ್ಗೆ ಸಮಾವೇಶದ ಮೂಲಕ ಸಹಕಾರಿಗಳಲ್ಲಿ ಅರಿವು ಮೂಡಿಸಬೇಕು ಎಂದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಚ್. ಕೃಷ್ಣಾರೆಡ್ಡಿ ಇವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉತ್ತಮ ಸೌಹಾರ್ದ ಸಹಕಾರಿಯಾಗಿ ಆಯ್ಕೆಯಾದ ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡಬಿದಿರೆ, ಕಾಂಚನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕುಳಾಯಿ, ಶ್ರೀ ಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿ ನಿ., ಮಂಗಳೂರು, ಮಹಿಳಾನಿಧಿ ಸೌಹಾರ್ದ ಸಹಕಾರಿ ನಿ., ದೇರಳಕಟ್ಟೆ, ಸ್ವಾಭಿಮಾನಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಇದರ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳನ್ನು ಸನ್ಮಾನಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಯಶಸ್ವಿಯಾಗಿ ಸಮಾವೇಶವನ್ನು ಆಯೋಜಿಸಿರುವ ಜಿಲ್ಲಾ ಒಕ್ಕೂಟದ ನಿರ್ದೇಶಕರು ಮತ್ತು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪ್ರಯತ್ನವನ್ನು ಶ್ಲಾಘಿಸಿದರು. ಸೌಹಾರ್ದ ಸಹಕಾರಿಗಳು ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುತ್ತಿವೆ. ಸೌಹಾರ್ದ ಸಹಕಾರ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದೇವೆ. ಮುಂದಿನ ದಿನಗಳಲ್ಲಿ ನಮ್ಮೆಲ್ಲ ಸಮಸ್ಯೆಗೆ ಪರಿಹಾರ ಸಿಗಲಿದೆ. ಈ ನಿಟ್ಟಿನಲ್ಲಿ ನಾವು ಒಗ್ಗಟ್ಟಾಗಿ ಇರುವ ಅವಶ್ಯಕತೆ ಇದೆ ಎಂದು ತಿಳಿಸಿದರು.

ಸಮಾವೇಶದ ಅಂಗವಾಗಿ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಆಯೋಜಿಸಿರುವ ಪ್ರಬಂಧ ಮತ್ತು ರಸಪ್ರಶ್ನೆ ಸ್ಪರ್ಧೆಯ ಬಹುಮಾನವನ್ನು ನೀಡುವ ಕಾರ್ಯಕ್ರಮವನ್ನು ಮಾಜಿ ಶಾಸಕಿ ಶ್ರೀಮತಿ ಶಕುಂತಳಾ ಟಿ. ಶೆಟ್ಟಿ ಇವರು

ನೇರವೇರಿಸಿದರು. ಸಮಾವೇಶದಲ್ಲಿ ಭಾಗವಹಿಸಿದ ಸೌಹಾರ್ದ ಸಹಕಾರಿಗಳಿಗೆ ಗೌರವ ಸ್ಮರಣಿಕೆಯನ್ನು ನೀಡುವ ಕಾರ್ಯಕ್ರಮವನ್ನು ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಪ್ರವೀಣ್ ನಾಯಕ್ ಇವರು ನೇರವೇರಿಸಿದರು. ಇಲಾಖೆ ಮಟ್ಟದಲ್ಲಿ ಸೌಹಾರ್ದ ಸಹಕಾರಿಗಳ ಕೆಲಸ ಕಾರ್ಯವನ್ನು ಮಾಡಲು ಬದ್ಧರಿರುವುದಾಗಿ ತಿಳಿಸಿದರು.

ಸಂಸದರಾದ ಶ್ರೀ ನಳಿನ್‌ಕುಮಾರ್ ಕಟೀಲ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಐವನ್ ಡಿಸೋಜ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ, ದಕ್ಷಿಣ ಕನ್ನಡ ಜಿಲ್ಲಾ ಹಾಲು ಒಕ್ಕೂಟ ಅಧ್ಯಕ್ಷ ರವಿರಾಜ ಹೆಗ್ಡೆ ಕೊಡವೂರು, ಎಸ್‌ಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ವಿನಯಕುಮಾರ್ ಸೂರಿಂಜೆ ಭಾಗವಹಿಸಿದ್ದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ.ಉಗ್ಗಪ್ಪ ಶೆಟ್ಟಿ, ನಿರ್ದೇಶಕರಾದ ಶ್ರೀ ನಾರಾಯಣ ಶೆಟ್ಟಿ, ಶ್ರೀ ಲ್ಯಾನ್ಸಿ ಎ.ಪಿರೇರ, ಶ್ರೀ ಮೋಹನ ಪ್ರಭು, ಶ್ರೀ ನವೀನ್ ಶೆಟ್ಟಿ, ಶ್ರೀಮತಿ ಭಾರತಿ ಜಿ.ಭಟ್, ಶ್ರೀಮತಿ ಸುಮನಾ ಶರಣ್, ಶ್ರೀ ದೇವಿಪ್ರಸಾದ್ ಕೆ, ಶ್ರೀ ನಾರಾಯಣ ಕೆ.ಆರ್, ಶ್ರೀ ಎಸ್.ಸತೀಶ್ ನಾಯಕ್, ಶ್ರೀ ವಲ್ಲರಾಜ್, ಶ್ರೀ ಗಣೇಶ್ ಶೆಣೈ ಶ್ರೀ ಎಂ, ವಾಸುದೇವ ಭಟ್, ಶ್ರೀಮತಿ ರೇವತಿ ಅಶೋಕ್, ಶ್ರೀ ಭಾಸ್ಕರ ದೇವಸ್ಯ ಉಪಸ್ಥಿತರಿದ್ದರು. ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿ ಉಪಾಧ್ಯಕ್ಷ ಶ್ರೀ ಜಿ.ಆರ್.ಪ್ರಸಾದ್ ವಂದನಾರ್ಪಣೆಗೈದರು. ಶ್ರೀ ಉಮೇಶ್ ದಂಡಕೇರಿ ಇವರು ಕಾರ್ಯಕ್ರಮ ನಿರೂಪಿಸಿದರು.

## ಸಹಕಾರಿ ಸಂಸ್ಥೆಗಳ ಆದಾಯ ತೆರಿಗೆ ಸಮಸ್ಯೆಗಳ ನಿವಾರಣೆಗಾಗಿ ರಾಜ್ಯದಾದ್ಯಂತ ಹೋರಾಟಕ್ಕೆ ಸಿದ್ಧತೆ. ರಾಜ್ಯದ ಸಂಸದರೊಂದಿಗೆ ಕೇಂದ್ರ ಹಣಕಾಸು ಸಚಿವರಲ್ಲಿ ನಿಯೋಗ ಹೋಗಲು ನಿರ್ಧಾರ




**ಬೆಂಗಳೂರು:** ರಾಜ್ಯದ ಸಹಕಾರ ಮಹಾಮಂಡಳ ಹಾಗೂ ಸಂಯುಕ್ತ ಸಹಕಾರಿಯ ಜಂಟಿ ಆಶ್ರಯದಲ್ಲಿ ಹಿರಿಯ ಸಹಕಾರಿಗಳ ಸಮಾಲೋಚನೆ ಸಭೆಯು ದಿನಾಂಕ 30-12-2019 ರಂದು ರಾಜ್ಯ ಸಹಕಾರ ಮಹಾಮಂಡಳದಲ್ಲಿ ಮಹಾಮಂಡಳದ ಅಧ್ಯಕ್ಷ ಶ್ರೀ ಎನ್. ಗಂಗಣ್ಣರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು, ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷ ಶ್ರೀ ಎಮ್.ಎನ್. ರಾಜೇಂದ್ರಕುಮಾರ, ವಿಜಯಪುರ ಜಿಲ್ಲಾ ಸಹಕಾರ ಬ್ಯಾಂಕ ಅಧ್ಯಕ್ಷ ಹಾಗು ಮಾಜಿ ಸಚಿವ ಶ್ರೀ ಶಿವಾನಂದ ಪಾಟೀಲ್, ಬಾಗಲಕೋಟ ಜಿಲ್ಲಾ ಸಹಕಾರ ಬ್ಯಾಂಕ ಅಧ್ಯಕ್ಷ ಹಾಗು ಮಾಜಿ ಸಚಿವ ಶ್ರೀ ಅಜಯಕುಮಾರ ಸರ್ ನಾಯಕ, ಕ್ರೆಡಿಟ್ ಸಹಕಾರ ಮಹಾಮಂಡಳದ ಉಪಾಧ್ಯಕ್ಷ ಶ್ರೀ ಭೂಕಾಂತ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಜಫರುಲ್ಲಾಖಾನ ಮುಂತಾದವರು ವೇದಿಕೆಯಲ್ಲಿದ್ದರು.

ಪ್ರಾರಂಭದಲ್ಲಿ ಮಹಾಮಂಡಳದ ಅಧ್ಯಕ್ಷ ಶ್ರೀ ಗಂಗಣ್ಣ ನವರು ಗಣ್ಯರನ್ನು ಹಾಗೂ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಚಾರ್ಟರ್ಡ ಅಕೌಂಟಂಟ ಶ್ರೀ ಎನ್. ವೆಂಕಟೇಶರವರು ಸಹಕಾರಿ ಸಂಸ್ಥೆಗಳು ಹಾಗೂ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಆದಾಯ ತೆರಿಗೆ ತೊಂದರೆಗಳನ್ನು ವಿವರವಾಗಿ ಸಭೆಯ ಗಮನಕ್ಕೆ ತಂದರು.

ನಂತರ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಸಹಕಾರಿ ಸಂಸ್ಥೆಗಳ ಹಿರಿಯ ನಾಯಕರು ಮಾತನಾಡಿ ಸಹಕಾರಿ ಕ್ಷೇತ್ರಕ್ಕೆ ಈ ಆದಾಯತೆರಿಗೆಯವರು ನೀಡುತ್ತಿರುವ ತೊಂದರೆಗಳಿಂದ ಸಹಕಾರ ಕ್ಷೇತ್ರ ತೀವ್ರ ಹಿನ್ನಡೆಯನ್ನು ಕಾಣುವ ಹಂತದಲ್ಲಿದೆ. ಕೆಲವು ಸಹಕಾರಿ ಸಂಸ್ಥೆಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಭೀತಿಯಲ್ಲಿವೆ. ಆದಾಯ ತೆರಿಗೆ ಇಲಾಖೆಯವರಿಗೆ ಸಹಕಾರಿ ತತ್ವಗಳ ಬಗ್ಗೆಯಾಗಲಿ, ಸಹಕಾರಿ ಕಾಯ್ದೆಗಳ ಆಶಯದ ಬಗ್ಗೆಯಾಗಲಿ, ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆಯಾಗಲಿ, ಸಹಕಾರಿ ಕ್ಷೇತ್ರ ಸಾಧನೆ ಹಾಗೂ ಪ್ರಗತಿಯ ಬಗ್ಗೆಯಾಗಲಿ ಮಾಹಿತಿ ಇಲ್ಲ. ತಿಳಿದುಕೊಳ್ಳುವ ಬಗ್ಗೆಯೂ ಆಸಕ್ತಿ ಇಲ್ಲ. ಕೇವಲ ಆದಾಯ ತೆರಿಗೆಯನ್ನು ಯಾವರೂಪದಲ್ಲಿಯಾದರೂ ಸಂಗ್ರಹಿಸಬೇಕೆಂಬುದು ಅವರ ಗುರಿ ಬೇರೆ ಯಾವ ಅಹವಾಲುಗಳನ್ನು ಅಥವಾ ಸಮಸ್ಯೆಗಳನ್ನು ವಾಸ್ತವ ಸ್ಥಿತಿಗತಿಗಳನ್ನು ತಿಳಿಯುವ ವ್ಯವಧಾನ ಅವರಿಗೆ ಇಲ್ಲ. ಈ ಸಮಸ್ಯೆಗಳಿಂದ ಹೊರಬರುವುದು ಸಹಕಾರಿ ಸಂಸ್ಥೆಗಳಿಗೆ ಒಂದು ದೊಡ್ಡ ಸವಾಲಾಗಿದೆ. ಎಂದು ತಮ್ಮ ಅಭಿಪ್ರಾಯಗಳನ್ನು ತಿಳಿಸಿ ಈ ಬಗ್ಗೆ ಉಗ್ರ ಹೋರಾಟದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಮತ್ತು ಸಹಕಾರಿ ನಾಯಕರು ಹೋರಾಟದ ರೂಪರೇಷೆಗಳನ್ನು ಸಿದ್ಧಪಡಿಸುವಂತೆ ವಿನಂತಿಸಿದರು.

ಈ ಹಂತದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಹಾಗೂ ಸಮಗ್ರ ಸಹಕಾರಿಗಳ ಪರವಾಗಿ ಹಲವಾರು ಬಾರಿ ದೆಹಲಿಗೆ ತೆರಳಿ ಕೆಲವು ಸಂಸದರ ಮೂಲಕ ಹಾಗೂ ಕೇಂದ್ರದ ಗೃಹ ಸಚಿವ ಶ್ರೀ ಅಮಿತ ಶಾರವರ ಮೂಲಕ 3 ಬಾರಿ ಕೇಂದ್ರ ತೆರಿಗೆ ಮಂಡಳಿ 3 ಅಧ್ಯಕ್ಷರನ್ನು, ಹಿಂದಿನ ಕೇಂದ್ರ ಹಣಕಾಸು ಸಚಿವ ಶ್ರೀ ಅರುಣ ಜೇಟ್ಲಿಯವರನ್ನು ಹಾಗೂ ಹಾಲಿ ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ರವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ. ಮನವಿಗಳಿಗೆ ಎಲ್ಲರೂ ಸ್ಪಂದಿಸದ್ದಾರೆ. ಆದರೆ ಯಾವುದು ಪ್ರಯೋಜನವಾಗಿಲ್ಲವೆನೂ ಎಂದು ಅನಿಸುತ್ತಿದೆ. ಈಗ ರಾಜ್ಯದ ಎಲ್ಲ ಸಹಕಾರಿಗಳು ಮಾನ್ಯ ಮುಖ್ಯಮಂತ್ರಿಗಳು ಸಹಕಾರ ಮಂತ್ರಿಗಳು ರಾಜ್ಯದ ಕೇಂದ್ರ ಸಚಿವರು ಸಂಸದರುಗಳ ನಿಯೋಗದೊಂದಿಗೆ ಮತ್ತೊಮ್ಮೆ ಮನವಿ ಸಲ್ಲಿಸುವುದು ಅವಶ್ಯಕವಾಗಿದೆ ರಾಜ್ಯದ ಸೌಹಾರ್ದ ಸಹಕಾರಿಗಳು ಈ ಹೋರಾಟದಲ್ಲಿ ಪೂರ್ಣ ಪ್ರಮಾಣದ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ವಿವಿಧ ಸಂಸ್ಥೆಗಳಿಂದ 60ಕ್ಕೂ ಹೆಚ್ಚು ಸಹಕಾರಿ ಮುಖಂಡರು ಭಾಗವಹಿಸಿದ್ದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಎನ್. ಗಂಗಣ್ಣನವರು ಇದು ಸಹಕಾರಿಗಳ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಈ ಬಗ್ಗೆ ಹೋರಾಟದ ಸ್ವರೂಪವನ್ನು ಸಿದ್ಧಪಡಿಸಿ ಮುಂದಿನ ಕ್ರೀಯಾಯೋಜನೆಯನ್ನು ತಿಳಿಸಲಾಗುವುದು ಎಂದು ತಿಳಿಸಿ ನಂತರ ವಂದನಾರ್ಪಣೆ ಸಲ್ಲಿಸಿದರು.

# ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 19ನೇ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ

## ಡಿ.ಸಿ.ಬಿ.ಎಮ್ 2ನೇ ತಂಡ ಉದ್ಘಾಟನೆ. ಬೆಂಗಳೂರು, ಶಿವಮೊಗ್ಗ, ಬೆಳಗಾವಿ, ಮುಧೋಳ ಹಾಗೂ ರಾಯಚೂರುಗಳಲ್ಲಿ ಕೇಂದ್ರಗಳಲ್ಲಿ ಡಿ.ಸಿ.ಬಿ.ಎಮ್ ತರಗತಿ ಹಾಗೂ ಪರೀಕ್ಷೆಗಳು, ಮಂಗಳೂರಿನಲ್ಲಿ ಸೌಹಾರ್ದ ಸಹಕಾರಿಗಳ ಬೃಹತ ಸಮಾವೇಶ, ಬೆಳಗಾವಿಯಲ್ಲಿ ರಕ್ತದಾನ ಶಿಬಿರ.



**ಬೆಂಗಳೂರು :** ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ 19ನೇ ಸೌಹಾರ್ದ ಸಹಕಾರಿ ದಿನದ ಆಚರಣೆಯ ಅಂಗವಾಗಿ ಸಹಕಾರಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಇವರು ರಾಜ್ಯದಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಂಗಳೂರಿನಲ್ಲಿ ದಕ್ಷಿಣ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ಸಹಯೋಗದೊಂದಿಗೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಸಮಾವೇಶ, ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಹಾಗೂ ವಿವಿಧ ರೀತಿಯ ಕಾರ್ಯಕ್ರಮಗಳು, ಬೆಳಗಾವಿಯಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಹಾಗೂ ಕೆ.ಎಲ್.ಇ ಸಂಸ್ಥೆಯ ಸಹಯೋಗದೊಂದಿಗೆ ಸೌಹಾರ್ದ ಸಹಕಾರಿಗಳ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹಲವಾರು ಯುವ ಸಹಕಾರಿಗಳು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಶ್ರೀಯುತರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾಗಿ 19 ವರ್ಷಗಳು ಕಳೆದಿವೆ. ಸೌಹಾರ್ದ ಸಹಕಾರಿ ಚಳುವಳಿ ವೇಗವಾಗಿ ಬೆಳೆಯುತ್ತಿದೆ. ರಾಜ್ಯದಲ್ಲಿ 4850ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ, ಸೌಹಾರ್ದ ಸಹಕಾರಿಗಳಿಂದ 1304 ಇ–ಸ್ಟಾಂಪಿಂಗ್ ಕೇಂದ್ರಗಳ ನಿರ್ವಹಣೆ, ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಪ್ರತ್ಯೇಕ ಕೋರ್ಟ್, ವ್ಯಾಜ್ಯಗಳ ಪ್ರತ್ಯೇಕ ಮಧ್ಯಸ್ಥದಾರರ (Arbitrators) ನೇಮಕ, ಹಾಗೂ ಡಿಸಿಬಿಎಮ್ ಡಿಪ್ಲೋಮಾ ಕೋರ್ಸ ನಿರ್ವಹಣೆ ಹೀಗೆ ಸಂಯುಕ್ತ ಸಹಕಾರಿಯ ಅಪೇಕ್ಷೆಯಂತೆ "ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ" ಎಂಬ ಧ್ಯೇಯವಾಕ್ಯವನ್ನು ಅರ್ಥಪೂರ್ಣವಾಗಿಸುವ ನಿಟ್ಟಿನಲ್ಲಿ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಗುಣಮಟ್ಟವನ್ನು ಉತ್ತಮ ಮಟ್ಟಕ್ಕೆ ಎತ್ತರಕ್ಕೆ ಏರಿಸಿಕೊಳ್ಳುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿ ಕಾರ್ಯನಿರ್ವಹಿಸಲು ಈ ದಿನದ ಆಚರಣೆ ವಿಶೇಷ ಮಹತ್ವವನ್ನು ಕಲ್ಪಿಸುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಡಿಪ್ಲೋಮಾ ಇನ್ ಕೋ–ಆಪರೇಶನ್ ಹಾಗೂ ಬ್ಯಾಂಕಿಂಗ ಮೆನೆಜಮೆಂಟನ (ಡಿಸಿಬಿಎಂ) 2ನೇ ತಂಡದ ಉದ್ಘಾಟನೆಯನ್ನು ನೆರವೇರಿಸಿ ರಾಜ್ಯದಲ್ಲಿ 5 ಕೇಂದ್ರಗಳಲ್ಲಿ ಈ ಕೋರ್ಸ್‌ನ್ನು ನಡೆಸಲು ಸಂಯುಕ್ತ ಸಹಕಾರಿಯು ಉದ್ದೇಶಿಸಿದೆ. ಬೆಂಗಳೂರು, ಶಿವಮೊಗ್ಗ, ಬೆಳಗಾವಿ, ಮುಧೋಳ ಹಾಗೂ ರಾಯಚೂರುಗಳಲ್ಲಿ ಕೇಂದ್ರವನ್ನಾಗಿ ಮಾಡಲಾಗಿದೆ. ಈ ಕೇಂದ್ರಗಳಲ್ಲಿ ಕಂಟ್ಯಾಕ್ಟ ಕ್ಲಾಸ್‌ಗಳನ್ನು ಹಾಗೂ ಪರೀಕ್ಷೆಯನ್ನು ನಡೆಸಲಾಗುತ್ತದೆ. ಹೆಚ್ಚಿನ ಸೌಹಾರ್ದ ಸಹಕಾರಿಗಳು ಈ ಕೋರ್ಸನ್ನು ಪಡೆಯಲು ಉತ್ಸುಕರಾಗಿರುವುದು ಸಂತೋಷದ ಸಂಗತಿ ಎಂದು ತಿಳಿಸಿದರು.




**ಮೈಸೂರು:** ದಿನಾಂಕ 01.01.2020 ರಂದು ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ ರಾಜೀವ್ ಇವರು ನೇರವೇರಿಸಿದರು. ಮೈಸೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿವಾಹಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಳಗಾವಿ :** ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ದಿನಾಂಕ 1 ಜನವರಿ 2020 ರಂದು ಬೆಳಿಗ್ಗೆ 8.30 ಕ್ಕೆ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಗಣ್ಯರಾದ ಶ್ರೀ ಬಸವರಾಜ ಸುಲ್ತಾನಪುರೆ, ಮಾನ್ಯ ಅಧ್ಯಕ್ಷರು, ಶಿವಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ, ಶ್ರೀ ಸಿ. ಟಿ. ಮಜಗೆ, ಮಾನ್ಯ ಉಪಾಧ್ಯಕ್ಷರು ಬೆಳಗಾವಿ ಬಾರ್ ಕೌನ್ಸಿಲ್ ಮತ್ತು ಅಧ್ಯಕ್ಷರು, ಶ್ರೀ ಸಾಯಿ ಶ್ಯಾಮ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ, ಶ್ರೀ ಶಾಂತಿನಾಥ ನಾಯಕ, ಅಧ್ಯಕ್ಷರು, ಶ್ರೀ ಆಶೀರ್ವಾದ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ, ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ. ಶ್ರೀ ಜಿ. ಎಸ್. ಟೋಪಣ್ಣವರ, ಮಾನ್ಯ ಹಿರಿಯ ಅಧಿಕಾರಿ (ಪರಿವೀಕ್ಷಣಾ ಹಾಗೂ ಲೆಕ್ಕಪರಿಶೋಧನಾ ವಿಭಾಗ) ಹಾಗೂ ಬೆಳಗಾವಿ ಪ್ರಾಂತೀಯ ಕಛೇರಿಯ ಎಲ್ಲಾ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಪ್ರಾಸ್ತಾವಿಕವಾಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಮಾತನಾಡುತ್ತಾ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಜಾರಿಗೆ ಬಂದು 19 ವರ್ಷಗಳು ಆಗುತ್ತಾ ಬರುತ್ತಿದೆ, ಸಹಕಾರಿ ಕ್ಷೇತ್ರವು ದೇಶದಾದ್ಯಂತ ವ್ಯಾಪಕವಾಗಿ ಹರಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಕ್ಷೇತ್ರದ ಬೆಳವಣಿಗೆಯಲ್ಲಿ ಕುಂಠಿತಗೊಳ್ಳುತ್ತಿದೆ, ಬೆಳಗಾವಿ ವಿಭಾಗದಲ್ಲಿ ಕಂಡು ಬರುತ್ತಿರುವ ಬೆಳವಣಿಗೆಗಳು ಅಸಮಾಧಾನಕರವಾಗಿದ್ದು ಈ ನಿಟ್ಟಿನಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿ ಕುರಿತು ಶ್ರಮಿಸಬೇಕಿದೆ. ಈ ಸೌಹಾರ್ದ ಸಹಕಾರಿ ದಿನವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆನ್ನುವ ಉದ್ದೇಶದಿಂದ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರದಲ್ಲಿ ಎಲ್ಲ ಸಹಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಿದರು. ಗಣ್ಯರಾದ ಶ್ರೀ ಸಿ. ಟಿ. ಮಜಗೆಯವರು ಮಾತನಾಡುತ್ತಾ ಸಮಾಜದ ಕಾರ್ಯಚಟುವಟಿಕೆಗಳಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದೆಂಬ ಉದ್ದೇಶದಿಂದ ಸೌಹಾರ್ದ ಸಹಕಾರಿ ಅಧಿನಿಯಮ, 1997 ಜಾರಿಗೆ ಬಂದು ಅನೇಕ ಸೌಹಾರ್ದ ಸಹಕಾರಿಗಳು ಹುಟ್ಟಿದವು. ಸೌಹಾರ್ದ ಸಹಕಾರಿಗಳು ಜನರಿಗೆ ಒಳ್ಳೆಯ ಸೇವೆಯನ್ನು ಕಲಿಸುತ್ತಾ ಬರುತ್ತಿವೆ ಹಾಗೂ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿಯ ವತಿಯಿಂದ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಇದು ಶ್ಲಾಘನೀಯವಾದ ವಿಷಯವೆಂದು ತಿಳಿಸಿದರು. ಗಣ್ಯರಾದ ಶ್ರೀ ಬಸವರಾಜ ಸುಲ್ತಾನಪುರೆಯವರು ಮಾತನಾಡುತ್ತಾ ಸೌಹಾರ್ದ ಸಹಕಾರಿ ದಿನದಂದು ನಾವೆಲ್ಲರೂ ಸಹಕಾರ ಕ್ಷೇತ್ರದ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ನಿರಂತವಾಗಿ ಶಿಕ್ಷಣ & ತರಬೇತಿ ಹಾಗೂ ಸಲಹೆಗಳನ್ನು ಸೌಹಾರ್ದ ಸಹಕಾರಿಗಳಿಗೆ ನೀಡುತ್ತಾ ಬರುತ್ತಿದೆ ಅಲ್ಲದೇ ನಿಯಂತ್ರಣ ಕಾರ್ಯವನ್ನು ಮಾಡುತ್ತಿದೆ. ಹೀಗಿದ್ದಾಗ್ಯೂ ಸಹ ಸಹಕಾರಿ ಕ್ಷೇತ್ರದಲ್ಲಿ ನಿರೀಕ್ಷಿತ ಬೆಳವಣಿಗೆ ಕಂಡುಬರುತ್ತಿಲ್ಲ, ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿಗಳು ಇನ್ನಷ್ಟು ಶ್ರಮಿಸಬೇಕಿದೆ. ಸಹಕಾರಿ ಸಂಸ್ಥೆಗಳನ್ನು ಅಭಿವೃದ್ಧಿ ಪಥದಲ್ಲಿ ಚಲಿಸುವಂತೆ ಮಾಡಬೇಕಿದೆ ಎಂದು ಹೇಳಿದರು.

ಧ್ವಜಾರೋಹಣದ ನಂತರ ಬೆಳಗಾವಿಯ ಮಹಾಂತೇಶನಗರದ 'ಮಹಾಂತ ಭವನ' ದಲ್ಲಿ ರಕ್ತದಾನ ಶಿಬಿರ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕೆಎಲ್ಇ ವೈದ್ಯಕೀಯ ಸಂಸ್ಥೆಯ ಪ್ಯಾಥಾಲಾಜಿ ವಿಭಾಗದ ಮುಖ್ಯಸ್ಥರಾದ ಶ್ರೀ ರಮೇಶ ಚವ್ಹಾಣ ಇವರು ಮಾತನಾಡುತ್ತಾ ಎಲ್ಲ ಸಹಕಾರಿಗಳಿಗೆ ಹೊಸ ವರ್ಷದ ಶುಭಾಶಯಗಳನ್ನು ತಿಳಿಸುತ್ತ ಹೊಸ ವರ್ಷದ ನಿಮಿತ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಏರ್ಪಡಿಸಿರುವುದು ತುಂಬಾ ಒಳ್ಳೆಯ ಹಾಗೂ ಹೆಮ್ಮೆಯ ವಿಷಯವಾಗಿದೆ. ರಕ್ತದಾನ ಮಾಡಿ ಜೀವರಕ್ಷಕರಾಗುವ ಸಂದರ್ಭವು ಎಲ್ಲರಿಗೂ ಒದಗಿ ಬರುವುದಿಲ್ಲ. ದೇಶದ ಗಡಿಯಲ್ಲಿ ಸೈನಿಕರು ಭಾರತ ಮಾತೆಯನ್ನು ಉಳಿಸುವುದಕ್ಕಾಗಿ ತಮ್ಮ ರಕ್ತವನ್ನು ದೇಶಕ್ಕಾಗಿ ದಾನ ಮಾಡಿ ದೇಶ ಸೇವೆಯನ್ನು ಮಾಡುತ್ತಿದ್ದಾರೆ, ಅದೇ ರೀತಿ ನಾವುಗಳು ದೇಶದ ಒಳಗಡೆ ಇರುವ ನಾಗರಿಕರಿಗೆ ರಕ್ತವನ್ನು ದಾನ ಮಾಡಿ ದೇಶ ಸೇವೆ ಮಾಡಬೇಕು ಎನ್ನುವಂತಹ ಸಂದೇಶವನ್ನು ನೀಡಿದರು. ರಕ್ತದಾನ ಮಾಡುವುದು ಒಂದು ಅನನ್ಯ ವಿಷಯ. ರಕ್ತದಾನ ಮಾಡುವುದರಿಂದ ಅನೇಕ ಆರೋಗ್ಯ ಸಮಸ್ಯೆಗಳಿಂದ ಮುಕ್ತರಾಗುವ ಸಾಧ್ಯತೆಗಳಿವೆ ಹಾಗೂ ರಕ್ತದಾನದಿಂದ ಅನೇಕ ಲಾಭಗಳಿವೆ ವಿನಹ ಯಾವುದೇ ನಷ್ಟವಿರುವುದಿಲ್ಲ. ಆರೋಗ್ಯವಂತರು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಕೇಂದ್ರಗಳಿಗೆ ಭೇಟಿ ನೀಡಿ ರಕ್ತದಾನ ಮಾಡಿ ಜೀವರಕ್ಷಕರಾಗಿರಿ ಎಂದು ತಿಳಿಸಿದರು.

## ರಕ್ತದಾನ ಶಿಬಿರ

ಈ ರಕ್ತದಾನ ಶಿಬಿರದಲ್ಲಿ ಸುಮಾರು 80 ಕ್ಕಿಂತ ಹೆಚ್ಚಿನ ಜನರು ಭಾಗಿಯಾಗಿ 47 ಜನ ರಕ್ತದಾನವನ್ನು ಮಾಡುವುದರ ಮೂಲಕ ಯಶಸ್ವಿಗೊಳಿಸಿದರು. ಧ್ವಜಾರೋಹಣ ಮತ್ತು ರಕ್ತದಾನ ಶಿಬಿರ ಕಾರ್ಯಕ್ರಮವು ಸಹಕಾರ ಗೀತೆಯೊಂದಿಗೆ ಆರಂಭವಾಯಿತು. ಈ ಕಾರ್ಯಕ್ರಮದಲ್ಲಿ ಅಶ್ವಿನಿ ಕಮ್ಮಾರ, ಸಹಾಯಕಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ, ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀಕಾಂತ ಬರುವೆಯವರು ಪ್ರಾಸ್ತಾವಿಕ ಮತ್ತು ಸ್ವಾಗತವನ್ನು ಕೋರಿದರು. ವಂದನಾರ್ಪಣೆಯನ್ನು ಜವಾಹರ ಮೊಗ್ಗನವರ, ಜಿಲ್ಲಾ ಸಂಯೋಜಕರು. ಬೆಳಗಾವಿ ಪ್ರಾಂತ ಇವರು ಮಾಡಿದರು.





**ಕಲಬುರಗಿ:** ದಿನಾಂಕ 01.01.2020 ರಂದು ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಉಪಾಧ್ಯಕ್ಷರು ಹಾಗೂ ಮಾನ್ಯ ನಿರ್ದೇಶಕರು ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸದಸ್ಯರು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



**ಉತ್ತರ ಕನ್ನಡ:** ಸ್ಕೊಡ್‌ವೆಸ್ ಸೌಹಾರ್ದ ಸಹಕಾರಿ ನಿಯಮಿತ, ಶಿರಸಿ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಜಿಲ್ಲಾ ಸಂಪರ್ಕ ಕಛೇರಿ ಉತ್ತರಕನ್ನಡ ಜಿಲ್ಲೆ ಶಿರಸಿ ಸಹಯೋಗದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್‌ರವಿ ಸಹಕಾರಿ ಧ್ವಜಾರೋಹಣ ನೆರವೇರಿಸಿದರು. ಶಿರಸಿಯ ಶ್ರೀ ಮಾರಿಕಾಂಬಾ ದೇವಸ್ಥಾನದ ಧರ್ಮದರ್ಶಿ ಮಂಡಳಿಯ ಅಧ್ಯಕ್ಷರಾದ ಡಾ.ವೆಂಕಟೇಶ ನಾಯ್ಕ, ಶ್ರೀ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲ್‌ರವರ ಪೋಟೋಕ್ಕೆ ಮಾಲಾರ್ಪಣೆ ಮಾಡಿ ಪೂಜೆ ನೆರವೇರಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ಹೇಮಲತಾ ಚೌಗಲೆ ಸಹಕಾರ ಗೀತೆ ಹಾಡಿದರು. ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಗಣಪತಿ ನಾಯ್ಕ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯಕ್ರಮಾಧಿಕಾರಿಗಳಾದ ರಿಯಾಜ್ ಸಾಗರ, ಸೇಫ್ ಸರ್ವಿಸಸ್ ಪ್ರೈ.ಲಿ. ನ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಜಿತೇಂದ್ರಕುಮಾರ ತೋನ್ಸೆ, ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಅಂಜಲಿ ಹೆಗಡೆ, ಶ್ರೀಮತಿ ವೀಣಾ ಮೊಗೇರ,ರೈತ ಉತ್ಪಾದಕರ ಸಂಸ್ಥೆಯ ಪ್ರಶಾಂತ ನಾಯಕ ಮೊದಲಾದವರು ಉಪಸ್ಥಿತರಿದ್ದರು.



**ಬೆಂಗಳೂರು:** ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಯಲಹಂಕ ಉಪನಗರ, ಕೇಂದ್ರ ಕಛೇರಿ ಮತ್ತು ಬೈರತಿ ಶಾಖೆಯಲ್ಲಿ ದಿನಾಂಕ 01.01.2020 ರಂದು ಅದ್ದೂರಿಯಾಗಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಂ. ಮುನಿರೆಡ್ಡಿ ರವರು ಮತ್ತು ಆಡಳಿತ ಮಂಡಲಿ ಸದಸ್ಯರು ಸೇರಿ ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಡಾ. ಎಂ.ಎನ್ ರಾಜೇಂದ್ರಕುಮಾರ ರವರಿಗೆ ಅಭಿನಂದನೆ



ದೇಶದ ಹಿರಿಯ ಸಹಕಾರಿ ಕರ್ನಾಟಕ ರಾಜ್ಯದ ಪ್ರತಿಷ್ಠಿತ ಸಹಕಾರ ರತ್ನ ಪ್ರಸಸ್ತಿ ಪುರಸ್ಕೃತರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರು ಹಾಗು ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಬ್ಯಾಂಕಿನ ಅಧ್ಯಕ್ಷರೂ ಆಗಿರುವ ಡಾ. ಎಂ.ಎನ್ ರಾಜೇಂದ್ರಕುಮಾರ ಇವರಿಗೆ ಶ್ರೀಲಂಕಾದಲ್ಲಿ ನಡೆದ ಇಂಡೋ–ಶ್ರೀಲಂಕಾ ಎಕಾನಾಮಿಕ್ ಕೋ–ಆಪರೇಷನ್ ಕನ್ವರೆನ್ಸ್‌ನಲ್ಲಿ **"ಇಂಟರ್‌ನ್ಯಾಷನಲ್ ಲೀಡರ್‌ಶಿಪ್ ಇನ್ನೋವೇಷನ್ ಎಕ್ಸ್‌ಲೆನ್ಸ್ ಅವಾರ್ಡ್– 2019"** ಪ್ರಶಸ್ತಿ ಲಭಿಸಿದೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಅಭಿನಂದನೆ ಸಲ್ಲಿಸಿದೆ.

## ಪಟ್ಟಣ ಸಹಕಾರ ಬ್ಯಾಂಕುಗಳ ಸಮಾವೇಶ ಮುಂದಕ್ಕೆ - ಶ್ರೀ ರಮೇಶ ವೈದ್ಯ



ಕರ್ನಾಟಕ ಸಹಕಾರ ಭಾರತಿಯವರು ಜನವರಿ 11 ರಂದು ಬೆಂಗಳೂರಿನಲ್ಲಿ ಏರ್ಪಡಿಸಲು ಉದ್ದೇಶಿಸಿರುವ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಸಮಾವೇಶವನ್ನು ಮುಂದಕ್ಕೆ ಹಾಕಲಾಗಿದೆ ಎಂದು ಪ್ರಕಟಣೆಯೊಂದರಲ್ಲಿ ತಿಳಿಸಲಾಗಿದೆ. ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರು ಕೇಂದ್ರದ ಬಜೆಟ್ ಸಿದ್ಧತೆ ಕಾರ್ಯದಲ್ಲಿ ತೊಡಗಿರುವುದರಿಂದ ಈ ಸಮಾವೇಶದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದ್ದರಿಂದ ಈ ಸಮಾವೇಶವನ್ನು ಮುಂದಕ್ಕೆ ಹಾಕಲಾಗಿದೆ ಎಂದು ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷ ಶ್ರೀ ರಮೇಶ ವೈದ್ಯರವರು ತಿಳಿಸಿದ್ದಾರೆ.



ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



ಕೋಲಾರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



**ಕೊಪ್ಪ:** ಯಡಗೆರೆ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜರೋಹಣವನ್ನು ಸಹಕಾರಿಯ ನಿರ್ದೇಶಕರಾದ ಶ್ರೀ ಕೆ.ಪಿ.ಕೃಷ್ಣಾನಂದರವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿ ಸದಸ್ಯರು ಮತ್ತು ಸಹಕಾರಿಯ ಎಲ್ಲಾ ಸಿಬ್ಬಂದಿಗಳು ಪಾಲ್ಗೊಂಡು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಯಶಸ್ವಿವಾಗಿ ಆಚರಣೆ ಮಾಡಲಾಯಿತು.




**ಮೈಸೂರು :** ಶೈನ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಮೈಸೂರು ಇದರ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ: 01–01–2020ರಂದು ಬುಧವಾರ ಬೆಳಿಗ್ಗೆ 11.00 ಗಂಟೆಗೆ ಸಹಕಾರಿಯ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ನೂತನ ಸಹಕಾರಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಕಾನೂನು ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಉದ್ಘಾಟಿಸಿದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



**ಹಾನಗಲ್ಲ:** ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿಯಿಂದ ದಿನಾಂಕ 01.01.2020 ರಂದು ಸೌಹಾರ್ದ ಸಹಕಾರಿಯ ದಿನಾಚರಣೆಯ ಧ್ವಜರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಶಿವಮೊಗ್ಗ:** ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ ದಿನಾಂಕ 01.01.2020 ರಂದು ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣ ವನ್ನು ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಎ ನಾರಾಯಣಮೂರ್ತಿ ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಸದಸ್ಯರಿಗೆ, ಆಡಳಿತ ಮಂಡಳಿಯ ಸದಸ್ಯರಿಗೆ ಮತ್ತು ಸಿಬ್ಬಂದಿಗಳಿಗೆ ಸೌಹಾರ್ದ ಸಹಕಾರಿಯ ದಿನಾಚರಣೆಯ ಶುಭಾಶಯವನ್ನು ತಿಳಿಸಿದರು



**ರಾಯಚೂರು :** ಮಹಾಲಕ್ಷ್ಮಿ ಸೌಹಾರ್ದ ಕೋ ಆಪರೇಟಿವ್ ಲಿ., ಸಿಂಧನೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



**ಮಂಡ್ಯ:** ಮಂಡ್ಯ ಜಿಲ್ಲೆಯ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



**ಬೆಳಗಾವಿ:** ಅರಿಹಂತ ಅರ್ಬನ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿಯಲ್ಲಿ ದಿನಾಂಕ 01–01–2020 ರಂದು ಸೌಹಾರ್ದ ಸಹಕಾರಿಗಳ ದಿನಾಚರಣೆಯ ಧ್ವಜರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಮಣ್ಣಾ ನಾಗಪ್ಪಾ ಗೋಟುರಿ ಇವರು ನೇರವೇರಿಸಿದರು.



**ಸಿರವಾರ:** ವಿವೇಕ್ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲಾಯಿತು. ಸಹಕಾರಿಯ ಆಡಳಿತ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಾದ ಮಹೇಶ ಕೆ, ಗಂಗಾಧರ ಜೆ, ಅಮರೇಶ, ವಿಜಯಮಹಾಂತೇಶ, ರಾಕೇಶ್, ಲಕ್ಷ್ಮಣ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು ಹಾಗೂ ಸಹಕಾರಿಯ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.



**ರಾಯಚೂರು:** ರಾಯಚೂರು ತಾಲ್ಲೂಕು ಸೌಹಾರ್ದ ಸಹಕಾರಿಗಳಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



**ಚಾಮರಾಜನಗರ:** ಸಂಗಮ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



**ಕೊಪ್ಪಳ :** ಕೊಪ್ಪಳ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



**ಚಾಮರಾಜನಗರ:** ನವ್ಯ ಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.




**ಚಾಮರಾಜನಗರ:** ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



**ಚಾಮರಾಜನಗರ:** ಜನಪರ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



**ಚಾಮರಾಜನಗರ:** ಮುಪ್ಪಿನಷಡಕ್ಷರದೇವ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



**ಚಾಮರಾಜನಗರ:** ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.




**ಚಾಮರಾಜನಗರ:** ಮರ್ಚೆಂಟ್ಸ್ ಪತ್ತಿನ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



**ಚಾಮರಾಜನಗರ:** ರೇನಾ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



**ವಿಜಯಪುರ:** ಶ್ರೀ ವರಮಹಾಲಕ್ಷ್ಮೀ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಹಾಗೂ ಇಶಾನಿ ಕ್ರೆಡಿಟ ಸೌಹಾರ್ದ ಸಹಕಾರಿ ನಿ., ವಿಜಯಪುರ ಇವರ ಸಂಯುಕ್ತ ಆಶ್ರಯದಲ್ಲಿ ಜನವರಿ 1 ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲಾಯಿತು. ಶಿವಶರಣ ಹರಳಯ್ಯ ಶಾಲೆಯ ಅಂಧ ಮಕ್ಕಳಿಗೆ ಹಣ್ಣು ವಿತರಿಸಲಾಯಿತು ಹಾಗೂ ಡ್ರಾಯಿಂಗ್ ಶೀಟ್ ಅನ್ನು ಕೂಡಲಾಯಿತು. ಸಮಾರಂಭದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಪ್ರವೇಶ ತರಬೇತಿ ಕಾರ್ಯಕ್ರಮ



**ರಾಯಚೂರು:** ದಿನಾಂಕ: 03.12.2019 ನಗರದ ಹೋಟೆಲ್ ಸಂತೋಷಿ ಸರೋವರದಲ್ಲಿ ರಾಯಚೂರು ಜಿಲ್ಲೆಯ ನೂತನ ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿ ಉದ್ಘಾಟಿಸಿ ಮಾತನಾಡುತ್ತ ಇಂದು ರಾಜ್ಯದಲ್ಲಿ ಸೌಹಾರ್ದ ಸಹಕಾರ ಚಳುವಳಿಯು ವೇಗವಾಗಿ ಬೆಳೆಯುತ್ತಿದೆ. ಸೌಹಾರ್ದ ಸಹಕಾರಿಗಳು ತನ್ನ ಸದಸ್ಯರಿಗೆ ಉತ್ತಮವಾಗಿ ಸೇವೆಗಳನ್ನು ಸಲ್ಲಿಸುತ್ತಾ ಬರುತ್ತದೆ. ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಬೆಳೆಯಲು ಮುಖ್ಯ ಕಾರ್ಯನಿರ್ವಾಹಕರ ಪಾತ್ರ ಬಹುಮುಖ್ಯ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ರಾಜಶೇಖರ ಬಿ. ಇವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ತಿಪ್ಪೇಸ್ವಾಮಿ ಇವರು ಆಗಮಿಸಿದರು. ಕಾರ್ಯಕ್ರಮದ ಮೊದಲಿಗೆ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ಇವರು ನೇರವೇರಿಸಿದರು. ನಿರೂಪಣೆಯನ್ನು ರವಿಕುಮಾರ ಆಶಾಪೂರೆ ಮತ್ತು ವಂದನಾರ್ಪಣೆಯನ್ನು ವಲ್ಲೇಪು ಗಾಲಯ್ಯ ಇವರು ನಡೆಸಿಕೊಟ್ಟರು.

## ಕ್ಲಸ್ಟರ್ ತರಬೇತಿ ಕಾರ್ಯಕ್ರಮಗಳು

**ಕುಮುಟಾ:** ದಿನಾಂಕ 11.12.2019 ರಂದು ಶಿರಸಿ, ಸಿದ್ದಾಪೂರ ಹಾಗು ಮುಂಡಗೋಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಜ್ಞಾನೇಶ್ವರ ಸೌಹಾರ್ದ ಸಹಕಾರಿ ನಿ., ಕುಮುಟಾದಲ್ಲಿ ಆಯೋಜಿಸಲಾಗಿರುತ್ತದೆ. ಶ್ರೀ ಬಸವರಾಜ ಹೊಂಗಲ, ವ್ಯವಸ್ಥಾಪಕರು ಇವರು ಕಲಂ 34 ರಡಿ ಸಲ್ಲಿಸುವ ದಾಖಲಾತಿಗಳ ಮಾಹಿತಿ ಹಾಗೂ ಶ್ರೀ ರಾಚಯ್ಯಾ ಹಿರೇಮಠ, ದಾವಾ ಅಧಿಕಾರಿ ಇವರು ದಾವಾ ದಾಖಲಾತಿ ಕುರಿತು ಪ್ರಾಯೋಗಿಕವಾಗಿ ಉಪನ್ಯಾಸ ನೀಡಿರುತ್ತಾರೆ. ತರಬೇತಿಯಲ್ಲಿ 16 ಸೌಹಾರ್ದ ಸಹಕಾರಿಗಳಿಂದ 18 ಪ್ರತಿನಿಧಿಗಳು ಭಾಗವಹಿಸಿದ್ದರು.

**ಯಲ್ಲಾಪುರ:** ದಿನಾಂಕ 11.12.2019 ರಂದು ಯಲ್ಲಾಪುರ, ಹಳಿಯಾಳ, ದಾಂಡೇಲಿ ಹಾಗೂ ಜೋಯಿಡಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಯು.ಕೆ.ಸೌಹಾರ್ದ ಸಹಕಾರಿ ನಿ., ಯಲ್ಲಾಪುರ ದಲ್ಲಿ ಆಯೋಜಿಸಲಾಗಿರುತ್ತದೆ. ಶ್ರೀ ಬಸವರಾಜ ಹೊಂಗಲ, ವ್ಯವಸ್ಥಾಪಕರು ಇವರು ಕಲಂ 34 ರಡಿ ಸಲ್ಲಿಸುವ ದಾಖಲಾತಿಗಳ ಮಾಹಿತಿ ಹಾಗೂ ಶ್ರೀ ರಾಚಯ್ಯಾ ಹಿರೇಮಠ, ದಾವಾ ಅಧಿಕಾರಿ ಇವರು ದಾವಾ ದಾಖಲಾತಿ ಕುರಿತು ಪ್ರಾಯೋಗಿಕವಾಗಿ ಉಪನ್ಯಾಸ ನೀಡಿರುತ್ತಾರೆ. ತರಬೇತಿಯಲ್ಲಿ 07 ಸೌಹಾರ್ದ ಸಹಕಾರಿಗಳಿಂದ 10 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 12.12.2019 ರಂದು ಕುಮುಟಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಯು.ಕೆ.ಸೌಹಾರ್ದ ಸಹಕಾರಿ ನಿ., ಯಲ್ಲಾಪುರದಲ್ಲಿ ಆಯೋಜಿಸಲಾಗಿರುತ್ತದೆ. ಶ್ರೀ ಬಸವರಾಜ ಹೊಂಗಲ, ವ್ಯವಸ್ಥಾಪಕರು ಇವರು ಕಲಂ 34 ರಡಿ ಸಲ್ಲಿಸುವ ದಾಖಲಾತಿಗಳ ಮಾಹಿತಿ ಹಾಗೂ ಶ್ರೀ ರಾಚಯ್ಯಾ ಹಿರೇಮಠ, ದಾವಾ ಅಧಿಕಾರಿ ಇವರು ದಾವಾ ದಾಖಲಾತಿ ಕುರಿತು ಪ್ರಾಯೋಗಿಕವಾಗಿ ಉಪನ್ಯಾಸ ನೀಡಿರುತ್ತಾರೆ. ತರಬೇತಿಯಲ್ಲಿ 07 ಸೌಹಾರ್ದ ಸಹಕಾರಿಗಳಿಂದ 10 ಪ್ರತಿನಿಧಿಗಳು ಭಾಗವಹಿಸಿದ್ದರು.

**ಹೊನ್ನವರ :** ದಿನಾಂಕ 12.12.2019 ರಂದು ಹೊನ್ನಾವರ ಹಾಗೂ ಭಟ್ಕಳ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿ., ಹೊನ್ನವರದಲ್ಲಿ ಆಯೋಜಿಸಲಾಗಿರುತ್ತದೆ. ಶ್ರೀ ಬಸವರಾಜ ಹೊಂಗಲ, ವ್ಯವಸ್ಥಾಪಕರು ಇವರು ಕಲಂ 34 ರಡಿ ಸಲ್ಲಿಸುವ ದಾಖಲಾತಿಗಳ ಮಾಹಿತಿ ಹಾಗೂ ಶ್ರೀ ರಾಚಯ್ಯಾ ಹಿರೇಮಠ, ದಾವಾ ಅಧಿಕಾರಿ ಇವರು ದಾವಾ ದಾಖಲಾತಿ ಕುರಿತು ಪ್ರಾಯೋಗಿಕವಾಗಿ ಉಪನ್ಯಾಸ ನೀಡಿರುತ್ತಾರೆ. ತರಬೇತಿಯಲ್ಲಿ 08 ಸೌಹಾರ್ದ ಸಹಕಾರಿಗಳಿಂದ 12 ಪ್ರತಿನಿಧಿಗಳು ಭಾಗವಹಿಸಿದ್ದರು.

**ಅಂಕೋಲಾ:** ದಿನಾಂಕ 13.12.2019 ರಂದು ಅಂಕೋಲಾ ಹಾಗೂ ಕಾರವಾರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಶಾಂತಿಕಾ ಸೌಹಾರ್ದ ಸಹಕಾರಿ ನಿ., ಅಂಕೋಲಾದಲ್ಲಿ ಆಯೋಜಿಸಲಾಗಿರುತ್ತದೆ. ಶ್ರೀ ಬಸವರಾಜ ಹೊಂಗಲ, ವ್ಯವಸ್ಥಾಪಕರು ಇವರು ಕಲಂ 34 ರಡಿ ಸಲ್ಲಿಸುವ ದಾಖಲಾತಿಗಳ ಮಾಹಿತಿ ಹಾಗೂ ಶ್ರೀ ರಾಚಯ್ಯಾ ಹಿರೇಮಠ, ದಾವಾ ಅಧಿಕಾರಿ ಇವರು ದಾವಾ ದಾಖಲಾತಿ ಕುರಿತು ಪ್ರಾಯೋಗಿಕವಾಗಿ ಉಪನ್ಯಾಸ ನೀಡಿರುತ್ತಾರೆ. ತರಬೇತಿಯಲ್ಲಿ 22 ಸೌಹಾರ್ದ ಸಹಕಾರಿಗಳಿಂದ 32 ಪ್ರತಿನಿಧಿಗಳು ಭಾಗವಹಿಸಿದ್ದರು.

**ನೆಲಮಂಗಲ :** ದಿನಾಂಕ 05.12.2019 ರಂದು ನೆಲಮಂಗಲ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಶಾಸನಬದ್ಧ ಕಾರ್ಯಗಳು ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಜನತಾ ಮಿತ್ರ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿತ್ತು, ಸದರಿ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್‌ಕುಮಾರ್ ಎಂ, ರವರು ಉಪಯುಕ್ತ ಮಾಹಿತಿ ನೀಡಿದರು, 05 ಸೌಹಾರ್ದ ಸಹಕಾರಿಗಳಿಂದ 05 ಪ್ರತಿನಿಧಿಗಳು ಭಾಗವಹಿಸಿದ್ದರು.

## 2018-19 ನೇ ಸಾಲಿನ ವಾರ್ಷಿಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಗಳು ಅರ್ಥಪೂರ್ಣ.

### ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗೆ ಭಾಗವಹಿಸಿದ ವಿವಿಧ ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯಿಂದ ಮೆಚ್ಚುಗೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ನೇತಾರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರತಿವರ್ಷ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳನ್ನು ಜರುಗಿಸುತ್ತ ಬಂದಿದೆ. ರಾಜ್ಯದಾದ್ಯಂತ ಪ್ರತಿ ವರ್ಷ ಡಿಸೆಂಬರ ಮಾಹೆಯಲ್ಲಿ ಜರುಗಿಸುವ ಈ ಸಭೆಗಳಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಸೌಹಾರ್ದ ಸಹಕಾರಿಯ ಪ್ರಗತಿಯ ವಿವರಗಳನ್ನು ಸಲ್ಲಿಸುವುದರ ಜೊತೆಗೆ ಅವರುಗಳಿಗೆ ಈ ಕ್ಷೇತ್ರದ ಪ್ರಚಲಿತ ವಿಷಯಗಳ ಬಗ್ಗೆ ಮಾಹಿತಿಯನ್ನು ಕೊಡಲಾಗುತ್ತದೆ.

ಈ ಬಾರಿ ರಾಜ್ಯದ 46 ಸ್ಥಳಗಳಲ್ಲಿ ಸಭೆಗಳು ನಡೆದಿವೆ. ಒಟ್ಟಾರೆ 2000 ಸೌಹಾರ್ದ ಸಹಕಾರಿಗಳಿಂದ 2465 ಮುಖ್ಯ ಕಾರ್ಯನಿರ್ವಾಹಕರು ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದಾರೆ. ಪ್ರತಿ ವರ್ಷದ ಸರಾಸರಿಗಿಂತ ಈ ಬಾರಿಯ ಭಾಗವಹಿಸುವಿಕೆಯ ಸರಾಸರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಮುಂಬರುವ ದಿನಗಳಲ್ಲಿ ನೂರಕ್ಕೆ ನೂರರಷ್ಟು ಮುಖ್ಯಕಾರ್ಯನಿರ್ವಾಹಕರು ಈ ಸಭೆಗಳಲ್ಲಿ ಭಾಗವಹಿಸುವುದು ಅಗತ್ಯ. ಇದರಿಂದಾಗಿ ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆಗೆ ಎಂಬ ಧ್ಯೇಯವನ್ನು ಸಂಪೂರ್ಣ ಅನುಷ್ಠಾನಗೊಳಿಸಿದ ಹಿರಿಮೆ ಸೌಹಾರ್ದ ಸಹಕಾರಿಗಳದ್ದಾಗುತ್ತದೆ.

ಈ ಬಾರಿಯ ಸಭೆಗಳನ್ನು ರಾಜ್ಯದ ಎಲ್ಲ ಜಿಲ್ಲಾ ಸಂಯೋಜಕರು ಹಾಗೂ ಪ್ರಾಂತೀಯ ಅಧಿಕಾರಿಗಳು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡುವುದರ ಜೊತೆಗೆ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಅವರುಗಳ ಮೂಲಕವೇ ವಿಷಯ ಪ್ರಸ್ತಾವನೆಗೆ ಆದ್ಯತೆ ನೀಡಿರುವುದು ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿ ಹಾಗೂ ವ್ಯವಸ್ಥಾಪಕ ನಿರ್ದೇಶಕರು ಗಮನಿಸಿ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ, ಜೊತೆಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

---



**ಬೆಂಗಳೂರು :** ದಿನಾಂಕ 03.12.2019 ರಂದು ಕರ್ನಾಟಕ ಚಿಟ್ಸ್‌ಫಂಡ್ಸ್ ಅಸೋಸಿಯೇಷನ್ ಸಹಯೋಗದೊಂದಿಗೆ ಸಹಕಾರ ಇಲಾಖೆಯ ಚಿಟ್ಸ್‌ಫಂಡ್ಸ್ ನಿಯಮಾವಳಿಗಳ ಡಿಜಟಲೀಕರಣ ಕಾರ್ಯಾಗಾರವನ್ನು ಕೆಎಎಸ್ ಆಫೀಸರ್ಸ್ ಅಸೋಸಿಯೇಷನ್, ಇನ್‌ಫ್ಯಾಂಟ್ರ ರಸ್ತೆ ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಾಗಾರದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಶ್ರೀ ರಾಜೇಶ್ ಕೆ.ಎಂ ಜಿಲ್ಲಾ ಸಂಯೋಜಕರು ಭಾಗವಹಿಸಿದ್ದರು. ವೇದಿಕೆಯಲ್ಲಿ ಶ್ರೀ ಪ್ರಸನ್ನ ಕುಮಾರ್, ನಿಬಂಧಕರು ಸಹಕಾರ ಇಲಾಖೆ, ಶ್ರೀ ಪಾಂಡುರಂಗ ಗರಗ್, ಜಂಟಿ ನಿಬಂಧಕರು ಹಾಗೂ ಶ್ರೀ ಬಸವಲಿಂಗಪ್ಪ, ಅಧ್ಯಕ್ಷರು ಕರ್ನಾಟಕ ಚಿಟ್ಸ್‌ಫಂಡ್ಸ್ ಅಸೋಸಿಯೇಷನ್ ಉಪಸ್ಥಿತರಿದ್ದರು.



**ಬೆಂಗಳೂರು :** ದಿನಾಂಕ 17.12.2019 ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ 2020ನೇ ಸಾಲಿನಲ್ಲಿ ಚುನಾವಣೆ ನಡೆಯಬೇಕಾದ ಸೌಹಾರ್ದ ಸಹಕಾರಿಗಳಿಗಾಗಿ ಚುನಾವಣಾ ಪೂರ್ವ ಸಿದ್ಧತಾ ಸಭೆಯು ಅಪೆಕ್ಸ್ ಬ್ಯಾಂಕ್. ಬೆಂಗಳೂರು ಇಲ್ಲಿ ಜರುಗಿತು. ಸಭೆಯಲ್ಲಿ ಶ್ರೀ ಡಾ. ಎನ್. ಎಸ್. ಚನ್ನಪ್ಪಗೌಡ. ಮಾನ್ಯ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು. ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಉಪಯುಕ್ತ ಮಾಹಿತಿ ನೀಡಿದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಉಪಸ್ಥಿತರಿದ್ದರು. 33 ಸೌಹಾರ್ದ ಸಹಕಾರಿಗಳಿಂದ 56 ಪ್ರತಿನಿಧಿಗಳು ಭಾಗವಹಿಸಿದ್ದರು.

---

## ಯೂ ಟ್ಯೂಬ್‌ನಲ್ಲಿ ಸಹಕಾರ ಟಿ.ವಿ ವಿಕ್ಷೀಸಿ, ನಿಮ್ಮ ಸಹಕಾರ ಸಂಸ್ಥೆಯ ಸುದ್ದಿ ಕಳುಹಿಸಿ, ಸಹಕಾರ ಸುದ್ದಿ ಮಹಾಮಂಡಳದ ಶೇರು ಖರೀದಿಸಲು ಮನವಿ.

ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ಯೂ ಟ್ಯೂಬ್ (you tube) ಮೂಲಕ ಸಹಕಾರ ಕ್ಷೇತ್ರದ ಪ್ರತಿದಿನ ಸುದ್ದಿ ಸಮಾಚಾರಗಳನ್ನು ಬಿತ್ತರಿಸುತ್ತಿರುವುದನ್ನು ತಮ್ಮ ಗಮನಕ್ಕೆ ಬಂದಿರುತ್ತದೆ. ಈ ಸುದ್ದಿ ವಾಹಿನಿಯಲ್ಲಿ ರಾಜ್ಯದ ಎಲ್ಲ ಸಹಕಾರ ಸಂಸ್ಥೆಗಳ ದೇಶದ ವಿದೇಶದ ಸಹಕಾರ ಕ್ಷೇತ್ರದ ಸಮಾಚಾರಗಳನ್ನು ಪ್ರಕಟಿಸಲಾಗುತ್ತದೆ. ಆದ್ದರಿಂದ ನಿಮ್ಮ ಸಹಕಾರಿ ಸಂಸ್ಥೆಯ ಹಾಗೂ ನಿಮ್ಮ ಸುತ್ತ ಮುತ್ತಲಿನ ಸಹಕಾರಿ ಕ್ಷೇತ್ರದ ಸಮಾಚಾರಗಳನ್ನು ಮರೆಯದೆ ಕಳುಹಿಸಿ ಸಹಕಾರ ಟಿವಿಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕೆಂದು ಸುದ್ದಿ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಉಪಾಧ್ಯಕ್ಷರಾದ ಶ್ರೀ ಸತೀಶ ಹಾಗೂ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ತಿಳಿಸಿದ್ದಾರೆ. ಹಾಗೂ ಇದೇ ಸಂದರ್ಭದಲ್ಲಿ ಸಹಕಾರ ಸುದ್ದಿ ಮಹಾಮಂಡಳ ಮುಂಬರುವ ದಿನಗಳಲ್ಲಿ ತನ್ನದೇ ಆದ ಟಿ.ವಿ.ಚಾನೆಲ್ ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಶೇರು ಖರೀದಿಸಲು ರಾಜ್ಯದ ಎಲ್ಲ ಸಹಕಾರ ಸಂಸ್ಥೆಗಳಿಗೂ ಮನವಿ ಮಾಡಿದ್ದಾರೆ.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



ಉಡುಪಿ: ಶ್ರೀ ರಸ್ತು ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಮಂಜುನಾಥ ಹಾಗೂ ವ್ಯವಸ್ಥಾಪಕ ನಿರ್ದೇಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಮಾರ್ಗದರ್ಶನ ನೀಡಿದರು.



ಉಡುಪಿ: ಸವಿತಾ ಸಮಾಜ ವಿವಿಧೋದ್ದೇಶ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಮಂಜುನಾಥ ಹಾಗೂ ವ್ಯವಸ್ಥಾಪಕ ನಿರ್ದೇಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಮಾರ್ಗದರ್ಶನ ನೀಡಿದರು.



ಉಡುಪಿ: ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ದಿನಾಂಕ: 06.12.2019ರಂದು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿದರು. ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಅನನ್ಯ ಸೌಹಾರ್ದ ಸಹಕಾರಿ ನಿ., ಹೇರಾಡಿ ಇದಕ್ಕೆ ಭೇಟಿ ನೀಡಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಹರೀಶ್ ರವರೊಂದಿಗೆ ಸಹಕಾರಿಯ ಬೆಳವಣಿಗೆ ಕುರಿತು ಚರ್ಚಿಸಿದರು. ಈ ಸಮಯದಲ್ಲಿ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು. ಸಹಕಾರಿಯು ಕೇವಲ ಐದು ತಿಂಗಳಲ್ಲಿ ಒಂದು ಕೋಟಿಗೂ ಮಿಕ್ಕಿ ದುಡಿಯುವ ಬಂಡವಾಳವನ್ನು ಹೊಂದಿರುವ ಜೊತೆಗೆ ಗ್ರಾಮೀಣ ಭಾಗದ ಜನರಿಗೆ ಆರ್ಥಿಕ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘಿಸಿದರು.

ನಂತರ ಬಾರ್ಕೂರಿನಲ್ಲಿರುವ ಸರ್ವೋದಯ ಸೌಹಾರ್ದ ಸಹಕಾರಿ ನಿ., ಇದಕ್ಕೆ ಭೇಟಿ ನೀಡಿ ಆದಾಯ ತೆರಿಗೆ ಇಲಾಖೆಯಿಂದ ಬಂದಿರುವ ನೋಟಿಸಿನ ಬಗ್ಗೆ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿದರು. ಸಹಕಾರಿಯು 15 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು ಸ್ಥಳೀಯ ಜನರಿಗೆ ಆರ್ಥಿಕ ಸ್ವಾವಲಂಬಿಗಳಾಗಲು ಸಹಾಯ ಮಾಡುತ್ತಿದೆ ಹಾಗೂ ಪಾಂಡೇಶ್ವರ ಗ್ರಾಮದಲ್ಲಿರುವ ಸನ್ನಿಧಿ ಮಹಿಳಾ ಸಹಕಾರಿ ನಿ., ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್ ಕೆ. ಹಾಗೂ ವ್ಯವಸ್ಥಾಪಕ ನಿರ್ದೇಶಕರು ಒಳಗೊಂಡ ನಿಯೋಗವು ಭೇಟಿ ನೀಡಿ ಮಹಿಳಾ ಸೌಹಾರ್ದ ಸಹಕಾರಿಗಳು ಹೇಗೆ ಆರ್ಥಿಕವಾಗಿ ಬೆಳವಣಿಗೆ ಆಗಬೇಕು ಎನ್ನುವುದರ ಬಗ್ಗೆ ಚರ್ಚಿಸಿದರು.

ನಂತರ ಉಡುಪಿ ಜಿಲ್ಲಾ ಸಂಪರ್ಕ ಕಚೇರಿಗೆ ಭೇಟಿ ನೀಡಿ ಕಛೇರಿಯ ವ್ಯವಸ್ಥೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು ಹಾಗೂ ದಿನಾಂಕ 21.12.2019 ರಂದು ನಡೆಯಲಿರುವ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಕ್ರೀಡಾಕೂಟ ಕಾರ್ಯಕ್ರಮದ ಪೂರ್ವ ಸಿದ್ಧತೆಯ ಅಂಗವಾಗಿ ಕ್ರೀಡಾಕೂಟ ಆಯೋಜಿಸುವ ಸ್ಥಳಕ್ಕೆ ಭೇಟಿ ನೀಡಿ ವ್ಯವಸ್ಥೆಯ ಕುರಿತು ಚರ್ಚಿಸಿದರು.



ಗೌರಿಬಿದನೂರು : ದಿನಾಂಕ: 17.12.2019ರಂದು ಶ್ರೀ ಕನ್ನಿಕಾ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಗೌರಿಬಿದನೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಮಾರ್ಗದರ್ಶನ ನೀಡಿದರು. ಸದರಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ರಾಜ್ಯದ ಸೌಹಾರ್ದ ಸಹಕಾರಿಗಳ ಗಮನಕ್ಕೆ

## ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ಸ್ಪಂದನೆಗೆ ಸಂಯುಕ್ತ ಸಹಕಾರಿ ಸಮರ್ಥವಾಗಿದೆ. ಅನ್ಯ ಸಂಸ್ಥೆಗಳ ನೇತೃತ್ವ ಅನಗತ್ಯ.

ರಾಜ್ಯದ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ಸಂಯುಕ್ತ ಸಹಕಾರಿ ಕಾರ್ಯನಿರ್ವಹಿಸುತ್ತಿದೆ. ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಸಂಯುಕ್ತ ಸಹಕಾರಿಗೆ ನಿರ್ವಹಿಸಿದ ಶಾಸನಬದ್ಧ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದರ ಜೊತೆಗೆ, ರಾಜ್ಯದಲ್ಲಿಯೆ ಅತ್ಯಂತ ಹೆಚ್ಚಿನ ಗುಣಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತ ಸೌಹಾರ್ದ ಸಹಕಾರಿಗಳ ಗುಣಮಟ್ಟ ಸುಧಾರಣೆಗೆ ಸಾಧ್ಯವಾಗುವಂತೆ ಪೂರಕ ಕೆಲಸಗಳನ್ನು ಸಮರ್ಥವಾಗಿ ಸಂಯುಕ್ತ ಸಹಕಾರಿ ನಿರ್ವಹಿಸುತ್ತಿದೆ. ಅಲ್ಲದೆ, ಸೌಹಾರ್ದ ಸಹಕಾರ ಕ್ಷೇತ್ರ ಸಮಸ್ಯೆಗಳನ್ನು ಎದುರಿಸಿದಾಗಲೆಲ್ಲ ಸಮರ್ಥವಾಗಿ ಪರಿಹಾರಗಳನ್ನು ಪಡೆಯುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ಶ್ರಮಿಸಿದೆ, ಮುಂದೆಯೂ ಶ್ರಮಿಸಲಿದೆ.

**ಮಾನ್ಯ ಸೌಹಾರ್ದ ಸಹಕಾರಿ ಬಂಧುಗಳೇ,**

ತಾವು ಅತ್ಯಂತ ಜರೂರಾಗಿ ಗಮನಿಸಬೇಕಾದ ವಿಷಯವೇನಂದರೆ, ಕರ್ನಾಟಕ ಸ್ಟೇಟ್ ಕೋ ಆಪರೇಟಿವ್ ಸೊಸೈಟೀಸ್ ಅಸೋಸಿಯೇಶನ್ **(Karnataka State Cooperative societies Association)** ಹೆಸರಿನಲ್ಲಿ ಸದಸ್ಯತ್ವ ಪಡೆಯುವಂತೆ, ಅಧ್ಯಯನ ಪ್ರವಾಸಕ್ಕೆ ನೋಂದಣಿ ಮಾಡುವಂತೆ, ತರಬೇತಿಗಳಲ್ಲಿ ಭಾಗವಹಿಸುವಂತೆ ಪತ್ರಗಳು ಬರುತ್ತಿರುವುದಾಗಿ, ಆದಾಯ ತೆರಿಗೆ ಸಮಸ್ಯೆಗಳ ಕುರಿತು ಹೋರಾಡುವುದಾಗಿ ಸದರಿ ಸಂಸ್ಥೆ ಹೇಳಿಕೊಳ್ಳುತ್ತಿರುವುದಾಗಿ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಗಮನಕ್ಕೆ ತಂದಿವೆ, ಹಾಗೂ ಈ ಬಗ್ಗೆ ಗೊಂದಲ ಉಂಟಾಗುತ್ತಿದ್ದು ಅಗತ್ಯ ಮಾರ್ಗದರ್ಶನ ಮಾಡುವಂತೆ ಸಂಯುಕ್ತ ಸಹಕಾರಿಯನ್ನು ಸೌಹಾರ್ದ ಸಹಕಾರಿಗಳು ಕೋರಿರುವುದರಿಂದ ಸ್ಪಷ್ಟನೆಗಾಗಿ ಈ ಸುತ್ತೋಲೆಯನ್ನು ನೀಡಲಾಗಿದೆ.

ಕರ್ನಾಟಕ ಸ್ಟೇಟ್ ಕೋ ಆಪರೇಟಿವ್ ಸೊಸೈಟೀಸ್ ಅಸೋಸಿಯೇಶನ್‌ಗೂ ಸಂಯುಕ್ತ ಸಹಕಾರಿಗೂ ಯಾವುದೇ ಸಂಬಂಧವಿರುವುದಿಲ್ಲ. ಈ ಅಸೋಸಿಯೇಷನ್ ಸೇರಿದಂತೆ ಯಾವುದೇ ಅನ್ಯ ಸಂಸ್ಥೆಗಳ ಸದಸ್ಯತ್ವ ಪಡೆದು ವಿನಾಕಾರಣ ಯಾವುದೇ ಪ್ರಯೋಜನವಿಲ್ಲದೆ ಅನಗತ್ಯ ಹಣ ಕಳೆದುಕೊಳ್ಳುವುದಾಗುತ್ತದೆ ಎಂಬುದನ್ನು ಸೌಹಾರ್ದ ಸಹಕಾರಿಗಳು ಗಮನಿಸಬೇಕು. ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಸಮಸ್ಯೆಗಳಿಗೆ ಸ್ಪಂದಿಸಲು ಸಂಯುಕ್ತ ಸಹಕಾರಿಯು ಸಮರ್ಥವಾಗಿದೆ ಎನ್ನುವುದನ್ನು ಈ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇವೆ.

ಮುಂದುವರೆದು, ಯಾವುದೇ ಹೊಸ ವಿಷಯಗಳ ಅಳವಡಿಸುವಿಕೆಯಲ್ಲಿ ಕೂಡ ಸಂಯುಕ್ತ ಸಹಕಾರಿಯು ಮುಂಚೂಣಿಯಲ್ಲಿದೆ ಎನ್ನುವುದು ಕೂಡ ತಮಗೆ ತಿಳಿದಿದೆ, ಸೌಹಾರ್ದ ಸಹಕಾರಿಗಳಿಗೆ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ, 7 ದಿನಗಳ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ, ಮಹಾರಾಷ್ಟ್ರ-ಗುಜರಾತ-ಗೋವಾ ಅಧ್ಯಯನ ಪ್ರವಾಸ, ಡಿಸಿಬಿಎಂ ದೂರ ಶಿಕ್ಷಣ ಇತ್ಯಾದಿಗಳ ಮೂಲಕ ಸೌಹಾರ್ದ ಸಹಕಾರ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯ ಪ್ರಯತ್ನ ನಿರಂತರವಾಗಿದೆ. ಇದಲ್ಲದೆ ಸೌಹಾರ್ದ ಸಹಕಾರಿಗಳು ಅಪೇಕ್ಷಿಸುವ ಯಾವುದೇ ಹೊಸ ಯೋಜನೆಗಳನ್ನ, ಅಧ್ಯಯನ ಪ್ರವಾಸಗಳನ್ನ ಆಯೋಜಿಸಲು ಸಂಯುಕ್ತ ಸಹಕಾರಿಯು ಸಿದ್ಧವಿದ್ದು, ತಾವು ಯಾವುದೇ ಸಂದರ್ಭದಲ್ಲಿ ನೂತನ, ವಿನೂತನ ಅವಕಾಶಗಳ ಬಗ್ಗೆ ಸಲಹೆ/ಮಾಹಿತಿ ನೀಡಿದಲ್ಲಿ ಅದನ್ನು ಸಮರ್ಥವಾಗಿ ಜಾರಿಗೊಳಿಸಲು ಸಂಯುಕ್ತ ಸಹಕಾರಿಯು ಶ್ರಮಿಸುತ್ತದೆ.

ಸಮಸ್ಯೆಗಳ ನಿವಾರಣೆಯ ದೃಷ್ಟಿಯಿಂದ, ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಸಮಸ್ಯೆ ನಿವಾರಣೆ ಕುರಿತಂತೆ ಸಂಯುಕ್ತ ಸಹಕಾರಿಯು ಕಳೆದ ಅನೇಕ ವರ್ಷಗಳಿಂದ ನಿರಂತರ ಶ್ರಮಿಸುತ್ತಿದೆ, ಆದಾಯ ತೆರಿಗೆ ನೋಟೀಸ್ ಕಳುಹಿಸುವುದನ್ನು ತಾತ್ಕಾಲಿಕವಾಗಿ ತಡೆಹಿಡಿಯುವಲ್ಲಿ ಸಂಯುಕ್ತ ಸಹಕಾರಿ ಯಶಸ್ವಿಯಾಗಿತ್ತು ಎನ್ನುವುದು ನಿಮ್ಮ ಗಮನದಲ್ಲಿದೆ. ಆದಾಯ ತೆರಿಗೆ ಸಮಸ್ಯೆಗೆ ಶಾಶ್ವತ ಪರಿಹಾರ ಪಡೆಯುವ ನಿಟ್ಟಿನಲ್ಲಿ ಮಾನ್ಯ ಕೇಂದ್ರ ಹಣಕಾಸು ಸಚಿವರೊಂದಿಗೆ, ಸಿಬಿಡಿಟಿ ಅಧಿಕಾರಿಗಳೊಂದಿಗೆ ಹಲವು ಸಭೆಗಳನ್ನು ಮಾಡಲಾಗಿದೆ. ರಾಜ್ಯದಿಂದ ಆಯ್ಕೆಯಾದ ಸಂಸದರ ಮೂಲಕ ಕೇಂದ್ರ ಸರ್ಕಾರಕ್ಕೆ ಸಮಸ್ಯೆಗಳನ್ನು ಮನವರಿಕೆ ಮಾಡಲು ಪ್ರಯತ್ನಿಸಲಾಗಿದೆ. ರಾಜ್ಯ ಸೌಹಾರ್ದ ಕಾಯ್ದೆಯಲ್ಲಿ ಸೌಹಾರ್ದ ಸಹಕಾರಿಗಳು ಕೂಡ ಸಹಕಾರ ಸಂಘಗಳು ಎಂದು ಬದಲಾವಣೆ ತರಲು **ರಾಜ್ಯದ ಮುಖ್ಯಮಂತ್ರಿಗಳಾದ ಬಿ. ಎಸ್ ಯಡಿಯೂರಪ್ಪ ರವರನ್ನು, ಸಹಕಾರ ಸಚಿವರಾದ ಶ್ರೀ ಬಸವರಾಜು ಬೊಮ್ಮಾಯಿ ರವರನ್ನು,** ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರನ್ನು, ನಿಬಂಧಕರನ್ನು ಹಾಗೂ ಅಧಿಕಾರಿಗಳನ್ನು ನಿರಂತರವಾಗಿ ಸಂಪರ್ಕಿಸಲಾಗುತ್ತಿದೆ. ಇದರ ಫಲವಾಗಿ ಇನ್ನೂ ಕೆಲವೇ ದಿನಗಳಲ್ಲಿ ಈ ಬಗ್ಗೆ ಅಧ್ಯಾದೇಶವನ್ನು ರಾಜ್ಯ ಸರ್ಕಾರ ಹೊರಡಿಸಲಿದೆ.

ಅಗತ್ಯವೆನಿಸಿದಾಗಲೆಲ್ಲ ಸೌಹಾರ್ದ ಸಹಕಾರ ಕ್ಷೇತ್ರದಲ್ಲುಂಟಾದ ಗೊಂದಲ ನಿವಾರಣೆಯ ಕುರಿತು ಜಾಗೃತಿ ಕಾರ್ಯಕ್ರಮ, ಸಭೆಗಳನ್ನು ನಡೆಸಿರುವುದು ತಮಗೆ ತಿಳಿದಿದೆ. ಇದಕ್ಕೆಲ್ಲ ತಾವುಗಳು ಕೂಡ ಸಕ್ರೀಯವಾಗಿ ಸ್ಪಂದಿಸುತ್ತಿರುವುದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಸೌಹಾರ್ದ ಸಹಕಾರ ಕ್ಷೇತ್ರಕ್ಕೆಂದೆ ಶಾಸನಬದ್ಧವಾಗಿ ರಚಿತವಾಗಿರುವ ಮಾತೃ ಸಂಸ್ಥೆ ಸಂಯುಕ್ತ ಸಹಕಾರಿಯು ಸದಾ ಸೌಹಾರ್ದ ಸಹಕಾರಿಗಳೊಂದಿಗಿದೆ. ಸೌಹಾರ್ದ ಸಹಕಾರಿಗಳು ಇನ್ನಿತರ ಬಾಹ್ಯ ಸಂಸ್ಥೆಗಳ ಪ್ರೇರೇಪಣೆ ಹಾಗೂ ಪತ್ರ ವ್ಯವಹಾರಗಳಿಗೆ ಸ್ಪಂದಿಸಿ ತೊಂದರೆಪಡದಂತೆ ಜಾಗೃತರಾಗಿ ಕಾರ್ಯನಿರ್ವಹಿಸಬೇಕೆನ್ನುವುದು ಸಂಯುಕ್ತ ಸಹಕಾರಿಯ ಕಾಳಜಿಯಾಗಿದೆ.

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
**ಅಧ್ಯಕ್ಷರು**

# ಹಿಂಜರಿಕೆಯಿಲ್ಲದೆ 10 ರೂಪಾಯಿ ನಾಣ್ಯಗಳ ಚಲಾವಣೆ ಒಪ್ಪಲು ಆರ್‌ಬಿಐ ಸೂಚನೆ

भारतीय रिज़र्व बैंक
RESERVE BANK OF INDIA
वेबसाइट : www.rbi.org.in/hindi
Website : www.rbi.org.in
ई-मेल email: helpdoc@rbi.org.in

संचार विभाग, केंद्रीय कार्यालय, एस.बी.एस.मार्ग, मुंबई-400001
DEPARTMENT OF COMMUNICATION, Central Office, S.B.S.Marg, Mumbai-400001
फोन/Phone: 022 2261 0835 फैक्स/Fax: 91 22 22660358

January 17, 2018

**RBI reiterates legal tender status of ₹ 10 coins of different designs**

It has come to the notice of the Reserve Bank that in certain places there is reluctance on part of traders and members of public to accept ₹ 10 coins due to suspicion about their genuineness.

It is clarified that the Reserve Bank puts into circulation, the coins minted by mints, which are under the Government of India. These coins have distinctive features to reflect various themes of economic, social and cultural values and are introduced from time to time.

As coins have longer life, coins of different designs and shapes circulate in the market at the same time. So far the Reserve Bank has issued ₹ 10 coins in 14 designs and the public has been informed of their distinctive features through Press Releases (list appended). All these coins are legal tender and can be accepted for transactions.

The Reserve Bank has in the past also issued a Press Release (November 20, 2016) requesting members of the public to continue to accept coins of ₹ 10 denomination as legal tender in all their transactions without any hesitation.

The Reserve Bank has also advised banks to accept coins for transactions and exchange at all their branches.

For more information on these coins, please visit the following link: https://www.rbi.org.in/Scripts/BS_PressReleaseDisplay.aspx

**Jose J. Kattoor**
Chief General Manager

**Press Release: 2017-2018/1950**

ಗಮನಿಸಿ : ಇತ್ತೀಚೆಗೆ ಬೆಳಗಾವಿ ಜಿಲ್ಲೆಯ ನಿಪ್ಪಾಣಿಯಲ್ಲಿ ಸೌಹಾರ್ದ ಸಹಕಾರಿಯೊಂದು 10 ರೂಪಾಯಿಗಳ ನಾಣ್ಯವನ್ನು ಸ್ವೀಕರಿಸಲು ನಿರಾಕರಿಸಿರುವುದಾಗಿ ಆರ್‌ಬಿಐಗೆ ದೂರು ಸ್ವೀಕಾರವಾಗಿರುತ್ತದೆ. ಸದರಿ ಪ್ರಕರಣದ ಬಗ್ಗೆ ಮಾಹಿತಿ ನೀಡುತ್ತ, 10 ರೂಪಾಯಿಗಳ ನಾಣ್ಯವನ್ನು 14 ವಿವಿಧ ವಿನ್ಯಾಸದಲ್ಲಿ ಮುದ್ರಿಸಲಾಗಿದ್ದು ಇವುಗಳು ಚಲಾವಣೆಯಲ್ಲಿರುವ ಅಧೀಕೃತ ನಾಣ್ಯಗಳಾಗಿವೆ, ಇವುಗಳ ಸ್ವೀಕಾರವನ್ನು ನಿರಾಕರಿಸುವಂತಿಲ್ಲವೆಂದು ಆರ್‌ಬಿಐ ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಜನವರಿ 17, 2018ರಂದು ಈ ಬಗ್ಗೆ ಆರ್‌ಬಿಐ ಹೊರಡಿಸಿರುವ ಪತ್ರಿಕಾ ಪ್ರಕಟಣೆಯ ಸುತ್ತೋಲೆಯನ್ನು ಮಾಹಿತಿಗಾಗಿ ಪ್ರಕಟಿಸಿದೆ.

# ಕರ್ನಾಟಕ ರಾಜ್ಯ ಸೌಹಾರ್ದ

ಶಾಸನಬದ್ಧ

ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವ

## ಸಹಕಾರಿಗಳ ನಡೆ

**ಜನವರಿ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

**ಫೆಬ್ರವರಿ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

**ಮೇ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

**ಜೂನ್ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

**ಸೆಪ್ಟಂಬರ್ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

**ಅಕ್ಟೋಬರ್ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |



**ಸಂಯುಕ್ತ ಸಹಕಾ**

| | |
|---|---|
| ಜನವರಿ | 15 ಮಕರ ಸಂಕ್ರಾತಿ |
| ಫೆಬ್ರವರಿ | 21 ಮಹಾಶಿವರಾತ್ರಿ |
| ಮಾರ್ಚ್ | 25 ಯುಗಾದಿ |
| ಮೇ | 01 ಕಾರ್ಮಿಕ ದಿನಾಚರಣೆ |
| ಮೇ | 25 ಖುತುಬ್–ಎ–ರಂಜಾನ್ |

ನಿರ್ಮಾಣ ಭವನ, ಡಾ. ರಾಜಕುಮಾರ್ ರಸ್ತೆ, 1ನೇ ಬ್ಲಾಕ್,

# ಸಂಯುಕ್ತ ಸಹಕಾರಿ ನಿಯಮಿತ

ಸಹಕಾರಿ ಸಂಸ್ಥೆ

ಯಮಂ ನಿಯಂತ್ರಣ ನಮ್ಮ ಧ್ಯೇಯ



## ಗುಣಮಟ್ಟದ ಕಡೆ

**ಮಾರ್ಚ್ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

**ಏಪ್ರಿಲ್ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

**ಜುಲೈ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

**ಆಗಸ್ಟ್ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

**ನವೆಂಬರ್ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

**ಡಿಸೆಂಬರ್ 2020**

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### ರಿಯ ರಜಾ ದಿನಗಳು

| | |
|---|---|
| ಆಗಸ್ಟ್ | 22 ಗಣೇಶ ಚತುರ್ಥಿ |
| ಸೆಪ್ಟಂಬರ್ | 17 ಮಹಾಲಯ ಅಮಾವಾಸ್ಯೆ |
| ಆಕ್ಟೋಬರ್ | 26 ವಿಜಯದಶಮಿ |
| ನವೆಂಬರ್ | 16 ಬಲಿಪಾಡ್ಯಮಿ, ದೀಪಾವಳಿ |
| ಡಿಸೆಂಬರ್ | 25 ಕ್ರಿಸ್‌ಮಸ್ |

**2020**

ರಾಜಾಜಿನಗರ, ಬೆಂಗಳೂರು-10 ದೂ : 080-23378375

# 100 ಕೋಟಿ ರೂಗಳ ಠೇವಣಿ ಮೀರಿದ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಕಾರ್ಯಕ್ಷೇತ್ರ ವಿಸ್ತರಣೆಗೆ ಹಾಗೂ ಹೊಸ ಶಾಖೆಗಳ ಅನುಮತಿಗಾಗಿ ಬೋರ್ಡ್ ಆಫ್ ಮೆನೆಜಮೆಂಟ್ ವ್ಯವಸ್ಥೆ ಅಳವಡಿಸುವುದು ಕಡ್ಡಾಯ - ಆರ್.ಬಿ.ಐ ನಿಂದ ಸುತ್ತೋಲೆ

भारतीय रिज़र्व बैंक
RESERVE BANK OF INDIA
www.rbi.org.in

RBI/2019-20/128
DoR (PCB).BPD.Cir.No.8/12.05.002/2019-20 December 31, 2019

The Chief Executive Officers of
All Primary (Urban) Co-operative Banks

Madam / Dear Sir,

**Constitution of Board of Management (BoM) in Primary (Urban) Co-operative Banks (UCBs)**

Reserve Bank of India had released draft guidelines on constituting BoM in UCBs on June 25, 2018 inviting comments from banks and other stakeholders. Taking into consideration the responses received, it has been decided to issue the guidelines on BoM as per **Annex I.**

2. UCBs shall constitute a BoM by making suitable amendments in their bye-laws. The BoM shall comprise of persons with special knowledge and practical experience in banking to facilitate professional management and focused attention to the banking related activities of the UCBs through appropriate amendments to their bye-laws, in accordance with the enclosed guidelines following the due process. While constituting the BoM, the Board of Directors (BoD) of UCB shall carry out a process of due diligence to determine the suitability of the person for appointment as the member of the BoM, based upon qualification, expertise, track record, integrity and other 'fit and proper' criteria as set out in Appendix I. Similar process of due diligence shall be carried out for determining the suitability of a candidate for appointment as CEO. For this purpose, banks shall obtain declaration-cum-undertaking from the proposed member of BoM/CEO in the format enclosed to the guidelines in Appendix II. The process of due diligence shall also be undertaken at the time of renewal of appointment.

3. UCBs with deposit size of ₹100 crore and above shall constitute BoM which will also be a mandatory requirement for allowing such banks to expand their area of operation and open new branches. UCBs with a deposit size less than ₹100 crore and Salary Earners' Banks are exempted from constituting BoM. However, for having good governance practices, such banks may also constitute BoM, if they so desire.

-1-

4. Further, as per the guidelines, UCBs having deposit size of ₹100 crore and above shall obtain prior approval of Reserve Bank for appointment of CEO. In this connection, it is advised that Scheduled UCBs shall approach the Department of Regulation of Reserve Bank for approval at least three months prior to the end of tenure of the incumbent CEO. The banks shall submit the proposal for appointment of CEO along with the declaration-cum -undertaking of the CEO designate as per Appendix II of these guidelines along with the list of supporting documents as given in **Annex II**. Non-Scheduled UCBs shall approach the concerned Regional Office of the Department of Supervision for the requisite approval in the similar manner mentioned above. Reserve Bank reserves the right to seek additional information/documents, if deemed necessary.

5. A copy of the amended bye-laws providing for constitution of BoM shall be forwarded to the concerned Regional Office of the Department of Supervision for information and record along with details of the members of BoM immediately after constitution of BoM. UCBs shall also be required to submit an annual return furnishing details of the members of the BoM as per the format given in **Annex III** as on December 31 each year, within 15 days of the end of the period to the respective Regional Offices of the Reserve Bank of India.

Yours faithfully,

(Neeraj Nigam)
Chief General Manager

**Encls: Annex I, II, III; Appendix I, II**

ಗಮನಿಸಿ: ಭಾರತೀಯ ರಿಸರ್ವ ಬ್ಯಾಂಕ್ ಪಟ್ಟಣ ಸಹಕಾರ ಬ್ಯಾಂಕುಗಳಿಗಾಗಿ ದಿನಾಂಕ 31.12.2019ರಂದು ಸುತ್ತೋಲೆಯೊಂದನ್ನು ಹೊರಡಿಸಿದೆ. ಈ ಸುತ್ತೋಲೆಯ ಪ್ರಕಾರ 100 ಕೋಟಿ ರೂಗಳಿಗಿಂತ ಹೆಚ್ಚಿನ ಠೇವಣಿಯನ್ನು ಹೊಂದಿರುವ ಪಟ್ಟಣ ಸಹಕಾರ ಬ್ಯಾಂಕುಗಳು ಹೊಸ ಶಾಖೆಗಳನ್ನು ತೆರೆಯಲು ಹಾಗೂ ಕಾರ್ಯಕ್ಷೇತ್ರ ವಿಸ್ತರಿಸಿಕೊಳ್ಳುವ ಬಗ್ಗೆ ಅನುಮತಿ ಪಡೆಯಲು ಬೋರ್ಡ ಆಫ ಮೆನೇಜಮೆಂಟ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದೆ. ಮತ್ತು ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ವಿಧಿ ವಿಧಾನಗಳನ್ನು ಸದರಿ ಸುತ್ತೋಲೆಯಲ್ಲಿ ತಿಳಿಸಿದೆ. 100 ಕೋಟಿ ರೂಗಳಿಗಿಂತ ಕಡಿಮೆ ಠೇವಣಿಯನ್ನು ಹೊಂದಿರುವ ಪಟ್ಟಣ ಸಹಕಾರ ಬ್ಯಾಂಕುಗಳು ಹಾಗೂ ವೇತನದಾರರ ಸಹಕಾರ ಬ್ಯಾಂಕುಗಳನ್ನು ಈ ಸುತ್ತೋಲೆಯಿಂದ ಹೊರತುಪಡಿಸಲಾಗಿದೆ. ಆದರೆ ಸಾಮಾನ್ಯವಾಗಿ ಪಟ್ಟಣ ಸಹಕಾರ ಬ್ಯಾಂಕುಗಳ ಉತ್ತಮ ಆಡಳಿತ ದೃಷ್ಟಿಯಿಂದ ಎಲ್ಲ ಪಟ್ಟಣ ಸಹಕಾರ ಬ್ಯಾಂಕುಗಳು ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿದೆ.

## ಉದ್ಘಾಟನೆ



**ಚಿತ್ರದುರ್ಗ:** ಚಿತ್ರದುರ್ಗ ನಗರದಲ್ಲಿ ನಡೆದ ಶ್ರೀ ಕನ್ಯಕ ಪರಮೇಶ್ವರಿ ಸೌಹಾರ್ದ ಸಹಕಾರಿಯ 90ನೇ ವಾರ್ಷಿಕೋತ್ಸವ ಸಮಾರಂಭದ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಬಿ.ಹೆಚ್. ಕೃಷ್ಣಾರೆಡ್ಡಿಯವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕನ್ಯಕ ಪರಮೇಶ್ವರಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜ ಶೆಟ್ಟಿಯವರು ವಹಿಸಿದ್ದರು. ಕಾರ್ಯಕ್ರಮಕ್ಕೆ ಮುಖ್ಯ ಭಾಷಣಕಾರರಾಗಿ ಯುವ ಸಮೂಹದ ಆಶಾ ಕಿರಣ, ಖ್ಯಾತ ವಾಗ್ಮಿ, ಯುವ ಬ್ರಿಗೇಡ್ ನ ಸಂಸ್ಥಾಪಕರಾದ ಶ್ರೀಯುತ ಚಕ್ರವರ್ತಿ ಸೂಲಿಬೆಲೆ ಯವರು ಆಗಮಿಸಿದ್ದರು.

ಮುಖ್ಯ ಅತಿಥಿಗಳಾಗಿ ಚಿತ್ರದುರ್ಗ ನಗರದ ಶಾಸಕರಾದ ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ ಯವರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಚಿತ್ರದುರ್ಗ ಜಿಲ್ಲಾ ನಿರ್ದೇಶಕರಾದ ಶ್ರೀ ಎಸ್. ಆರ್. ಲಕ್ಷ್ಮೀಕಾಂತರೆಡ್ಡಿ, ಕರ್ನಾಟಕ ರಾಜ್ಯ ಆರ್ಯ ವೈಶ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಡಿ. ಎಸ್. ಅರುಣ್ ಕುಮಾರ್ ರವರು, ಆರ್ಯ ವೈಶ್ಯ ಮಹಾ ಸಭಾದ ಅಧ್ಯಕ್ಷರಾದ ಆರ್. ಪಿ. ರವಿಶಂಕರ್ ರವರು ಹಾಗೂ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು, ಸಿಬ್ಬಂದಿ ವರ್ಗದವರು ಹಾಗೂ ಸದಸ್ಯರು ಉಪಸ್ಥಿತರಿದ್ದರು.



**ಕಲಬುರಗಿ:** ಕಲಬುರಗಿ ಜಿಲ್ಲೆಯ ಗೋಕುಲ ನಗರ ಸೌಹಾರ್ದ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಶ್ರೀ ಸಂಜೀವ ಮಹಾಜನರವರು ಉಪಸ್ಥಿತರಿದ್ದರು.



**ಕೊಪ್ಪಳ:** ದಿನಾಂಕ 16.12.2019ರಂದು ನಡೆದ ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಶ್ರೀ ಸುವರ್ಣಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನಾ ಮತ್ತು ಪೂಜಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್ ಮತ್ತು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರರವರು ಉಪಸ್ಥಿತರಿದ್ದರು ಹಾಗೂ ಸಹಕಾರಿಯ ಆಡಳಿತ ಮತ್ತು ಆರ್ಥಿಕ ಪ್ರಗತಿಯ ಕುರಿತು ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀಮತಿ ಭಾರತಿರವರು, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಜಿಲ್ಲಾ ಸಂಯೋಜಕರಾದ ಪವನ್ ಇವರು ಉಪಸ್ಥಿತರಿದ್ದರು.




**ಉತ್ತರ ಕನ್ನಡ:** ದಿನಾಂಕ 23.12.2019 ರಂದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ರೋಸ್ ಮೇರಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹೊನ್ನಾವರ ಇದರ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು ಶ್ರೀಮತಿ ಐಡಾ ಗೋಮಸ್ ಮತ್ತು ಸಿಇಓ ರೈಮಂಡ ಗೋಮಸ್ ಹಾಗೂ ಇನ್ನಿತರ ಸಹಕಾರಿ ಧುರೀಣರು ಉಪಸ್ಥಿತರಿದ್ದರು.



## ವಿಶೇಷ ಸಾಮಾನ್ಯ ಸಭೆ

**ತುಮಕೂರು:** ಕಲ್ಪತರು ಪರಿವರ್ತನಾ ಸೌಹಾರ್ದ ಸಹಕಾರಿ ನಿ., ಇದರ ವಿಶೇಷ ಸಾಮಾನ್ಯ ಸಭೆಯ ಉದ್ಘಾಟನೆಯನ್ನು ಮಾನ್ಯ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು ಮತ್ತು ಮಾಜಿ ಶಾಸಕರಾದ ಶ್ರೀ ಸುಧಾಕರ್ ಲಾಲ್ ರವರು ಮತ್ತು ಇತರೆ ಗಣ್ಯರು ನೆರವೇರಿಸಿದರು.

## ದಶಮಾನೋತ್ಸವ ಕಾರ್ಯಕ್ರಮ



**ಗೌರಿಬಿದನೂರು:** ದಿನಾಂಕ 17.12.2019ರಂದು ಗೌರಿಬಿದನೂರುನಲ್ಲಿ ನಡೆದ ಸಮೃದ್ಧಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿಯ ದಶಮಾನೋತ್ಸವ ಸಮಾರಂಭದ ಉದ್ಘಾಟನೆಯನ್ನು ಶ್ರೀಮತಿ ಶಶಿಕಲಾ ಜೊಲ್ಲೆ, ಮಾನ್ಯ ಸಚಿವರು, ಕರ್ನಾಟಕ ಸರ್ಕಾರ, ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮೃದ್ಧಿ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಡಾ॥ ಸಿ. ಗಂಗಲಕ್ಷ್ಮಮ್ಮ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಶ್ರೀಮತಿ ಎನ್. ಜ್ಯೋತಿರೆಡ್ಡಿ ಮಾಜಿ ಶಾಸಕರು, ಗೌರಿಬಿದನೂರು, ಇವರು ಉಪಸ್ಥಿತರಿದ್ದರು.

## ಇ–ಸ್ಟ್ಯಾಂಪಿಂಗ್ ಉದ್ಘಾಟನೆ



**ಉಡುಪಿ:** ಶ್ರೀ ಮಹಾಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸಹಕಾರಿಯ ಗ್ರಾಮೀಣ ಭಾಗದ ಜನತೆಗೆ ಉತ್ತಮ ಸೇವೆ ನೀಡುವ ಸಲುವಾಗಿ ಇ–ಸ್ಟ್ಯಾಂಪಿಂಗ್ ಸೌಲಭ್ಯ ಹಾಗು ಅಂತರರಾಷ್ಟ್ರೀಯಾ ಹಣ ವಿನಿಮಯ ವೆಸ್ಟರ್ನ್ ಯೂನಿಯನ್ ಮನಿಟ್ರಾನ್ಸ್‌ಫರ್ ಸೌಲಭ್ಯವನ್ನು ಸಾರ್ವಜನಿಕ ಸೇವೆಗೆ ಚಾಲನೆ ನೀಡಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಬಸ್ರೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಧರ್ಮದರ್ಶಿ ಬಿ. ಅಪ್ಪಣ್ಣ ಹೆಗ್ಡೆ ಇವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಸದಾಶಿವ ಶೆಟ್ಟಿ ಇವರ ವಹಿಸಿದರು. ಕಾರ್ಯಕ್ರಮದಲ್ಲಿ ವೇ॥ಮೂ॥ಯು. ಸೀತಾರಾಮ ಅಡಿಗರು ಉಳ್ತೂರು, ತಲ್ಲೂರು ಸುಪ್ರೀಂ ಟೈಲ್ಸ್ ಮಾಲಿಕ ಉದ್ಯಮಿ ಕೆ. ಜಯಕರ ಶೆಟ್ಟಿ, ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ ಬಿ.ಎಸ್. ಹಾಗೂ ಇತರರು ಉಪಸ್ಥಿತರಿದ್ದರು.

## ಕ್ಯಾಲೆಂಡರ್ ಬಿಡುಗಡೆ



**ಬೀದರ:** ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವು ವಿವೇಕನಂದ ಆಶ್ರಮ, ಬೀದರ ನಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು ಉಪಸ್ಥಿತರಿದ್ದರು.



**ಮೈಸೂರು:** ದಿನಾಂಕ 18.12.2019 ರಂದು ಪರಿವರ್ತನ ವಿವಿದೋದ್ದೇಶ ಮಹಿಳಾ ಸೌಹಾರ್ದ ಸಹಕಾರಿಯ 2020ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಯನ್ನು ಸಹಕಾರ ರತ್ನ ಪ್ರಶಸ್ತಿ ವಿಜೇತರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್ ಇವರು ನೇರವೇರಿಸಿದರು ಹಾಗೂ ಕಾರ್ಯಕ್ರಮದಲ್ಲಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಕೆ.ಎಸ್.ಲಲಿತ, ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಮತ್ತು ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.




**ಹಾಸನ :** ದಿನಾಂಕ 10.12.2019 ರಂದು ಜನನಿಧಿ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸದರಿ ಸಹಕಾರಿಯ ಗ್ರಾಹಕರ ಮತ್ತು ಸದಸ್ಯರ ಸ್ನೇಹ ಸಂಪರ್ಕ ಸಭೆಯು ಹಾಸನದ ಕನ್ನಡ ಸಾಹಿತ್ಯ ಭವನದಲ್ಲಿ ನಡೆಯಿತು ಹಾಗೂ ಸಹಕಾರಿಯ 2020ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜಪ್ಪ ಹೆಚ್.ಎಲ್, ಉಪಾಧ್ಯಕ್ಷರಾದ ಶ್ರೀ ನಾಗರಾಜು ಆರ್. ನಿರ್ದೇಶಕರುಗಳಾದ ಶ್ರೀಮತಿ ಜಯಲಕ್ಷ್ಮೀ, ಶ್ರೀ ಬಿ.ಸಿ. ಕೃಷ್ಣ, ಸಹಕಾರಿಯ ಸಲಹಾ ಸಮಿತಿ ಸದಸ್ಯರು, ಸಹಕಾರಿಯ ಸದಸ್ಯರು, ಗ್ರಾಹಕರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ



**ಕೊಪ್ಪಳ:** ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿ ನಿ,. ಗಿಣಿಗೇರಿ ಸಹಕಾರಿ ವತಿಯಿಂದ ಸರಕಾರಿ ಪ್ರೌಢ ಶಾಲೆ ಗಿಣಿಗೇರಾದಲ್ಲಿ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ ವಹಿಸಿದ್ದರು. ಉಪನ್ಯಾಸಕರಾಗಿ ಎಸ್, ವಿ, ಮೆಳಿ ಹಾಗೂ ಪತ್ರೆಪ್ಪ ಚತ್ತರಕಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಉತ್ತೇಜಿಸಲು "ಗೆಲವಿನ ಛಲ ಸೋಲಿನ ಭಯ" ಇದರ ಮಧ್ಯ ಗೆಲವು ನಿಮ್ಮದಾಗಲಿಯೆಂದು ಉದಾಹರಣೆಯೊಂದಿಗೆ ವಿವರಿಸಿದರು. ಶಾಲಾ ಮುಖ್ಯೊಪಾಧ್ಯಾಯರಾದ ಮಾಂತೇಶ ಚೆನ್ನಿನಾಯಕ, ಸಹಕಾರಿ ನಿರ್ದೇಶಕರಾದ ಪುಟ್ಟಪ್ಪ ವಾರದ, ಡಾ॥ ಬಸವರಾಜ, ಪಿ.ಎಮ್ ಯಮನೂರಪ್ಪ ಗಂಟಿ, ಕರಿಬಸವಾಜ ಗದ್ದಿ ಹಾಗೂ ಶಾಲಾ ಶಿಕ್ಷಕವೃಂದ ಉಪಸ್ಥಿತರಿದ್ದರು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ತುಮಕೂರು



ಶ್ರೀ ಎಸ್. ಲಕ್ಷ್ಮೀನಾರಾಯಣ
ಅಧ್ಯಕ್ಷರು




ಶ್ರೀ ಲಾನ್ಸಿ ಪಾಯಸ್
ಉಪಾಧ್ಯಕ್ಷರು

### ಸೀಬಿ ನರಸಿಂಹಸ್ವಾಮಿ ಸೌಹಾರ್ದ ಸಹಕಾರಿ ನಿ., ಮೈಸೂರು.



ಶ್ರೀ ಮೋಹನ್ ಕುಮಾರ್ ಟಿ.ಎಸ್
ಅಧ್ಯಕ್ಷರು



ಶ್ರೀ ವೇಣುಗೋಪಾಲ್ ಎಂ.ಟಿ
ಉಪಾಧ್ಯಕ್ಷರು

## ಸಿಂಡಿಕೇಟ್ ಸದಸ್ಯರಾಗಿ ಶ್ರೀ ಕೆ. ಎನ್ ಪಾಟೀಲ್ ಆಯ್ಕೆ



**ಹಾವೇರಿ :** ಶ್ರೀ ಚನ್ನೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಕೆ. ಎನ್ ಪಾಟೀಲ್ ಇವರು ಜಾನಪದ ವಿಶ್ವ ವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.



**ರಾಯಚೂರು:** ರಾಯಚೂರು ಸೌಹಾರ್ದ ಪತ್ತಿನ ಸಹಕಾರಿಯ 2020ರ ನೂತನ ಕ್ಯಾಲೆಂಡರ್‌ನ್ನು ಸಹಕಾರಿಯ ಅಧ್ಯಕ್ಷರಾಧ ಶ್ರೀ ವಿಶ್ವನಾಥ ಹಿರೇಮಠ ಇವರು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧಿಕಾರಿಗಳಾದ ಅವಿನಾಶ, ಸಂಗಮೇಶ, ಮಂಜುಳಾ ಹಾಗೂ ಶ್ರೇಯಾಂಕ ಉಪಸ್ಥಿತರಿದ್ದರು.

## ಇ–ಸ್ಟ್ಯಾಂಪಿಂಗ್ ಉದ್ಘಾಟನೆ



**ಕೊಪ್ಪಳ :** ದಿನಾಂಕ 27.112019ರಂದು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಶ್ರೀ ಅಮರಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿಯ ಇ–ಸ್ಟಾಂಪಿಂಗ್ ಉದ್ಘಾಟನೆಯನ್ನು ಶ್ರೀಶ್ರೀಶ್ರೀ ಶ.ಭ್ರ.108 ಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು ಮದ್ದಾನಿ ಹಿರೇಮಠರವರು ನೇರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಪೆದ್ದಿ, ಮತ್ತು ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಕುಂತಲಾ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಉದ್ಘಾಟನೆ



**ಮಂಡ್ಯ:** ಮಾರುತಿ ಸೌಹಾರ್ದ ಸಹಕಾರಿ ನಿ., ಬೆಳ್ಳೂರು, ನಾಗಮಂಗಲ ತಾಲ್ಲೂಕು ಇದರ ಉದ್ಘಾಟನೆಯನ್ನು ಮಂಡ್ಯ ಜಿಲ್ಲಾ ಸಂಯೋಜಕರಾದ ಶ್ರೀ ಚಂದ್ರಶೇಖರಯ್ಯ ಎಂ ಇವರು ನೇರವೇರಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಎಸ್ ಮಹೇಶ್ ರವರು ವಹಿಸಿದ್ದರು.



**ಚಾಮರಾಜನಗರ:** ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಉದ್ಘಾಟನೆಯನ್ನು ಚಾಮರಾಜನಗರ ಜಿಲ್ಲೆಯ ಉಪ ನಿಬಂಧಕರಾದ ಶ್ರೀ ಹೆಚ್. ಎಸ್ ರಮೇಶ್ ಇವರು ನೇರವೇರಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ನಾಗರತ್ನ ಇವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಎಸ್. ಬಾಲಸುಬ್ರಮಣ್ಯ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಚಂದ್ರಶೇಖರಯ್ಯ ಎಂ ಉಪಸ್ಥಿತರಿದ್ದರು.



**ಬೆಂಗಳೂರು:** ದಿನಾಂಕ 20.12.2019ರಂದು ಜನನಿಧಿ ಸೌಹಾರ್ದ ಸಹಕಾರಿಯು ಸದಸ್ಯರ ಹಾಗೂ ಗ್ರಾಹಕರ ಸ್ನೇಹ ಸಂಪರ್ಕ ಸಭೆಯನ್ನು ನಗರ ಕೇಂದ್ರ ಗ್ರಂಥಾಲಯ, ಕನ್ನಡ ಭವನ, ಹಳೇ ಎಸ್.ಪಿ. ಕಛೇರಿ ರಸ್ತೆ, ತುಮಕೂರಿನಲ್ಲಿ ಸಭೆಯನ್ನು ಏರ್ಪಡಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜಪ್ಪ ಹೆಚ್. ಎಲ್. ಉಪಾಧ್ಯಕ್ಷರಾದ ಶ್ರೀ ನಾಗರಾಜ ಆರ್, ನಿರ್ದೇಶಕರುಗಳಾದ ಶ್ರೀಮತಿ ಜಯಲಕ್ಷ್ಮೀ, ಸಹಕಾರಿಯ ಸಲಹಾ ಸಮಿತಿ ಸದಸ್ಯರುಗಳಾದ ಶ್ರೀಮತಿ ವಿನೋದಾ, ಸದಸ್ಯರು, ಗ್ರಾಹಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಶಿವಮೊಗ್ಗ:** ದಿನಾಂಕ 27–12–2019ರಂದು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರಿಯ ಸಾಗರ ಶಾಖೆಯ ಉದ್ಘಾಟನಾ ಸಮಾರಂಭವು ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರ ಭಾರತಿ ಮಹಾಸ್ವಾಮಿಗಳು, ಶ್ರೀ ರಾಮಚಂದ್ರಾಪುರ ಮಠ, ಶ್ರೀ ಅಭಿನವ ಚನ್ನಬಸವ ಮಹಾಸ್ವಾಮಿಗಳು, ಶಿವಯೋಗ ಆಶ್ರಮ ಇವರುಗಳ ದಿವ್ಯ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್ ಪ್ರಸನ್ನ ಕುಮಾರ್, ಶ್ರೀ ಎಸ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಶ್ರೀ ಮಂಜುನಾಥ ಗೌಡ, ಕೊಡಚಾದ್ರಿ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಸೀತಾರಾಮ ಭಟ್ ಹಾಗೂ ಹಾಲಿ ಅಧ್ಯಕ್ಷರಾದ ಶ್ರೀ ಹೆಚ್. ಎಮ್.ರಾಘವೇಂದ್ರ ಹಾಗೂ ಇನ್ನಿತರರು ಭಾಗವಹಿಸಿದ್ದರು.

## ಭೇಟಿ



**ಉಡುಪಿ:** ದಿನಾಂಕ 06–12–2019 ರಂದು ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್‌ರವರು ಭೇಟಿ ನೀಡಿ ಸಂಸ್ಥೆಯ ವಾರ್ಷಿಕ ವರದಿ ಮತ್ತು ಕಾರ್ಯಚಟುವಟಿಕೆಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ಸಹಕಾರಿಯ ಬೆಳವಣಿಗೆಯ ಕುರಿತು ಶ್ಲಾಘಿಸಿದರು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಮಹಾಬಲ ಕುಂದರ್‌ರವರು ಅವರನ್ನು ಶಾಲು ಹೊದಿಸಿ ಗೌರವಿಸಿದರು. ಈ ಸಂದರ್ಭ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ., ಸಂಯುಕ್ತ ಸಹಕಾರಿಯ ಉಡುಪಿ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ ಬಿ.ಎಸ್, ಉಡುಪಿ ಜಿಲ್ಲೆ ಸೌಹಾರ್ದ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಭುವನೇಶ್ ಪ್ರಭು ಮತ್ತು ಸಹಕಾರಿಯ ನಿರ್ದೇಶಕರಾದ ಭಾಸ್ಕರ ಕಾಂಚನ್, ರಾಘವೇಂದ್ರ ಸುವರ್ಣ, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಯುವಜನ ಮತ್ತು ಸಹಕಾರ ಕುರಿತು ಉಪನ್ಯಾಸ ಕಾರ್ಯಕ್ರಮ

## ಭಾರತದ ಆರ್ಥಿಕತೆಯ ಬೆಳವಣಿಗೆಗೆ ಸಹಕಾರಿಗಳ ಪಾತ್ರ ಅನನ್ಯ
## - ಜ್ಯೋತಿರ್ಮಯಾನಂದ ಸ್ವಾಮಿ.



**ಬೀದರ:** ಭಾರತದ ಆರ್ಥಿಕತೆಯ ಬೆಳವಣಿಗೆಯಲ್ಲಿ ಸಹಕಾರಿಗಳ ಪಾತ್ರ ಅನನ್ಯವಾಗಿದೆ. ಇಡಿ ವಿಶ್ವವೇ ಆರ್ಥಿಕತೆ ಕುಸಿತ ಕಂಡರು ಭಾರತದಲ್ಲಿ ಅದರ ಪ್ರಭಾವ ಹೆಚ್ಚಾಗಿರಲಿಲ್ಲ ಕಾರಣ ಭಾರತದಲ್ಲಿರುವ ಸಹಕಾರಿ ವ್ಯವಸ್ಥೆ ಗಟ್ಟಿಯಾದ ನೆಲೆ ಎಂದು ಬೀದರ ನಗರದ ವಿವೇಕಾನಂದ ಆಶ್ರಮದ ಮಹಾ ಸ್ವಾಮಿಗಳಾದ ಶ್ರೀ ಜ್ಯೋತಿರ್ಮಯಾನಂದ ನುಡಿದರು.

ನೌಬಾದನ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಬೀದರ ನಲ್ಲಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸೌಹಾರ್ದ ಸಹಕಾರಶ್ರೀ ಪ್ರಶಸ್ತಿ ಪ್ರಧಾನ ಸಮಾರಂಭ ಹಾಗೂ ಯುವಜನ ಮತ್ತು ಸಹಕಾರ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಸಹಕಾರಿಯ ಧ್ವಜಾರೋಹಣಾ ಮಾಡಿ ಮಾತನಾಡಿದರು. ಭಾರತೀಯ ಪರಂಪರೆಯಲ್ಲಿ ಕುಟುಂಬ ಮೂಲ ಸಹಕಾರ ವ್ಯವಸ್ಥೆಯಾಗಿದೆ ಕುಟುಂಬದಲ್ಲಿ ತಾಯಿ ರಾಷ್ಟ್ರದಲ್ಲಿ ರೈತರ ಪಾತ್ರ ಅನನ್ಯವಾಗಿದೆ ಎಂದು ನುಡಿದರು. ಯುವಕರು ಸಹಕಾರಿ ರಂಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರುವ ಮೂಲಕ ಆರ್ಥಿಕರಾಗಿ ಸದೃಡವಾಗಲು ಸಾಧ್ಯ ಎಂದು ನುಡಿದರು.

ಕಾರ್ಯಕ್ರಮದ ಉಪನ್ಯಾಸಕರಾದ ಶ್ರೀ ಗುರುನಾಥ ಜ್ಯಾಂತೀಕರ್ ಮಾತನಾಡಿ ಸಹಕಾರ ಚಳುವಳಿಗೆ ತನ್ನದೆಯಾದ ಇತಿಹಾಸವಿದೆ. ಭಾರತದಲ್ಲಿ ಸಹಕಾರಿ ಕ್ಷೇತ್ರವು ಅಧೀಕಾರಿಗಳ ಹಸ್ತಕ್ಷಪದಿಂದ ಸಾಕಷ್ಟು ಪ್ರಗತಿ ಸಾಧ್ಯವಾಗಿರುವುದಿಲ್ಲ ವಿಶಾದ ವ್ಯಕ್ತಪಡಿಸಿದರು. ಯುವಜನರು ಸಹಕಾರ ಕ್ಷೇತ್ರಕ್ಕೆ ಬರುವ ಮೂಲಕ ನಾಯಕರಾಗಿ ಉದ್ಯೋಗಿಗಳಾಗಿ ಕಾರ್ಯನಿರ್ವಹಿಸುವಂತೆ ಮನವಿ ಮಾಡಿದರು. ರಾಜ್ಯದಲ್ಲಿ ಸೌಹಾರ್ದ ಕಾಯ್ದೆ ಜಾರಿಗೆ ಬಂದು 19 ವರ್ಷಗಳು ಕಳೆದಿವೆ ರಾಜ್ಯ ಮತ್ತು ಜಿಲ್ಲೆಯಲ್ಲಿ ಈ ಕಾಯ್ದೆ ಅಡಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ ಮಾದರಿ ಸಹಕಾರಿಗಳಾಗಿವೆ ಎಂದು ಹರ್ಷ ವ್ಯಕ್ತಪಡಿಸಿದರು.

ಧ್ವಜಾರೋಹಣ ನೇರವೇರಿಸಿ ಮಾತನಾಡಿದ ಪ್ರೋ.ಮನೋಹರ ಭಕಾಲೆ ಮಾತನಾಡಿ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಜನೆಯ ಜೊತೆಗೆ ಉದ್ಯೋಗದ ನೀಡುವ ಶಿಕ್ಷಣ ಪಡೆದುಕೊಂಡು ತಮ್ಮ ಜೀವನ ರೂಪಿಸಿಕೊಳ್ಳಲು ಸಹಕಾರ ರಂಗ ಉತ್ತಮವಾದ ಕ್ಷೇತ್ರ ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಸತೀಶ್ ಪಾಟೀಲ್ ಇವರು ಇಂದು ನಾನು ರಾಜಕೀಯವಾಗಿ ಸಮಾಜದಲ್ಲಿ ಗುರುತಿಸಿಕೊಳ್ಳಬೇಕಾದರೆ ಸೌಹಾರ್ದ ಸಹಕಾರಿಯ ಚಳುವಳಿಯ ಮುಖ್ಯ ಕಾರಣ ಎಂದು ತಿಳಿಸಿದರು. ಪ್ರಸ್ತುತ ಸಮಾಜದಲ್ಲಿ ಸಹಕಾರ ಚಳುವಳಿಯನ್ನು ಹತ್ತಿಕುವ ಪ್ರಯತ್ನ ನಡೆಯುತ್ತಿದೆ ಎಂದು ತಿಳಿಸಿದರು.

ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದಿಂದ ಉತ್ತಮ ಸಹಕಾರಿಗಳಿಗೆ ಕೊಡಮಾಡುವ "ಸೌಹಾರ್ದ ಸಹಕಾರ ಶ್ರೀ" ಪ್ರಶಸ್ತಿಯನ್ನು ಶ್ರೀ ಆಂಜನೇಯ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಇದರ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರಿಗೆ ಪ್ರಧಾನ ಮಾಡಲಾಯಿತ್ತು.

ವೇದಿಕೆಯ ಮೇಲಿದ ಗಣ್ಯರಿಂದ ಹಾಗೂ ಸಹಕಾರಿಗಳಿಂದ ಸಹಕಾರಿಯ ಧ್ವಜಾರೋಹಣ ನೇರವೇರಿಸಲಾಯಿತ್ತು. ಪ್ರಾಸ್ತಾವಿಕ ಮತ್ತು ಸ್ವಾಗತ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ನೇರವೇರಿಸಿದರು. ಪ್ರಾರ್ಥನೆಯನ್ನು ಕು. ಕಲ್ಯಾಣಿ ಪ್ರಾರ್ಥಿಸಿದರು. ಒಕ್ಕೂಟದ ನಿರ್ದೇಶಕರಾದ ಶ್ರೀ ರಾಜಶೇಖರ ನಾಗಮೂರ್ತಿ ವಂದಿಸಿದರು, ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ವೀರಶೆಟ್ಟಿ ಕಾಮಣ್ಣಾ ನಿರೂಪಿಸಿದರು. ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಸತೀಶ್ ಪಾಟೀಲ್ ರಾಜಶೇಖರ ನಾಗಮುರ್ತಿ, ಕ್ರಾಂತಿಕುಮಾರ ಕುಲಾಲ್, ಶಿವಬಸಪ್ಪ ಚನ್ನಮಲ್ಲೆ, ಜಗನಾಥ ಕರಂಜೆ, ಶ್ರೀಕಾಂತ ಸ್ವಾಮಿ, ನಂದಾವಿವೇಕಾನಂದ, ಶ್ರೀಮತಿ ಮಾಯಾದೇವಿ ಸಿಂದನಕೇರಾ, ಪ್ರೋ ಹಾವಗೀರ ಮೈಲಾರೆ, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಅಮೃತ ಹೊಸಮನಿ, ಶ್ರೀ ಆಂಜನೆಯ ಪತ್ತಿನ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಶಾಮರಾವ ಕೊಂಡಾ, ದೇವೇಂದ್ರ ಕಮಲ್, ಬಸವರಾಜ ಬಾಪೂರೆ, ಶಿವಕುಮಾರ ಜಿಲ್ಲೆಯ ಸಹಕಾರಿಗಳು ಕಾಲೇಜು ಉಪಾನ್ಯಾಸಕರು, ವಿದ್ಯಾರ್ಥಿ ವಿದ್ಯಾರ್ಥಿನಿಯರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ. – ಸಂಪಾದಕರು

– ಮಹಾಂತಪ್ಪ, ಕಾನೂನು ಅಧಿಕಾರಿ, ಸಂಯುಕ್ತ ಸಹಕಾರಿ, ಬೆಂಗಳೂರು.

**1. ಪ್ರಶ್ನೆ: ಸಹಕಾರಿಯ ಕಾರ್ಯವ್ಯಾಪ್ತಿಯ ಹೊರಗಿನಿಂದ ಠೇವಣಿ ಸ್ವೀಕರಿಸಬಹುದೇ? ಸಾಲ ನೀಡಬಹುದೇ ?**

**ಉತ್ತರ :** ಸಹಕಾರಿಯ ಕಾರ್ಯವ್ಯಾಪ್ತಿಯ ಹೊರಗಿನಿಂದ ಠೇವಣಿ ಸ್ವೀಕರಿಸಲು ಅಥವಾ ಸಾಲ ನೀಡಲು ಸಂಘದ ಉಪವಿಧಿಗಳಲ್ಲಿ ಅವಕಾಶವಿರುವುದಿಲ್ಲ. ಉಪವಿಧಿಗಳಲ್ಲಿರುವ ಕಲಂಗಳ ಪ್ರಕಾರವೇ ಸಹಕಾರಿ ಕಾನೂನು ಮತ್ತು ನಿಯಮಗಳಿಗನುಗುಣವಾಗಿ ಸಹಕಾರಿಯ ತನ್ನ ಕಾರ್ಯವ್ಯಾಪ್ತಿಯ ಹೊರಗೆ ವ್ಯವಹರಿಸುವಂತಿರುವುದಿಲ್ಲ.

**2. ಪ್ರಶ್ನೆ: ಸಂಘ ಸಂಸ್ಥೆಗಳೊಡನೆ ವ್ಯವಹರಿಸಬಹುದೇ?**

**ಉತ್ತರ:** ಸಂಘವು ತನ್ನ ಸದಸ್ಯರೊಡನೆ ಮಾತ್ರ ವ್ಯವಹರಿಸಲು ಅವಕಾಶವಿರುತ್ತದೆ.

– ಶ್ರೀ ನಾರಾಯಣಗೋಖಲೆ, ಕಾರ್ಕಳ

## ತರಬೇತಿ ಕಾರ್ಯಕ್ರಮ



**ಕೊಪ್ಪಳ:** ಶ್ರೀ ಗುರು ಸೃಷ್ಠಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಗಿಣಿಗೇರಾ ಸಹಕಾರಿಯ ದಿನಾಂಕ 20–12–2019 ರಂದು ಶುಕ್ರವಾರ ಮಧ್ಯಾಹ್ನ 2:30ಕ್ಕೆ ಸರಕಾರಿ ಪ್ರೌಢ ಶಾಲೆ ಇಂದರಗಿ, ಶಾಲೆಯ ಆವರಣದಲ್ಲಿ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶರಾವ್ ಕುಲಕರ್ಣಿ ವಹಿಸಿದ್ದರು. ಹಾಗೂ ಸಹಕಾರಿ ಉಪಾಧ್ಯಕ್ಷರಾದ ಶ್ರೀ ಗಾಳೆಪ್ಪ ಗೊರವರ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಬರೀ ಹಣದ ವ್ಯವಹಾರ ಮಾಡುವುದಲ್ಲಾ ಸಹಕಾರಿಯು ಸಮಾಜಮುಖಿ ಕಾರ್ಯಕ್ರಮ ನಡಸುತ್ತಿರಬೇಕು, ಮೂಢನಂಬಿಕೆ ಕಂದಾಚಾರದ ಆಚಾರಣೆಗಳನ್ನು ತಿದ್ದುವಲ್ಲಿ ನಮ್ಮ ಸಂಸ್ಥೆ ಕಾರ್ಯನ್ಮುಖವಾಗಿದೆ ಎಂದು ತಿಳಿಸಿದರು.


ಕಾರ್ಯಕ್ರಮದಲ್ಲಿ ಉಪಾನ್ಯಾಸಕರಾಗಿ ಶ್ರೀ ಶೇಖರ ನಾಯಕ್ ತಮ್ಮ ವೈಜ್ಞಾನಿಕ ಜ್ಞಾನದಿಂದ ಮತ್ತು ತಮ್ಮ ಕೈ ಚಳಕದಿಂದ ಹಲವಾರು ಪವಾಡಗಳನ್ನು ಬಯಲುಮಾಡಿ ಶಾಲಾ ಮಕ್ಕಳು ಮತ್ತು ಜನರಿಗೆ ಒಳ್ಳೆಯ ತಿಳುವಳಿಕೆಯನ್ನು ತಿಳಿಸಿ ಹೇಳಿದರು. ಅಣ್ಣ ಬಸವಣ್ಣನವರು ನೀಡಿದ ಕಾಯಕದ ತತ್ವವನ್ನು ತಿಳಿಸಿ ಮರುಳು ಮಾಡವ ಸ್ವಾಮಿಗಳನ್ನು ನಂಬಬೇಡಿ ಎಂದು ತಿಳಿಸಿದರು. ಇಂತಹ ಸಹಕಾರಿ ಸಂಸ್ಥೆಗಳಲ್ಲಿ ಶ್ರೀ ಗುರು ಸೃಷ್ಠಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಗಿಣಿಗೇರಾ ಇದು ಒಂದು ಕರ್ನಾಟಕದಲ್ಲಿ ಮಾದರಿ ಸಹಕಾರಿಯಾಗಿದೆ ಎಂದು ಅಭಿಪ್ರಾಯ ಪಟ್ಟರು. ನಮ್ಮ ಸಹಕಾರಿಯ 2020ನೇ ಸಾಲಿನ ಕ್ಯಾಲೆಂಡರ್ ಬಿಡಗಡೆಯ ಉದ್ಘಾಟನೆಯನ್ನು ಶ್ರೀ ಚನ್ನಬಸಪ್ಪ ಕುಂಬಾರ, ಎಸ್‌ಡಿಎಮ್‌ಸಿ, ಅಧ್ಯಕ್ಷರು ಸರಕಾರಿ ಪ್ರೌಢ ಶಾಲೆ ಇಂದರಗಿ, ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಬಸವಾರಜ ಹಲಿಗೇರಿ ಎಸ್‌ಡಿಎಮ್‌ಸಿ, ಅಧ್ಯಕ್ಷರು, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇಂದರಗಿ, ಮುಖ್ಯ ಅತಿಥಿಗಳಾಗಿ ಶ್ರೀ ಮಾರ್ಕಸ ನ್ಯೂಟನ, ಮುಖ್ಯೋಪಾಧ್ಯಾಯರು ವೀರಪ್ಪ ಸಹ ಶಿಕ್ಷಕರು, ಗ್ರಾಮ ಪಂಚಾಯತ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸರ್ವ ಸದಸ್ಯರು, ಮಾನ್ಯ ಎಸ್‌ಡಿಎಮ್‌ಸಿ ಉಪಾಧ್ಯಕ್ಷರು ಸರ್ವ ಸದಸ್ಯರು, ಮತ್ತು ಗ್ರಾಮದ ಗುರುಹಿರಿಯರು ಹಾಗೂ ಸಹಕಾರಿ ಬಂಧುಗಳು, ವಿದ್ಯಾರ್ಥಿಗಳು. ಸದರಿ ಸಹಕಾರಿ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿ ಹಾಗೂ ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗ ಪಿಗ್ಮಿ ಸಂಗ್ರಹಕಾರು ಉಪಸ್ಥಿತರಿದ್ದರು. ಈ ಕಾರ್ಯಕ್ರಮವನ್ನು ಶ್ರೀ ವೀರಭದ್ರಯ್ಯ ಪುಜಾರ, ದೈಹಿಕ ಶಿಕ್ಷಕರು, ನಿರೂಪಿಸಿಕೊಟ್ಟರು. ಕಾರ್ಯಕ್ರಮದ ವಂದನಾರ್ಪನೆಯನ್ನು ಸಹಕಾರಿಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಏಣಿಗಿ ನೇರವೇರಿಸಿದರು.



**ಮಡಿಕೇರಿ :** ದಿನಾಂಕ 01.01.2020 ರಂದು ಕೊಡಗು ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಪೇಜಾವರ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಕೃಷ್ಣೋಪಾಸಕರೂ, ಭಾರತ ಕಂಡ ಮೇರು ಸಂತರೂ ಆದ ಉಡಿಪಿಯ ಅಷ್ಟಮಠಗಳಲ್ಲಿ ಒಂದಾದ ಪೇಜಾವರ ಮಠದ ಯತಿಶ್ರೇಷ್ಠ ವಿಶ್ವೇಶತೀರ್ಥ ಶ್ರೀಪಾದರು ಶ್ರೀ ಕೃಷ್ಣನ ಕರೆಗೆ ಓಗೊಟ್ಟು ಡಿಸೆಂಬರ್ 29, 2019ರಂದು ವೃಂದಾವನಸ್ಥರಾಗಿದ್ದಾರೆ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೋಭೆಯ ಸಂದರ್ಭಗಳಲ್ಲಿ ತಮ್ಮ ಸಮನ್ವಯದ ದೃಷ್ಟಿಯಿಂದ ಸೂಕ್ಷ್ಮ ವಿಚಾರಗಳನ್ನು ಬಗೆಹರಿಸುವುದಕ್ಕೆ ಪ್ರಸಿದ್ಧರಾಗಿದ್ದ, ಸಮಾಜಮುಖಿ ಮಾತೃ ಹೃದಯದ ಸಂತರನ್ನು ನಾಡು ಕಳೆದುಕೊಂಡಿದೆ, ಪೇಜಾವರ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ಸಮಸ್ತ ಸೌಹಾರ್ದ ಸಹಕಾರ ಕ್ಷೇತ್ರ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತದೆ.



**ಪೇಜಾವರ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಸಂಕ್ಷಿಪ್ತ ಪರಿಚಯ**

**ಜನನ :** ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಸಮೀಪದ ರಾಮಕುಂಜ ಎಂಬ ಪುಟ್ಟ ಗ್ರಾಮದಲ್ಲಿ ಏಪ್ರಿಲ್ 27, 1931ರಲ್ಲಿ ಪ್ರಜಾಪತಿ ಸಂವತ್ಸರದ ವೈಶಾಖ ಶುದ್ಧ ದಶಮಿಯ ದಿನ ನಾರಾಯಣಾಚಾರ್ಯ ಮತ್ತು ಕಮಲಮ್ಮ ದಂಪತಿಯ ಎರಡನೆಯ ಪುತ್ರರಾಗಿ ಜನನ. **ಬಾಲ್ಯ ನಾಮ : ವೆಂಕಟರಮಣ.**

**ಶಿಕ್ಷಣ :** ರಾಮಕುಂಜದ ಹಳ್ಳಿಯ ಸಂಸ್ಕೃತ ಪಾಠ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ. 7ನೇ ವರ್ಷಕ್ಕೆ ಉಪನಯನವಾಗಿ, ಗಾಯತ್ರೀಮಂತ್ರದ ಉಪದೇಶ. ಡಿಸೆಂಬರ್ 3, 1938ರಲ್ಲಿ ಹಂಪೆಯ ಪ್ರಾಣದೇವರ ಸನ್ನಿಧಿಯಲ್ಲಿ ಪ್ರಣವೋಪದೇಶ. ಬಾಲಕ ವೆಂಕಟರಮಣರಿಗೆ ವಿಶ್ವೇಶತೀರ್ಥರಾಗಿ ಮರುನಾಮಕರಣ. ಏಳು ವರ್ಷದ ಬಾಲಕ ಪೇಜಾವರ ಮಠದ ಯತಿಯಾಗಿ ಪೀಠವನ್ನು ಅಲಂಕರಿಸಿದರು. ಭಂಡಾರಕೇರಿ ಮಠಾಧೀಶರಾದ ವಿದ್ಯಾಮಾನ್ಯತೀರ್ಥರು ವಿಶ್ವೇಶತೀರ್ಥರಿಗೆ ವಿದ್ಯೆಯನ್ನು ಧಾರೆ ಎರೆದರು.

**ಬಾಲಯತಿಗೆ ಗೌರವ :** ಚುರುಕು ಬುದ್ಧಿಯ ಬಾಲಯತಿಯನ್ನು 1943ರಲ್ಲಿ ಭಂಡಾರಕೇರಿಯಲ್ಲಿ ನಡೆದ ಶ್ರೀಮದ್ವರಾದ್ಧಾಂತ ಸಂವರ್ಧಿನಿ ಸಭೆಗೆ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಆಗ ಪೇಜಾವರ ಶ್ರೀಗಳ ವಯಸ್ಸು 12 ವರ್ಷ. ಅಂದಿನ ವಿದ್ವತ್ ಸಭೆಯಲ್ಲಿ ಬಾಲಯತಿಯ ಭಾಷಣಕ್ಕೆ ಇಡೀ ಸಭೆ ತಲೆದೂಗಿತ್ತು.

**ವಿಶ್ವೇಶತೀರ್ಥರ ಮಹತ್ವದ ಕಾರ್ಯವೈಖರಿ :**

- ಅಖಿಲ ಭಾರತ ಮಾಧ್ವ ಮಹಾಮಂಡಲ, ಪೂರ್ಣ ಪ್ರಜ್ಞ ವಿದ್ಯಾಪೀಠ, ಬೆಂಗಳೂರು, ಪೂರ್ಣಪ್ರಜ್ಞ ಸಂಶೋಧನಾ ಮಂದಿರ, ಸಂಸ್ಕೃತ ಪಾಠಶಾಲೆಗಳು, ಪ್ರೌಢಶಾಳೆ, ಪದವಿ ಪೂರ್ವ ಕಾಲೇಜು, ಡಿಗ್ರಿ ಕಾಲೇಜು, ವೃದ್ಧಾಶ್ರಮ, ವಿದ್ಯಾರ್ಥಿ ನಿಲಯ ಶಿಶುಮಂದಿರ ಸೇರಿದಂತೆ ಹಲವು ಸಂಸ್ಥೆಗಳ ನಿರ್ಮಾಣ.
- 2005ರಲ್ಲಿ ತಮಿಳುನಾಡಿನ ಕೆಲವು ಪ್ರದೇಶಗಳು ಸುನಾಮಿಯಿಂದ ಪೀಡಿತವಾದಾಗ ಕಡಲೂರಿನ ಮೊದಲಿಯಾರ್ ಕುಪ್ಪಂನಲ್ಲಿ 20 ಲಕ್ಷಕ್ಕೂ ಮೀರಿದ ಆರ್ಥಿಕ ವ್ಯವಸ್ಥೆಯಲ್ಲಿ ಗೃಹ ನಿರ್ಮಾಣ.
- 2009ರಲ್ಲಿ ಉತ್ತರ ಕರ್ನಾಟಕ ಪ್ರದೇಶಗಳು ಜಲಪ್ರಳಯಕ್ಕೆ ತುತ್ತಾದಾಗ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ದವಸ – ಧಾನ್ಯ, ವಸ್ತ್ರ, ಪಾತ್ರೆ ಸಾಮಗ್ರಿಗಳು, ಆಹಾರ ಪದಾರ್ಥಗಳ ವಿತರಣೆ.
- ಗುಲ್ಬಾರ್ಗದ ದೇವಗಿರಿ ತಾಲ್ಲೂಕಿನ ಕೋಡಿಕೋಬಾಳ ಗ್ರಾಮಗಳಲ್ಲಿ 1.25ಕೋಟಿ ಆರ್ಥಿಕ ವೆಚ್ಚದಲ್ಲಿ ದೀನದಲಿತರಿಗೆ ಗೃಹ ನಿರ್ಮಾಣ.
- ದಲಿತೋದ್ಧಾರ, ಅಸ್ಪೃಶ್ಯತೆ ನಿವಾರಣೆಯ ಪ್ರಯತ್ನಗಳು, ಮತಾಂತರ, ಗೋ ಹತ್ಯೆಯ ವಿರುದ್ಧ ಹೋರಾಟಗಳು ಇವರ ಸಮಾಜಮುಖಿ ಚಿಂತನೆಯ ಪ್ರತೀಕವಾದರೆ, ಪಾಜಕದಲ್ಲಿ ಗಣಿಗಾರಿಕೆ ವಿರೋಧ ಆಂದೋಲನ, ಕೈಗಾ ಅಣುಸ್ಥಾವರ ವಿರೋಧ, ಪಶ್ಚಿಮ ಘಟ್ಟ ಉಳಿಸಿ, ಶರಾವತಿ ಕಣಿವೆ ಚಳುವಳಿ ಸೇರಿದಂತೆ ಹಲವು ಹೋರಾಟಗಳು ಪರಿಸರ ಪ್ರೇಮದ ಪ್ರತೀಕಗಳಾಗಿವೆ.

**ಪೇಜಾವರ ಶ್ರೀಗಳ ಕೆಲವು ಗ್ರಂಥಗಳು :** ತತ್ವಾಂಜಲಿ, ಗೀತಾಸಾರೋದ್ಧಾರ, ಗೀತಾಸಾರೋಧಕ (ಹಿಂದು, ಇಂಗ್ಲಿಷ್, ತೆಲುಗು), ಈಶಾವಾಸ್ಯೋಪನಿಷತ್ ಕನ್ನಡ ಅನುವಾದ, ವಿಷ್ಣು ತತ್ವ ನಿರ್ಣಯ ಕನ್ನಡ ಅನುವಾದ, ಶ್ರೀಮನ್ನ್ಯಾಯಸುಧಾರಸ 2 ಭಾಗಗಳು, ಸಂದೇಶದ ಕಥೆಗಳು, ದಶೋಪನಿಷತ್‌ಸಾರ, ನ್ಯಾಯಾಮೃತನವನೀತ (ಸಂಸ್ಕೃತ), ಶ್ರೀರಾಮಾಯಣದ ಸಾರ ಮತ್ತು ಪಾತ್ರಚಿತ್ರಣ, ಮಹಾಭಾರತಸಾರ.



# ಸೌಹಾರ್ದ ಕ್ಷೇತ್ರ ನಡೆದು ಬಂದ ಹಾದಿ

(ದಿನಾಂಕ 01.01.2020 ರಂದು ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಮಾವೇಶದ ಸಂದರ್ಭದಲ್ಲಿ ವಿಶೇಷ ಲೇಖನ)

– ಶ್ರೀ ಎಸ್. ಆರ್. ಸತೀಶ್ಚಂದ್ರ, ಅಧ್ಯಕ್ಷರು, ಕ್ಯಾಂಪ್ಕೋ, ಮಂಗಳೂರು ಹಾಗೂ ಶ್ರೀ ಸರಸ್ವತಿ ಸೌಹಾರ್ದ ಸಹಕಾರಿ ನಿ., ಪುತ್ತೂರು.

**ದೇಶದ ಸಹಕಾರಿ ಚಳುವಳಿ :**

ಭಾರತ ದೇಶದ ಸಹಕಾರಿ ಚಳುವಳಿಗೆ 115 ವರ್ಷಗಳ ಇತಿಹಾಸವಿದೆ ಈ ಸಹಕಾರ ಚಳುವಳಿ ಅನೇಕ ಏರುಪೇರುಗಳ ಮಧ್ಯೆ ದೇಶದಲ್ಲಿ ಹಸಿರು ಕ್ರಾಂತಿಯ ಹರಿಕಾರನಾಗಿ ಶ್ವೇತ ಕ್ರಾಂತಿಯ ನೇತೃತ್ವ ವಹಿಸಿಕೊಂಡು ರೈತನ ಹಾಗೂ ಜನ ಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗಿದೆ. ಸಹಕಾರ ಕ್ಷೇತ್ರವು ದೇಶದ ಅರ್ಥ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಇದುವರೆಗೆ 8.5 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು 30 ಕೋಟಿ ಸದಸ್ಯರನ್ನು ಹೊಂದಿದೆ. 33 ಲಕ್ಷಕೋಟಿ ಷೇರು ಬಂಡವಾಳವಿದ್ದು 60 ಲಕ್ಷಕೋಟಿ ದುಡಿಯುವ ಬಂಡವಾಳ ಹೊಂದಿದೆ.

ನೂರಕ್ಕೆ ನೂರು ಗ್ರಾಮಗಳು ಸಹಕಾರ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಸಹಕಾರ ಕ್ಷೇತ್ರದ ಮೂಲಕ ಕೃಷಿ ಸಾಲ ವಿತರಣೆ 20%, ರಸಗೊಬ್ಬರ ವಿತರಣೆ 36%, ರಸಗೊಬ್ಬರ ಉತ್ಪಾದನೆ 26.5%, ಸಕ್ಕರೆ ಉತ್ಪಾದನೆ 65% ಇದ್ದು, ದೇಶದಲ್ಲಿ ಇಫ್ಕೋ, ಕ್ರಿಬ್ಕೋ, ಕ್ಯಾಂಪ್ಕೋ ಮುಂತಾದಂತಹ ಅಂತರಾಷ್ಟ್ರೀಯ ಮಟ್ಟದ ಸಹಕಾರಿ ಸಂಸ್ಥೆಗಳು, ವಿದೇಶಿ ಬ್ಯಾಂಕುಗಳ ಮಾದರಿಯ ಗುಣಮಟ್ಟವುಳ್ಳ ಪಟ್ಟಣ ಸಹಕಾರ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ರಾಷ್ಟ್ರದ ಅರ್ಥ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ.

**ಕರ್ನಾಟಕದಲ್ಲಿ ಸಹಕಾರಿ ಚಳುವಳಿ :**

1904 ರಲ್ಲಿ ಸಹಕಾರ ಕಾಯ್ದೆಯ ಮೂಲಕ ದೇಶದಲ್ಲಿ ಸಹಕಾರ ಚಳುವಳಿ ಪ್ರಾರಂಭವಾದ ಮೇಲೆ ಕರ್ನಾಟಕದಲ್ಲಿ 1905 ಮೇ 8ರಂದು ಅಂದಿನ ಅಖಂಡ ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನ ಕಣಗಿನ ಹಾಳದಲ್ಲಿ (ಇಂದಿನ ಗದಗ ಜಿಲ್ಲೆ) ದಿ. ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಎಂಬ ಗ್ರಾಮದ ಹಿರಿಯರು ಕೃಷಿ ಪತ್ತಿನ ಸಹಕಾರ ಸಂಘವನ್ನು ಪ್ರಾರಂಭಿಸಿದರು. ಇದು ದೇಶದ ಪ್ರಥಮ ಕೃಷಿ ಪತ್ತಿನ ಸಹಕಾರ ಸಂಘವೆಂದು ಪ್ರಸಿದ್ಧಿ ಪಡೆದಿದೆ. ಕರ್ನಾಟಕದಲ್ಲಿ 43,672ಕ್ಕೂ ಹೆಚ್ಚು ವಿವಿಧ ವರ್ಗದ 50 ವಿಧವಾದ ಸಹಕಾರ ಸಂಸ್ಥೆಗಳು, 38203 ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳು, 2.18 ಕೋಟಿ ಸದಸ್ಯತ್ವ, ಶೇಕಡಾ 70% ರಷ್ಟು ಹಳ್ಳಿಗಳ ವ್ಯಾಪ್ತಿ, ಶೇರುಬಂಡವಾಳ ರೂ. 5264 ಕೋಟಿ, ರೂ. 73096 ಕೋಟಿ ಠೇವಣಿ, ರೂ. 120811 ಕೋಟಿ ರೂಗಳ ದುಡಿಯುವ ಬಂಡವಾಳ ಕ್ಯಾಪ್ಕೋ, ಮ್ಯಾಮ್ಕೊ, ಬಮೂಲಾ, ಅಪೇಕ್ಸ್ ಬ್ಯಾಂಕ್, ಮಾರಾಟ ಮಹಾಮಂಡಳ, 265 ಪಟ್ಟಣ ಸಹಕಾರ ಬ್ಯಾಂಕುಗಳು, 4,993 ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು 12,990 ಹಾಲು ಉತ್ಪಾದಕರ ಸಹಕಾರ ಸಂಸ್ಥೆಗಳು, ಕ್ರೆಡಿಟ್ ಸಹಕಾರ ಸಂಸ್ಥೆಗಳು, ಗೃಹ ನಿರ್ಮಾಣ ಸಹಕಾರ ಸಂಸ್ಥೆಗಳು 4,850 ಸೌಹಾರ್ದ ಸಹಕಾರಿಗಳು, ಹೀಗೆ ಇನ್ನೂ ಬೇರೆ ಬೇರೆ ಕ್ಷೇತ್ರಗಳಲ್ಲಿ ಅನೇಕ ಉತ್ತಮ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 25,271ಕ್ಕಿಂತ ಹೆಚ್ಚಿನ ಸಹಕಾರ ಸಂಸ್ಥೆಗಳು ಲಾಭದಲ್ಲಿವೆ.

**ಸೌಹಾರ್ದ ಸಹಕಾರಿ ಚಳುವಳಿಯ ಪ್ರಗತಿಯ ಪಕ್ಷಿನೋಟ :**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು. ದೇಶದ ಅರ್ಥವ್ಯವಸ್ಥೆಯ ಬುನಾದಿಯಾಗಿರುವ ಸಹಕಾರ ಕ್ಷೇತ್ರಕ್ಕೆ "ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ" ಎಂಬ ಮೂಲ ಆಶಯದೊಂದಿಗೆ ಸ್ವಾತಂತ್ರವನ್ನು ನೀಡುವ ನಿಟ್ಟಿನಲ್ಲಿ ಕ'ರ್ನಾ ಟ ಕ' ಸರ್ಕಾರವು 01 ಜನವರಿ 2001ರಂದು " ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997"ನ್ನು ಜಾರಿಗೆ ತಂದಿರುತ್ತದೆ. ಈ ಹಿನ್ನೆಲೆಯಲ್ಲಿ ಜನವರಿ 01ನ್ನು ರಾಜ್ಯದ ಎಲ್ಲೆಡೆ "ಸೌಹಾರ್ದ ಸಹಕಾರಿ ದಿನಾಚರಣೆ"ಯಾಗಿ ಆಚರಿಸಲಾಗುತ್ತಿದೆ. ಸಹಕಾರ ಕ್ಷೇತ್ರಕ್ಕೆ ಹೊಸ ಅಲೆಯನ್ನು ನೀಡುವ ಮೂಲಕ ಬದಲಾವಣೆ ಮೂಡಿಸಿ, ಸಹಕಾರ ಕ್ಷೇತ್ರಕ್ಕೆ ವೇಗವನ್ನು ನೀಡಿರುವ ಕೀರ್ತಿ ಸೌಹಾರ್ದ ಸಹಕಾರಿಗಳದ್ದು. ಇಂತಹ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಯ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಮಾಡುತ್ತ, ಶಾಸನಬದ್ಧ ಕಾರ್ಯನಿರ್ವಹಣೆ, ತರಬೇತಿ, ಪ್ರಚಾರ, ಶಿಕ್ಷಣ ಚಟುವಟಿಕೆಗಳನ್ನು ಸೌಹಾರ್ದ ಸಹಕಾರ ಕ್ಷೇತ್ರದ ಮಾತೃ ಸಂಸ್ಥೆಯಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದು ಕಾರ್ಯನಿರ್ವಹಿಸುತ್ತಾ ಬಂದಿದೆ.

ಸಹಕಾರ ಚಳುವಳಿಗೆ ಹೊಸ ಚೈತನ್ಯವನ್ನು ನೀಡಿರುವ ಸೌಹಾರ್ದ ಕಾಯ್ದೆಯಡೆ ರಾಜ್ಯದಲ್ಲಿ ಪ್ರಸ್ತುತ 4,850ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ.

**1. ಇ–ಸ್ಟಾಂಪಿಂಗ್ ಕೇಂದ್ರಗಳು :**

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ 1,304ಕ್ಕೂ ಹೆಚ್ಚು ಇ ಸ್ಟಾಂಪಿಂಗ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ರಾಜ್ಯದ ಬೊಕ್ಕಸಕ್ಕೆ ಪ್ರತಿದಿನ 1ಕೋಟಿಗೂ ಹೆಚ್ಚು ರಾಜಸ್ವವನ್ನು ನೀಡುತ್ತಿದೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 60 ಲಕ್ಷಕ್ಕೂ ಹೆಚ್ಚು ಸದಸ್ಯರು ತೊಡಗಿಸಿಕೊಂಡಿದ್ದಾರೆ. 55,000ಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆ. 742ಕೋಟಿ ರೂಗಳ ಶೇರು ಬಂಡವಾಳ,

18,004 ಕೋಟಿ ರೂಗಳ ಠೇವಣಿ, 1,886ರೂ ಕೋಟಿಗಳ ನಿಧಿಗಳು, 14,534ರೂ ಕೋಟಿಗಳ ಸಾಲ, 20,253ಕೋಟಿ ರೂಗಳ ದುಡಿಯುವ ಬಂಡವಾಳ, ರೂ264 ಕೋಟಿ ರೂಗಳ ಲಾಭದ ಹೆಗ್ಗಳಿಕೆ ಈ ಕ್ಷೇತ್ರದ್ದಾಗಿದೆ.

**2. ಸಂಯುಕ್ತ ಸಹಕಾರಿಯ ಕ್ರಿಯಾ ಯೋಜನೆ :**

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಸಂಯುಕ್ತ ಸಹಕಾರಿಯು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದೆ. ಅವುಗಳನ್ನು ನಿಮ್ಮ ಮುಂದೆ ಸಾದರಪಡಿಸಲು ಸಂತೋಷವೆನಿಸುತ್ತದೆ.

**3. ಸಂಯುಕ್ತ ಸಹಕಾರಿಗೆ, ಪ್ರಾಂತೀಯ ಕಛೇರಿಗಳಿಗೆ ಕಟ್ಟಡ ಮತ್ತು ಪ್ರತಿ ಜಿಲ್ಲೆಗಳಲ್ಲಿ ಸಂಯುಕ್ತ ಸಹಕಾರಿಯ ಸಂಪರ್ಕ ಕಚೇರಿ :**

ವೇಗವಾಗಿ ಬೆಳೆಯುತ್ತಿರುವ ಸೌಹಾರ್ದ ಸಹಕಾರ ಕ್ಷೇತ್ರದ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಪ್ರತೀ ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿಯ ಸಂಪರ್ಕ ಕಛೇರಿಯನ್ನು ಪ್ರಾರಂಭಿಸಲಾಗಿದೆ.

**4. ಸಂಯುಕ್ತ ಸಹಕಾರಿಯ ಕಾರ್ಯದಲ್ಲಿ ವೇಗವರ್ಧನೆ ಮತ್ತು ಅಧಿಕಾರ ವಿಕೇಂದ್ರೀಕರಣ :**

- ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯಲ್ಲಿ ವೇಗವನ್ನು ಸಾಧಿಸುವುದು, ಅದಕ್ಕಾಗಿ ಅಧಿಕಾರ ವಿಕೇಂದ್ರಕರಣದತ್ತ ಹೆಜ್ಜೆ ಹಾಕುವುದು, ವಿಭಾಗೀಯ ಕಚೇರಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡುವುದು, ಪ್ರತಿ ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳಿಗೆ ಬೇಕಿರುವ ಅಗತ್ಯ ಮಾರ್ಗದರ್ಶನ ಸಲಹೆ ಶಿಕ್ಷಣ ತರಬೇತಿಗಳನ್ನು ಒದಗಿಸುವ ಪ್ರಯತ್ನವನ್ನು ಆರಂಭಿಸಲಾಗಿದೆ.
- ಸಂಯುಕ್ತ ಸಹಕಾರಿಗೆ ಒಂದು ಸುಸಜ್ಜಿತ ಕಟ್ಟಡ ನಿರ್ಮಾಣ. ಅದರಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಆಡಳಿತ ಮಂಡಳಿಯ ಸಭಾಂಗಣ, ತರಬೇತಿ ಸಭಾಂಗಣ, ಗ್ರಂಥಾಲಯ, ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಬೆಂಗಳೂರಿಗೆ ಬಂದಾಗ ಉಳಿದುಕೊಳ್ಳುವ ಸಲುವಾಗಿ ಅತಿಥಿ ಗೃಹ ನಿರ್ಮಾಣ ವ್ಯವಸ್ಥೆ ಬೆಳಗಾವಿ ವಿಭಾಗಕ್ಕೆ ಸ್ವಂತ ಕಟ್ಟಡ ನಿರ್ಮಾಣ, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಗೆ ಸ್ವಂತ ನಿವೇಶನ ಹೊಂದುವುದು.

**5. ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿ ಕ್ಷೇತ್ರ :**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 101 ಸೌಹಾರ್ದ ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದು, 1.50 ಲಕ್ಷ ಸದಸ್ಯರು ಸೌಹಾರ್ದ ಸಹಕಾರಿ ಚಳುವಳಿಯಲಿದ್ದು, ಒಟ್ಟು 833 ಕೋಟಿಗೂ ಹೆಚ್ಚು ದುಡಿಯುವ ಬಂಡವಾಳದೊಂದಿಗೆ 650 ಕೋಟಿ ಸಾಲವನ್ನು ವಿತರಿಸಲಾಗಿರುತ್ತದೆ. 600 ಕೋಟಿಗು ಹೆಚ್ಚು ಠೇವಣಿಗಳನ್ನು ಸಂಗ್ರಹಿಸಿ 85 ಕೋಟಿಗೂ ಹೆಚ್ಚು ಲಾಭವನ್ನು ಗಳಿಸಿರುತ್ತವೆ. ಸೌಹಾರ್ದ ಕ್ಷೇತ್ರದಲ್ಲಿ ಸುಮಾರು 2000 ಜನರಿಗೆ ಪ್ರತ್ಯಕ್ಷ ಹಾಗು ಪರೂಕ್ಷವಾಗಿ ಉದ್ಯೋಗವನ್ನು ಒದಗಿಸಿರುತ್ತದೆ ಸರಕಾರದ ಯಾವುದೇ ಸಹಾಯದನ ಪಡೆಯದೇ ಸಮಾಜಕ್ಕೆ ತನ್ನದೆಯಾದ ಕೊಡುಗೆಯನ್ನು ನೀಡುತ್ತಾ ಸಹಕಾರಿ ರಂಗದ ನವ್ಯಚೇತನಗಳಾಗಿ ಹೊರಹೊಮ್ಮುತ್ತಿವೆ.

**6. ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿ ನಿಯಮಿತ:**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ ನಿರ್ದೇಶನದಂತೆ ಪ್ರಾರಂಭವಾದ ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿ ನಿಯಮಿತವು ಸಹಕಾರಿಯ ಪ್ರಮುಖ ಧ್ಯೇಯೋದ್ದೇಶಗಳನ್ನು ಪ್ರಚಾರ ಪಡಿಸುವುದು ಸೌಹಾರ್ದ ಸಹಕಾರಿಗಳು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುವುದು. ಸಿಬಿಲ್ ವ್ಯವಸ್ಥೆ ಸಂಚಾರಿ ನ್ಯಾಯಾಲಯ ಮುಂತಾದ ವ್ಯವಸ್ಥೆಗಳನ್ನು ರೂಪಿಸಿ ಸೌಹಾರ್ದ ಸಹಕಾರಿಗಳ ಪರವಾಗಿ ಕೆಲಸ ಮಾಡಲು ಜಿಲ್ಲಾ ಒಕ್ಕೂಟದ ಪ್ರಮುಖ ಉದ್ದೇಶವಾಗಿರುತ್ತದೆ. ಈ ಉದ್ದೇಶಗಳನ್ನಿಟ್ಟುಕೊಂಡು ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿ ನಿಯಮಿತ ಮಂಗಳೂರು ಇದು ನೊಂದಣಿಯಾಗಿ ಈ ನಿಟ್ಟಿನಲ್ಲಿ ಕಾರ್ಯಾರಂಭಿಸಿರುತ್ತದೆ.

**7. ಸೌಹಾರ್ದ ಸಮಾವೇಶ – 2020 :**

ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳನ್ನು ಒಗ್ಗೂಡಿಸಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ವಿಶೇಷವಾಗಿ ಆಚರಿಸಬೇಕು ಎನ್ನುವ ನಿಟ್ಟಿನಲ್ಲಿ ದಿನಾಂಕ:01–01–2020ರ ಬುಧವಾರ ಮಂಗಳೂರಿನ ಪುರಭವನದಲ್ಲಿ "ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಬೃಹತ್ ಸಮಾವೇಶ" ವನ್ನು ಆಯೋಜಿಸಲಾಗಿದೆ. ಸದರಿ ಸಮಾವೇಶದಲ್ಲಿ ಸೌಹಾರ್ದ ಸಹಕಾರಿಗಳಿಗೆ ಅನುಕೂಲವಾಗುವ ಸಿಬಿಲ್ ಮಾದರಿಯ ತಂತ್ರಾಂಶದ ಬಿಡುಗಡೆ, ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಾಹಿತಿ ಕೈಪಿಡಿ ಹಾಗೂ ಸೌಹಾರ್ದ ಸಹಕಾರಿಗಳ ಸದಸ್ಯರು/ನಿರ್ದೇಶಕರು/ಸಿಬ್ಬಂದಿಗಳಿಗಾಗಿ ಪ್ರಬಂಧ ಮತ್ತು ರಸಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಅದೇ ದಿನದಂದು ಒಕ್ಕೂಟದ ಕಛೇರಿಯ ಅಧಿಕೃತ ಉದ್ಘಾಟನೆಯಾಗಲಿದ್ದು ಈ ಸಮಾವೇಶದಲ್ಲಿ ಸಹಕಾರ ಸಚಿವರು, ಜಿಲ್ಲಾ ಉಸ್ತವಾರಿ ಸಚಿವರು, ಜಿಲ್ಲೆಯ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ರಾಜ್ಯದ ಸಹಕಾರ ಸಂಘಗಳ ನಿಬಂಧಕರು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರು, ಕ್ಯಾಂಪ್ಕೋ ಲಿಮಿಟೆಡ್ ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಅಧಿಕಾರಿಗಳು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರುಗಳು ಭಾಗವಹಿಸಲಿದ್ದಾರೆ.

**8. ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ :**

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತವು "ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997" ರ ಅಡಿಯಲ್ಲಿ ನೊಂದಣೆಗೊಂಡ ಕರ್ನಾಟಕ ರಾಜ್ಯದ 9ನೇ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಪ್ರಥಮ ಸೌಹಾರ್ದ ಸಹಕಾರಿ ಸಂಸ್ಥೆಯಾಗಿದೆ. ಇ–ಸ್ಟಾಂಪಿಂಗ್ ವ್ಯವಸ್ಥೆಯನ್ನು ರಾಜ್ಯದಲ್ಲೇ ಪ್ರಥಮವಾಗಿ ಜಾರಿಗೆ ತಂದ ಸೌಹಾರ್ದ ಸಹಕಾರಿ ಸಂಸ್ಥೆಯಾಗಿದೆ. ಪ್ರಸ್ತುತ ಸಹಕಾರಿಯು ರಾಜ್ಯಾದ್ಯಂತ 17 ಶಾಖೆಗಳನ್ನು ಹೊಂದಿ ಕಾರ್ಯಾಚರಿಸುತ್ತಿದೆ.

# ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ–ಸಿಟಿಜನ್‌ಷಿಪ್ ಅಮೆಂಡ್‌ಮೆಂಟ್ ಆಕ್ಟ್)

– ಶ್ರೀ ರಘುನಂದನ ಕೆ, ಉಪಪ್ರಧಾನ ವ್ಯವಸ್ಥಾಪಕ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಪೌರತ್ವ ತಿದ್ದುಪಡಿ ಕಾಯ್ದೆ 2019 ದೇಶದಲ್ಲಿ ಜಾರಿಯಾಗಿದೆ. ಈ ಬಗ್ಗೆ ದೇಶಾದ್ಯಂತ ಪರ ವಿರೋಧ ಚರ್ಚೆಗಳು ನಡೆಯುತ್ತಿವೆ. ಈ ಬಗ್ಗೆ ಸೌಹಾರ್ದ ಸಹಕಾರಿಗಳಿಗೆ ಕನಿಷ್ಠ ಮಾಹಿತಿಯನ್ನು ನೀಡುವ ಉದ್ದೇಶದಿಂದ ಈ ಲೇಖನವನ್ನು ಪ್ರಕಟಿಸಿದೆ.

**ಪೌರತ್ವ ಕಾಯ್ದೆ ಪರಿಚಯ :** ಪೌರತ್ವ ಕಾಯ್ದೆ ಇದು 1955ರಿಂದಲೇ ಜಾರಿಯಲ್ಲಿರುವ ಕಾಯ್ದೆಯಾಗಿದೆ. ಈ ಕಾಯ್ದೆಯನ್ನು ಪ್ರಮುಖವಾಗಿ ವಿದೇಶದಲ್ಲಿರುವ ನಾಗರಿಕರಿಗೆ ಭಾರತದ ಪೌರತ್ವ ನೀಡುವ ವಿಷಯದ ಕುರಿತು ಜಾರಿಗೆ ತರಲಾಗಿದೆ. ದೇಶದೊಳಗಿನ ನಾಗರಿಕರಿಗೆ, ಭಾರತದ ಪೌರತ್ವ ಹೊಂದಿರುವವರಿಗೆ ಇದು ಅನ್ವಯಿಸುವುದಿಲ್ಲ.

ಹಾಗಾದರೆ ಈ ಕಾಯ್ದೆಯ ಬಗ್ಗೆ ಈಗ ಚರ್ಚೆಗಳೇಕೆ ಎನ್ನುವುದನ್ನು ಗಮನಿಸುವುದಾದರೆ, ಪೌರತ್ವ ತಿದ್ದುಪಡಿ ಕಾಯ್ದೆಗೆ ಈಗ 2019ರಲ್ಲಿ ಕೆಲವು ಅಂಶಗಳಿಗೆ ತಿದ್ದುಪಡಿ ತರಲಾಗಿದೆ. ತಿದ್ದುಪಡಿ ಅಂಶಗಳನ್ನು ಹೊರತುಪಡಿಸಿ ಉಳಿದೆಲ್ಲ ಅಂಶಗಳು 1955ರಿಂದ ಜಾರಿಯಲ್ಲಿರುವಂತೆಯೇ ಮುಂದುವರೆಯುತ್ತದೆ. ಈ ಹಿಂದೆ ಕೂಡ ಈ ಕಾಯ್ದೆಗೆ ಆಗಾಗ್ಗೆ ತಿದ್ದುಪಡಿ ತರುವ ಮೂಲಕ ಅಂದಿನ ದಿನಮಾನಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡಲಾಗಿತ್ತು, ಈ ಹಿಂದೆ ಕಾಯ್ದೆ ತಿದ್ದುಪಡಿ ಮಾಡುವ ಮೂಲಕ ಉಗಾಂಡ ಹಾಗೂ ಶ್ರೀಲಂಕಾದ ನಿರಾಶ್ರಿತರಿಗೆ ಭಾರತದ ಪೌರತ್ವ ನೀಡಲಾಗಿತ್ತು.

**ಪೌರತ್ವ ತಿದ್ದುಪಡಿ ಕಾಯ್ದೆ 2019 :** ಈಗ ಪೌರತ್ವ ಕಾಯ್ದೆ 1955ಕ್ಕೆ ತಿದ್ದುಪಡಿಗಳನ್ನು ತರುವ ಮೂಲಕ ಪೌರತ್ವ ತಿದ್ದುಪಡಿ ಕಾಯ್ದೆ 2019 ಜಾರಿಗೆ ಬಂದಿರುತ್ತದೆ. ಈಗ ಆಗಿರುವ ಪ್ರಮುಖ ತಿದ್ದುಪಡಿಯೆಂದರೆ – ಭಾರತದ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಅಫ್ಘಾನಿಸ್ತಾನ ಹಾಗೂ ಬಾಂಗ್ಲಾದೇಶಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಾದ ಕಾರಣಕ್ಕೆ ಅಲ್ಲಿ ಕಿರುಕುಳ ಅನುಭವಿಸಿ, ಬದುಕಲಾಗದೆ 2014ಕ್ಕಿಂತ ಮುಂಚೆ ಭಾರತದೊಳಗೆ ಓಡಿಬಂದ ಹಿಂದೂ, ಜೈನ, ಬೌದ್ಧ, ಕ್ರಿಶ್ಚಿಯನ್, ಪಾರ್ಸಿ ಮತ್ತು ಸಿಖ್ಖರನ್ನು ಭಾರತೀಯ ನಾಗರಿಕರು ಎಂದು ಪರಿಗಣಿಸಿ ಅವರಿಗೆ ಪೌರತ್ವ ನೀಡುವುದು. ಇವರಿಗೆ ಪೌರತ್ವ ನೀಡಲು ಮೊದಲು ಇದ್ದ ಅವಧಿ 11 ವರ್ಷಗಳಾಗಿತ್ತು, ಈಗ ತಿದ್ದುಪಡಿ ಮೂಲಕ ಈ ಅವಧಿಯನ್ನು ಐದು ವರ್ಷಕ್ಕೆ ಇಳಿಸಲಾಗಿದೆ.

ಈ ತಿದ್ದುಪಡಿ ಕಾಯ್ದೆಯ ಇನ್ನಷ್ಟು ಮಾಹಿತಿಯನ್ನು ಸಂಕ್ಷಿಪ್ತವಾಗಿ ಗಮನಿಸೋಣ –

**1. ಕಿರುಕುಳ ಅನುಭವಿಸಿದ ಉಳಿದ ಧರ್ಮದವರಿಗೆ ಅವಕಾಶವಿಲ್ಲವೆ?**

ಖಂಡಿತವಾಗಿಯೂ ಅವಕಾಶವಿದೆ, ಮೂಲ ಕಾಯ್ದೆಯನ್ವಯ ಯಾವುದೇ ಧರ್ಮದವರು 11 ವರ್ಷಗಳ ಕಾಲ ಭಾರತದಲ್ಲಿ ನೆಲೆಸಿದ್ದರೆ, ನೈಸರ್ಗಿಕವಾಗಿ ಅವರಿಗೆ ಭಾರತದ ಪೌರತ್ವ ಲಭ್ಯವಾಗುತ್ತದೆ.

**2. ಈ ಕಾಯ್ದೆ ಭಾರತೀಯರ ಮೇಲೆ ಪ್ರಭಾವ ಬೀರುತ್ತಾ?**

ಹಿಂದೂ, ಮುಸ್ಲಿಂ, ಇತರೆ ಧರ್ಮ ಸೇರಿದಂತೆ ಈ ಪೌರತ್ವ ತಿದ್ದುಪಡಿ ಕಾಯ್ದೆಯು ಭಾರತೀಯರ ಯಾವ ಹಕ್ಕನ್ನೂ ಕಸಿದುಕೊಳ್ಳುವುದಿಲ್ಲ.

**3. 2014ರ ನಂತರ ಬಂದ ಅಕ್ರಮ ವಲಸಿಗರನ್ನು ತಕ್ಷಣವೇ ಗಡಿಪಾಡು ಮಾಡಲಾಗುತ್ತದೆಯೇ?**

ಇಲ್ಲ, ಅವರು ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಬಹುದು. 1955ರ ಮೂಲ ಕಾಯ್ದೆಯಲ್ಲಿರುವಂತೆ ನೈಸರ್ಗಿಕ ದೇಶೀಕರಣದ ಮೂಲಕ ಅಂದರೆ 11 ವರ್ಷ ಭಾರತದಲ್ಲಿ ನೆಲೆಸಿರುವ ಮೂಲಕ ಇಲ್ಲಿನ ಪೌರತ್ವ ಪಡೆಯಬಹುದು. ಪಾಕಿಸ್ತಾನ, ಅಫ್ಘಾನಿಸ್ತಾನ ಹಾಗೂ ಬಾಂಗ್ಲಾದೇಶಗಳಿಂದ ಈಗಾಗಲೇ ವಲಸೆ ಬಂದವರು ಕೂಡ ಈ ನಿಯಮದಡಿ ಪೌರತ್ವ ಪಡೆಯಬಹುದು.

**4. ಈ ಕಾಯ್ದೆಗೆ ವಿರೋಧವೇಕೆ?**

ಕಾಯ್ದೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ವಿಫಲರಾಗುತ್ತಿರುವುದು, ರಾಷ್ಟ್ರೀಯ ಪೌರತ್ವ ನೋಂದಣಿಯೊಂದಿಗೆ ಜೋಡಣೆ ಮಾಡಿ ಊಹಾತ್ಮಕ ಗೊಂದಲಗಳನ್ನು ಹೊಂದುತ್ತಿರುವುದು, ಸಾಮಾಜಿಕ ಜಾಲತಾಣಗಳ ದಾರಿತಪ್ಪಿಸುವ ಮಾಹಿತಿಗಳನ್ನು ನಿಜವೆಂದು ನಂಬುತ್ತಿರುವುದು ವಿರೋದಕ್ಕೆ ಕಾರಣವಾಗಿದೆ.

**5. ಈ ಕಾಯ್ದೆಯ ಋಣಾತ್ಮಕ ಪರಿಣಾಮವೇನು?**

ಈಗಾಗಲೇ 2014ಕ್ಕಿಂತ ಮುಂಚೆ ಭಾರತಕ್ಕೆ ಬಂದಿರುವ ವಲಸಿಗರಿಗೆ ಭಾರತದ ಪೌರತ್ವ ನೀಡುವುದರಿಂದ ವಲಸಿಗರು ನಮ್ಮ ಅವಕಾಶಗಳನ್ನು

ಉದ್ಯೋಗಗಳನ್ನು ಕಿತ್ತುಕೊಳ್ಳಬಹುದು, ಜನಸಂಖ್ಯೆ ಹೆಚ್ಚಬಹುದು, ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಪರಿಣಾಮ ಉಂಟಾಗಬಹುದು ಎನ್ನುವುದು ಇದರ ಋಣಾತ್ಮಕ ಪರಿಣಾಮ.

**6. ಎಲ್ಲೆಲ್ಲಿ ಈ ಕಾಯ್ದೆಯು ಅನ್ವಯವಾಗುವುದಿಲ್ಲ ?**

ಸಂವಿಧಾನದ 6ನೇ ಪರಿಚ್ಛೇದದ ವ್ಯಾಪ್ತಿಯಲ್ಲಿ ಬರುವ ಅಸ್ಸಾಂ ಮತ್ತು ತ್ರಿಪುರಾದ ಕೆಲಭಾಗಗಳಲ್ಲಿ, ಮೇಘಾಲಯದಲ್ಲಿ ಹಾಗೂ ಇನ್ನರ್ ಲೈನ್ ಪರ್ಮಿಟ್ ವ್ಯವಸ್ಥೆ ಹೊಂದಿರುವ ಅರುಣಾಚಲ ಪ್ರದೇಶ, ಮಿಜೋರಾಂ ಮತ್ತು ನಾಗಾಲ್ಯಾಂಡ್, ಮಣಿಪುರಕ್ಕೆ ಇದು ಅನ್ವಯಿಸುವುದಿಲ್ಲ.

**7. ಬೇರೆ ದೇಶಗಳ ವಲಸಿಗರು ಭಾರತದ ಪೌರತ್ವ ಪಡೆಯುವುದು ಹೇಗೆ ?**

ಪೌರತ್ವ ಕಾಯ್ದೆ 1955ರ ಪ್ರಕಾರ ವಲಸಿಗರು ಭಾರತದ ಪೌರತ್ವ ಪಡೆಯಲು ನಿರ್ದಿಷ್ಟ ದಾಖಲೆಗಳ ಜೊತೆಗೆ ಅರ್ಜಿ ಸಲ್ಲಿಸುವ ದಿನದಿಂದ ಹಿಂದೆ 12 ತಿಂಗಳು ಭಾರತದಲ್ಲಿ ನಿರಂರವಾಗಿ ನೆಲೆಸಿರಬೇಕು. ಹಾಗೂ ಕಳೆದ 14 ವರ್ಷಗಳಲ್ಲಿ ಕನಿಷ್ಠ 11 ವರ್ಷ ಭಾರತದಲ್ಲಿ ಕಡ್ಡಾಯವಾಗಿ ನೆಲೆಸಿರಬೇಕು. ಹೊಸ ತಿದ್ದುಪಡಿ ಕಾಯ್ದೆಯಲ್ಲಿ 6 ಧರ್ಮಗಳ ವಲಸಿಗರಿಗೆ ಇದರಲ್ಲಿ ವಿನಾಯಿತಿ ನೀಡಿ 11 ವರ್ಷದ ಬದಲಿಗೆ ಕೇವಲ 5 ವರ್ಷ ನೆಲೆಸಿದ್ದರೆ ಭಾರತದ ಪೌರತ್ವ ನೀಡಲಾಗುತ್ತದೆ.

**8. ಎನ್‌ಆರ್‌ಸಿ ಇದು ಪೌರತ್ವ ತಿದ್ದುಪಡಿ ಕಾಯ್ದೆಯ ಭಾಗವಾಗಿದೆಯೇ ?**

ಖಂಡಿತ ಇಲ್ಲ, ಪೌರತ್ವ ತಿದ್ದುಪಡಿ ಕಾಯ್ದೆ ವಿದೇಶದ ನಾಗರಿಕರಿಗೆ ಭಾರತದ ಪೌರತ್ವ ನೀಡುವ ವಿಷಯವಾದರೆ ಎನ್‌ಆರ್‌ಸಿ ಅಂದರೆ ನ್ಯಾಷನಲ್ ರೆಜಿಸ್ಟರ್ ಆಫ್ ಸಿಟಿಜನ್ಸ್ ಇದು ದೇಶದ ನಾಗರೀಕರ ನೋಂದಣಿಯ ವಿಷಯವಾಗಿದೆ. ಪೌರತ್ವ ತಿದ್ದುಪಡಿ ಕಾಯ್ದೆಯಾಗಿ ಜಾರಿಗೆ ಬಂದಿದೆ, ಎನ್‌ಆರ್‌ಸಿ ನಿಯಮ, ಪ್ರಕ್ರಿಯೆಗಳು ಇನ್ನೂ ಅಂತಿಮಗೊಳ್ಳಬೇಕಿದೆ.

ಅಸ್ಸಾಂ ರಾಜ್ಯದಲ್ಲಿ ಎನ್‌ಆರ್‌ಸಿ ಪ್ರಕ್ರಿಯೆ ನಡೆಯುತ್ತಿರುವುದು ಸುಪ್ರೀಂ ಕೋರ್ಟ್‌ನ ಆದೇಶ ಮತ್ತು ಅಸ್ಸಾಂನ ಒಪ್ಪಂದದ ಅನ್ವಯ ಮಾತ್ರ, ಇದನ್ನು ದೇಶಕ್ಕೆ ಅನ್ವಯಿಸಿ ಪೌರತ್ವ ತಿದ್ದುಪಡಿ ಕಾಯ್ದೆಯೊಂದಿಗೆ ಜೋಡಿಸಿ ಗೊಂದಲ ಉಂಟು ಮಾಡಲಾಗುತ್ತಿದೆಯಷ್ಟೆ.

ಪ್ರತಿಯೊಂದು ದೇಶವೂ ಆ ದೇಶದಲ್ಲಿ ಕನಿಷ್ಠ ಎಷ್ಟು ವರ್ಷ ವಾಸಿಸಬೇಕು ಎನ್ನುವ ನಿಬಂಧನೆಯೊಂದಿಗೆ ನೈಸರ್ಗಿಕ ದೇಶೀಕರಣದ ನಿಯಮಗಳನ್ನು ಹೊಂದಿರುತ್ತವೆ. ವಿಶ್ವಸಂಸ್ಥೆಯ ನಿಯಮಾವಳಿಗಳ ಪ್ರಕಾರ ಭಾರತಕ್ಕೆ ನಿರಾಶ್ರಿತರನ್ನು ನೋಡಿಕೊಳ್ಳುವ ಬಾಧ್ಯತೆಯಿದೆ. ಆದರೆ ಭಾರತಕ್ಕೆ ಅಕ್ರಮವಾಗಿ ವಲಸೆ ಬಂದ ನಿರಾಶ್ರಿತರಿಗೆ ಪೌರತ್ವ ನೀಡುವ ಯಾವ ಬಾಧ್ಯತೆಯೂ ಭಾರತಕ್ಕಿಲ್ಲ. ವಿಶ್ವಸಂಸ್ಥೆಯ ನಿಯಮಗಳನ್ವಯ, ಯಾವುದೇ ದೇಶವು ನಿರಾಶ್ರಿತರನ್ನು ತಕ್ಷಣ ಅವರ ದೇಶಕ್ಕೆ ವಾಪಸ್ ಕಳುಹಿಸುವುದು ಸಾಧ್ಯವಾಗುವುದಿಲ್ಲ, ಆ ದೇಶದಲ್ಲಿನ ಪರಿಸ್ಥಿತಗಳು ಸುಧಾರಿಸಿದಾಗ ಒಂದಲ್ಲಾ ಒಂದು ದಿನ ಅವರು ತಮ್ಮ ದೇಶಕ್ಕೆ ವಾಪಸ್ ಮರಳುತ್ತಾರೆ ಎಂಬ ನಿರೀಕ್ಷೆಯೊಂದಿಗೆ ಅವರ ಆಥಿತ್ಯ ವಹಿಸಬೇಕಾಗುತ್ತದೆ. ಆದರೆ ಪಾಕಿಸ್ತಾನ, ಅಫ್ಘಾನಿಸ್ತಾನ ಹಾಗೂ ಬಾಂಗ್ಲಾದೇಶಗಳಲ್ಲಿ ಅಲ್ಪಸಂಖ್ಯಾತರ ವಿಷಯದಲ್ಲಿ ಕಿರುಕುಳದ ವಾತಾವರಣವು ಎಂದಿಗೂ ಸುಧಾರಿಸುವುದಿಲ್ಲ ಎಂಬ ವಾಸ್ತವದೊಂದಿಗೆ ಈ ತಿದ್ದುಪಡಿ ಕಾಯ್ದೆಯನ್ನು ಜಾರಿಗೆ ತರಲಾಗಿದೆ.

## NAFCUB to set up Umbrella Organisation for UCBs

The Umbrella Organisation could be in the form of apex entities, as is the practice in many countries that provide access to resources/capital to financial co-operatives at the base level through their ability of tapping into the capital market.

The Reserve Bank of India has given nod for an umbrella unit to strengthen urban cooperative banks. The proposed entity is expected to provide liquidity support to UCB's besides providing infrastructure.

The National Federation of Urban Cooperative Banks and Credit Societies Ltd ( NAFCUB ) has been given the regulators approval for setting up an umbrella organization as a non deposit taking NBFC ( NBFC-ND) according to the latest report on trends and progress in banking released by the Reserve Bank of India

# ಆರ್ಥಿಕ ಸೇರ್ಪಡೆ ಮತ್ತು ಸಹಕಾರ ಸಂಸ್ಥೆಗಳ ಮುಖಾಂತರ ಡಿಜಿಟಲೀಕರಣ
# Financial inclusion & Digitization Through Co-oprative instutions

- ಶ್ರೀ ಪಾಲರಾಜ, ವ್ಯವಸ್ಥಾಪಕ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಡಿಜಿಟಲೀಕರಣದ ಅಲೆ ಪ್ರಸ್ತುತ ದೇಶದಲ್ಲೆಡೆ ಛಾಪನ್ನು ಮೂಡಿಸಲು ಕಾರಣವಾಗುತ್ತಿದೆ. ಈಗಾಗಲೇ ಸಹಕಾರಿ ಕ್ಷೇತ್ರವು ಡಿಜಿಟಲೀಕರಣದತ್ತ "ಕೋರ್ ಬ್ಯಾಂಕಿಂಗ್" ವ್ಯವಸ್ಥೆಯಲ್ಲಿ ಪರಿಪೂರ್ಣವಾಗಿ ಕಾರ್ಯನಿರ್ವಹಿಸುತ್ತಿದ್ದರೂ ಸಹ ಆಯ್ದ ಸಹಕಾರಿ ಬ್ಯಾಂಕುಗಳು ಮತ್ತು ಸಹಕಾರಿ ಸಂಸ್ಥೆಗಳು ಇನ್ನೂ ಸಹ ತಂತ್ರಜ್ಞಾನ ಉನ್ನತೀಕರಣಕ್ಕೆ ಆಲೋಚಿಸುತ್ತಿದೆ, ಪ್ರಸ್ತುತ ಹಣಕಾಸು ವ್ಯವಸ್ಥೆಯಲ್ಲಿ ಸಹಕಾರಿ ಕ್ಷೇತ್ರಕ್ಕೆ ಹಲವಾರು ರಾಜಕೀಯ ಹಸ್ತಕ್ಷೇಪ, ಅನದೀಕೃತ ಠೇವಣಿ, ಹಣದುರುಪಯೋಗ ಪ್ರಕರಣಗಳು ಕಪ್ಪುಚುಕ್ಕೆಯಾಗಿ ಪರಿಣಮಿಸಿದಿದ್ದು ಸಹಕಾರಿ ಕ್ಷೇತ್ರಕ್ಕೆ ಕಟ್ಟುನಿಟ್ಟಾದ ಆರ್ಥಿಕ ನಿಯಮಗಳನ್ನು ರೂಪಿಸಲು ಕೇಂದ್ರ ಸರ್ಕಾರವು ಯೋಚಿಸುವಂತಾಗಿದೆ. ಈ ಕೋರ್ ಬ್ಯಾಂಕಿಂಗ್ ಪ್ರಕ್ರಿಯೆಗಳಲ್ಲಿ ಪ್ರಮುಖ ಸಹಕಾರಿ ಬ್ಯಾಂಕುಗಳು/ಸಹಕಾರ ಸಂಘಗಳು ತಂತ್ರಜ್ಞಾನ ಆಧಾರಿತ ಸೇವೆಯಿಂದ ಸಹಾಕಾರಿಯ ಆರ್ಥಿಕ ವರದಿಯನ್ನು ವಿಶ್ಲೇಷಿಸುವುದು, ಆನ್‌ಲೈನ್ ಕೆವೈಸಿ, ಜಿಎಸ್‌ಟಿ ರಿಟರ್ನ್ ವಿಶ್ಲೇಷಣೆ, ಡಿಜಿಟಲ್ ಖಾತೆ ತೆರೆಯುವುದು, ಎಟಿಎಂ ನಿರ್ವಹಣೆ, ಪಿಒಎಸ್ ಸಾಮರ್ಥ್ಯವನ್ನು ಹೆಚ್ಚಿಸುವುದು & ITR ವಿಶ್ಲೇಷಣೆಯಿಂದ ಸಹಕಾರಿ ಕ್ಷೇತ್ರದ ಪಾರದರ್ಶಕತೆಗೆ ಕಾರಣವಾಗುತ್ತದೆ, ಸಹಕಾರಿಗಳು ತಮ್ಮ ಕಾರ್ಯದ ವ್ಯಾಪ್ತಿಯನ್ನು ವಿಸ್ತಾರಗೊಳಿಸುವ ಸಲುವಾಗಿ ಸಿ.ಬಿ.ಎಸ್ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಎಲ್ಲಾ ಸೇವೆಗಳ ಒಳಗೊಳ್ಳುವಿಕೆಯಿಂದ ದೇಶದಲ್ಲಿ ಪ್ರತಿ ತಳಮಟ್ಟದಲ್ಲಿರವ ಗ್ರಾಹಕರಿಗೂ ಸಮರ್ಪವಾಗಿ ಹಣಕಾಸಿನ ಸೇರ್ಪಡೆಗೆ ಸಹಕಾರಿಯಾಗಿದೆ.

ಸಹಕಾರಿ ಕ್ಷೇತ್ರದಲ್ಲಿ ಆರ್ಥಿಕ ಸೇರ್ಪಡೆಗೆ ದೇಶದ ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿ ಸರ್ಕಾರಿ ಸಾಮ್ಯ ಮತ್ತು ಖಾಸಗಿ ವಲಯದ ಬ್ಯಾಂಕುಗಳು ತಂತ್ರಜ್ಞಾನ ಆಧಾರಿತ ಸೇವೆಯನ್ನು ಮಾರುಕಟ್ಟೆಯಲ್ಲಿ ವಿವಿಧ ಆಕರ್ಶಕ ಯೋಜನೆಗಳಿಗೆ ವಿವಿಧ ಆಕಾರವನ್ನು ನೀಡಿ ಕಾರ್ಯನಿರ್ವಹಿಸತ್ತಿದೆ. ಸಹಕಾರಿ ಕ್ಷೇತ್ರದಲ್ಲಿ ಆರ್ಥಿಕ ಸೇರ್ಪಡೆ ಸಾಧಿಸಲು ವಾಣಿಜ್ಯ ಬ್ಯಾಂಕುಗಳಿಗಿಂತ (SCBs) ಹೆಚ್ಚು ಪೂರ್ವಭಾವಿಯಾಗಿ ತಳಮಟ್ಟದ ಗ್ರಾಹಕರಿಂದ ತಮ್ಮ ಸೇವೆಯನ್ನು ಒದಗಿಸುತ್ತಿದೆ. ಸಹಕಾರಿ ಬ್ಯಾಂಕುಗಳು ಉನ್ನತೀಕೃತ ತಂತ್ರಜ್ಞಾನ ಬಳಸಿ ಮತ್ತು ವಾಣಿಜ್ಯ ಬ್ಯಾಂಕುಗಳೊಂದಿಗೆ ಪೈಪೋಟಿಯಲ್ಲಿ ದಕ್ಷ ಮಾನವ ಸಂಪನ್ಮೋಲದೊಂದಿಗೆ ಕಾರ್ಯನಿರ್ವಹಿಸುತ್ತಿದೆ.

### ಆರ್ಥಿಕ ಸೇರ್ಪಡೆ (Financial inclusion) :

ಆರ್ಥಿಕ ಸೇರ್ಪಡೆ ಅಥವಾ ಅಂತರ್ಗತ ಹಣಕಾಸು ವಿತರಣಾ ವ್ಯವಸ್ಥೆಯು ಆರ್ಥಿಕ ಸೇವೆಗಳನ್ನು ಕಡಿಮೆ ವೆಚ್ಚದಲ್ಲಿ ಜನಸಾಮಾನ್ಯರಿಗೆ ತಳಮಟ್ಟದಿಂದ ಒದಗಿಸುವುದಾಗಿದ್ದು ಇದು ಹಲವು ಆಯಾಮಗಳಲ್ಲಿ ಪ್ರತಿಕೂಲತೆಯ ಮತ್ತು ಕಡಿಮೆ ಆದಾಯದ ಭಾಗಗಳನ್ನು ಹೊಂದಿದೆ. ಸಾಮಾನ್ಯ ಜನರು ಆರ್ಥಿಕ ವ್ಯವಸ್ಥೆಯನ್ನು ಕಡೆಗಣಿಸುತ್ತಿರುವದರಿಂದ ವ್ಯತಿರಿಕ್ತವಾಗಿ ಈ ಸೇವೆಗಳನ್ನು ಕಡಿಮೆ ದರದಲ್ಲಿ ಒದಗಿಸಲು ಸಾದ್ಯವಾಗುತಿಲ್ಲ. ಅಂದಾಜು 2.5 ಶತಕೋಟಿ ಜನಸಂಖ್ಯೆ ವಯಸ್ಕರು ಜಾಗತಿಕವಾಗಿ ಹಣಕಾಸು ಸಂಸ್ಥೆಗಳು ಒದಗಿಸುತ್ತಿರುವ ತಂತ್ರಜ್ಞಾನ ಆಧಾರಿತ ಸೇವೆಗಳನ್ನು ಪಡೆಯಲು ಅವಕಾಶ ವಂಚಿತರಾಗಿದ್ದಾರೆ. ಇದರಿಂದ ಬ್ಯಾಂಕಿಂಗ್ ಸೇವೆಗಳನ್ನು ಸಾರ್ವಜನಿಕರಿಗೆ ಉತ್ತಮ ಸ್ವರೂಪದಲ್ಲಿ ಪಕ್ಷಪಾತವಿಲ್ಲದೆ ಮತ್ತು ಪಾವತಿ ಸೇವೆಗಳ ಲಭ್ಯತೆಯನ್ನು ನೀಡುವುದೆ ಆರ್ಥಿಕ ಸೇರ್ಪಡೆಯ ಮುಖ್ಯ ಗುರಿಯಾಗಿದೆ.

### ಆರ್ಥಿಕ ಸೇರ್ಪಡೆಯ ವ್ಯಾಖಾನ (Financial inclusion Defenation) :

ಡಾ. ಸಿ. ರಂಗರಾಜನ್ ಇವರು "ಹಣಕಾಸು ಸೇರ್ಪಡೆಯು ತಂತ್ರಜ್ಞಾನ ಆಧಾರಿತ ಆರ್ಥಿಕ ಸೇವಾ ಪ್ರಕ್ರಿಯೆಯು ಸಕಾಲದಲ್ಲಿ ಮತ್ತು ಸಮರ್ಪಕ ಸಾಲದ ಅಗತ್ಯತೆ ಇರುವ ಸ್ಥಳಕ್ಕೆ ಅಂದರೆ ದುರ್ಬಲ ವರ್ಗಗಳಿಗೆ ಮತ್ತು ಕಡಿಮೆ ಆದಾಯದ ಗುಂಪುಗಳಿಗೆ ಆರ್ಥಿಕ ಸೇವೆಯ ಖಾತರಿಯನ್ನು ನೀಡುವುದಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ವ್ಯಾಖ್ಯಾನದಂತೆ ಹಣಕಾಸು ಸೇರ್ಪಡೆಯು ಸೂಕ್ತ ತಂತ್ರಜ್ಞಾನ ಆಧಾರಿತ ಯೋಜನೆಗಳು ಮತ್ತು ಸೇವೆಗಳನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ದುರ್ಬಲ ವರ್ಗಗಳಿಗೆ ಮತ್ತು ಕಡಿಮೆ ಆದಾಯದ ಗುಂಪುಗಳಿಗೆ ಕೈಗೆಟುಕುವಂತೆ ಮಾಡುವ ಪ್ರಕ್ರಿಯೇಯಾಗಿದೆ ಎಂದು ವ್ಯಾಖಾನಿಸಲಾಗಿದೆ.

### ಆರ್ಥಿಕ ಸೇರ್ಪಡೆಯ ಗುರಿಗಳು (Financial inclusion Goals):

"ಆರ್ಥಿಕ ಸೇರ್ಪಡೆ" ಎಂಬ ಪದವು ಆರ್ಥಿಕ ಸೇವೆಗಳಿಂದ ಹೊರಗಿರುವ ಜನಸಂಖ್ಯೆಗೆ ಮತ್ತು ಬಡತನಕ್ಕೆ ನೇರವಾದ ಸಂಬಂಧವನ್ನು ಹೊಂದಿರುವ ಬಗ್ಗೆ ಸಂಶೋಧನೆಗಳ ಫಲವಾಗಿ, 2000 ರದ ಇಸವಿಯಿಂದಲೇ ಇದು ಪ್ರಾಮುಖ್ಯತೆಯನ್ನು ಗಳಿಸಿದೆ. ವಿಶ್ವಸಂಸ್ಥೆಯ ಆರ್ಥಿಕ ಸೇರ್ಪಡೆಯ ಗುರಿಗಳನ್ನು ಈ ಕೆಳಗಿನಂತೆ ವರ್ಣಿಸಿದೆ.

1. ಒಂದು ನಿರ್ಥಿಷ್ಟ ಶ್ರೇಣಿಯ ಕುಟುಂಬಗಳಿಗೆ/ಗುಂಪುಗಳಿಗೆ ಒಂದು ಸಮಂಜಸವಾದ ವೆಚ್ಚದಲ್ಲಿ ತಂತ್ರಜ್ಞಾನ ಆಧಾರಿತ ಸೇವೆಗಳಾದ ಉಳಿತಾಯಖಾತೆ, ವಿವಿಧ ಠೇವಣಿ ಸೇವೆಗಳು, ಪಾವತಿ ಮತ್ತು ವರ್ಗಾವಣೆ ಸೇವೆಗಳು ಹಾಗೂ ಕ್ರೆಡಿಟ್ ಮತ್ತು ವಿಮೆ ಸೇವೆಗಳನ್ನು ಒದಗಿಸುವುದು.

2. ಹಣಕಾಸು ಸೇವೆಗಳ ಸ್ಪಷ್ಟ, ಪಾರದರ್ಶಕ ನಿಯಂತ್ರಣ ಮತ್ತು ತಂತ್ರಜ್ಞಾನ ಉದ್ಯಮಗಳ ಕಾರ್ಯಕ್ಷಮತೆಯನ್ನು ಮಾನದಂಡಗಳ ಮುಖಾಂತರ ನಿರ್ವಹಣೆ ಮತ್ತು ಸುರಕ್ಷಿತ ಸೇವೆಗಳ ನಿರ್ವಹಣೆಗೆ ಉತ್ತೇಜನ ನೀಡುವುದು.

3. ಹಣಕಾಸು ಮತ್ತು ಸಾಂಸ್ಥಿಕ ಸಂರಕ್ಷಣೆಗೆ ನಿರಂತರತೆ ಮತ್ತು ಹೂಡಿಕೆಯ ನಿಶ್ಚಿತತೆಯನ್ನು ಖಚಿತಪಡಿಸಿಕೊಳ್ಳುವುದು.

4. ಸ್ಪರ್ಧಾತ್ಮಕವಾಗಿ ಗ್ರಾಹಕರಿಗೆ ವಿವಿಧ ಆಯ್ಕೆಯ ಮತ್ತು ತಂತ್ರಜ್ಞಾನ ನಿರ್ವಹಣಾ ಸಾಮರ್ಥ್ಯವನ್ನು ಹೆಚ್ಚಿಸುವುದು.

ಆರ್ಥಿಕ ಸೇರ್ಪಡೆ ಉತ್ತೇಜನಕ್ಕೆ ವಿವಿಧ ಕ್ರಮಗಳು: ದೇಶದಲ್ಲಿ ದುರ್ಬಲ ವರ್ಗದವರೂ ಇನ್ನೂ ಸಹ ಸಮರ್ಥನೀಯ ಹಣಕಾಸು ಸೇವೆಗಳ ಕೊರತೆ ಎದುರಿಸುತ್ತಿದ್ದು ಇದನ್ನು ದೊಡ್ಡ ಸವಾಲನ್ನಾಗಿ ಪರಿಗಣಿಸಿ ಆರ್ಥಿಕ ವಲಯದಲ್ಲಿ ಪೂರ್ಣ ಭಾಗವಹಿಸುವಿಕೆಯಿಂದ ಮತ್ತು ತಂತ್ರಜ್ಞಾನ ಸೇವೆಯಲ್ಲಿರುವ ನಿರ್ಬಂಧಗಳನ್ನು ಪರಿಹರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಹೆಚ್ಚಿನ ಆರ್ಥಿಕ ಸೇರ್ಪಡೆಯನ್ನು ಸಾಧಿಸಲು ಹಲವು ಕ್ರಮಗಳನ್ನು ಅನುಷ್ಠಾನಕ್ಕೆ ತಂದು ಉತ್ತೇಜಿಸಿದೆ. ಅಂತಹ ಕ್ರಮಗಳನ್ನು ಈ ಕೆಳಗಿನಂತೆ ವಿವರಿಸಿದೆ.

**1. ನಿರ್ಬಂಧಗಳಿಲ್ಲದ ಆರಂಭಿಕ ಖಾತೆಗಳನ್ನು (Opening of no Frill Acounts) :**

ಜನಸಾಮಾನ್ಯರಿಗೆ ಖಾತೆ ತೆರೆಯಲು ಪ್ರಾರಂಭಿಕ ಬ್ಯಾಂಕಿಂಗ್ ಸೇವೆಯಲ್ಲಿ ಯಾವುದೇ ನಿರ್ಬಂದಗಳಿಲ್ಲದೆ ಅಥವಾ ಕನಿಷ್ಠ ಬ್ಯಾಲೇನ್ಸ್ ಸಡಿಲಿಕೆ ಹಾಗೂ ದೊಡ್ಡ ಜನಸಂಖ್ಯೆ ಇರುವ ಪ್ರದೇಶಗಳಿಗೆ ಇಂತಹ ಸಡಿಲಿಕೆಯನ್ನು ನೀಡುವುದು ಮತ್ತು ಇಂತಹ ಖಾತೆಗಳಿಗೆ ಸಣ್ಣ ಪ್ರಮಾಣದಲ್ಲಿ ಓವರ್ ಡ್ರಾಫ್ಟ್ ಸೌಲಭ್ಯ ನೀಡಿ ಉತ್ತೇಜಿಸಲಾಗುತ್ತಿದೆ. ಉದಾ: ಜನ್‌ದನ್ ಖಾತೆ. ವೇತನ ಖಾತೆ, ಮಹಿಳೆಯರಿಗೆ, ಹಿರಿಯ ನಾಗರಿಕರಿಗೆ ವಿಷೇಶ ಖಾತೆ ಯೋಜನೆಗಳು)

**2. ಕೆವೈಸಿ ನಿಯಮಗಳಲ್ಲಿ ಸಡಿಲತೆ (Relaxation on Know-Your-Customer (KYC) norms) :**

ಭಾರತೀಯ ರಿಸರ್ವ ಬ್ಯಾಂಕ್ ಖಾತೆಗಳನ್ನು ತೆರೆಯಲು ಕೆವೈಸಿ ನಿಯಮಗಳಲ್ಲಿ ಆಗಸ್ಟ್ 2005 ರಲ್ಲಿ ಸಣ್ಣ ಸಡಿಲತೆಯನ್ನು ನೀಡಲಾಯಿತು. ಜನಸಾಮಾನ್ಯರು ಖಾತೆ ತೆರೆಯಲು ಷರತ್ತುಬದ್ಧ ಕಾರ್ಯವಿಧಾನಗಳನ್ನು ಸರಳಗೊಳಿಸಿ. ಬ್ಯಾಂಕುಗಳು ಗುರುತಿನ ಮತ್ತು ವಿಳಾಸಕ್ಕೆ ತಮಗೆ ತೃಪ್ತಿಯಾಗುವ ಯಾವುದೇ ಪುರಾವೆಗಳು ತೆಗೆದುಕೊಳ್ಳಲು ಅನುಮತಿ ನೀಡಲಾಗಿತ್ತು.

**3. ಆಕರ್ಷಕ ವ್ಯಾಪಾರದ ವ್ಯವಹಾರಗಳು (Engaging business correspondents (BCs) :**

ಜನವರಿ 2006 ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕು ಹಣಕಾಸು ಮತ್ತು ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ವ್ಯಾಪಾರ ಅನುಕೂಲ ಸೇವೆ (ಬಿಎಫ್‌–ಎಸ್) ಮತ್ತು BC ಗಳಲ್ಲಿ ತೊಡಗುವಂತೆ ಬ್ಯಾಂಕುಗಳಿಗೆ ಅನುಮತಿಯನ್ನು ನೀಡಲಾಯಿತು. ಬಿಸಿ ಮಾದರಿಯಲ್ಲಿ ಬ್ಯಾಂಕುಗಳು ಸೇವೆಗಳನ್ನು ಮನೆ ಬಾಗಿಲಿಗೆ ವಿತರಣೆ ಮಾಡಲು ವಿಶೇಷವಾಗಿ – ನಗದು ವ್ಯವಹಾರ, ನಗದು ನಿರ್ವಹಿಸಲು ಅನುಮತಿಸಲಾಗಿತ್ತು. ಸೆಪ್ಟೆಂಬರ್ 2010 ರಿಂದ ಲಾಭದಲ್ಲಿರುವ ಹಲವು ಆರ್ಥಿಕ ಸಂಸ್ಥೆಗಳು BC ಗಳಲ್ಲಿ ಚಟುವಟಿಕೆಯಲ್ಲಿರಲು ಅವಕಾಶ ಮಾಡಲಾಗಿದೆ.

**4. ತಂತ್ರಜ್ಞಾನದ ಬಳಕೆ (Use of technology) :**

ತಂತ್ರಜ್ಞಾನವನ್ನು ಸಾಧ್ಯವಾದ ರೀತಿಯಲ್ಲಿ ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ ಕ್ರೆಡಿಟ್ ವಿತರಣಾ ಸಮಸ್ಯೆಗಳಿಗೆ ಬ್ಯಾಂಕುಗಳು ಪರಿಣಾಮಕಾರಿ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಮತ್ತು ಸಾಮರ್ಥ್ಯವನ್ನು ಗುರುತಿಸಿ ಉಪಯೋಗಿಸಲು ಸಲಹೆ ಮಾಡಲಾಗಿತ್ತು. ತಂತ್ರಜ್ಞಾನ ಬಳಸಿ ಖಾತೆಗಳನ್ನು ತೆರೆಯಲು, ಬಯೊಮೆಟ್ರಿಕ್ ಬಳಸಿಕೊಂಡು ಅನಕ್ಷರಸ್ಥ ಗ್ರಾಹಕರಿಗೆ ಮಾಹಿತಿ ಒದಗಿಸುವುದು. ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಬಲಪಡಿಸಿ ಆರ್ಥಿಕ ಸೇರ್ಪಡೆ ಪರಿಣಾಮಕಾರಿಯಾಗುವಂತೆ ಸಹಕಾರಿ ಬ್ಯಾಂಕುಗಳ ಮೂಲಕ ಚಾಲನೆಯನ್ನು ನೀಡುವುದು

**5. EBT ಯ ಅನುಷ್ಠಾನ (Electronic benefit transfer) :**

ಫಲಾನುಭವಿಯ ಮನೆ ಬಾಗಿಲಿಗೆ ಖಾತೆಗೆ ವಿದ್ಯುನ್ಮಾನ ಸಾಮಾಜಿಕ ಪ್ರಯೋಜನಗಳನ್ನು ವರ್ಗಾಯಿಸಲು ಮತ್ತು ಸರ್ಕಾರದ ಪ್ರಯೋಜನಗಳನ್ನು ಬ್ಯಾಂಕಿನ ಮುಖಾಂತರ ಒದಗಿಸುವ BC ಗಳಲ್ಲಿ ಐಸಿಟಿ ಆಧಾರಿತ ಬ್ಯಾಂಕಿಂಗ್ ಸೇವೆಯನ್ನು ನಗದಿನ ಮೇಲೆ ಅವಲಂಬನೆಯನ್ನು ತಗ್ಗಿಸುವ ಮತ್ತು ನಿರ್ವಹಣೆಯ ವೆಚ್ಚವನ್ನು ತಗ್ಗಿಸುವ ಮೂಲಕ EBT ಕಾರ್ಯಗತಗೊಳಿಸಲು ಸಲಹೆ ಮಾಡಲಾಗಿದೆ. ಉದಾ–ಎಲ್‌ಪಿಜಿ ಸಬ್ಸಿಡಿ, ರಸಗೊಬ್ಬರ ಸಬ್ಸಿಡಿ, ಭೀಮಾ ಫಸಲ್ ಯೋಜನೆ, ಹಾಲು ಉತ್ಪಾದಕರಿಗೆ ಸಬ್ಸಿಡಿ ಇತ್ಯಾದಿ

**6. ಸರಳೀಕೃತ ಶಾಖೆಯ ಅಧಿಕಾರ (Simplified branch authorization) :**

ಬ್ಯಾಂಕ್ ಶಾಖೆಗಳನ್ನು ಅಸಮತೋಲನದಿಂದ ಹರಡುವಿಕೆಯ ವಿಷಯವನ್ನು ನಿಭಾಯಿಸಲು ಡಿಸೆಂಬರ್ 2009 ರಲ್ಲಿ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಿಗೆ ಮುಕ್ತವಾಗಿ ಶಾಖೆಗಳನ್ನು ತೆರೆಯಲು ಅನುಮತಿ ನೀಡಲಾಯಿತು. 50,000 ಜನಸಂಖ್ಯೆ ಹೊಂದಿರುವ ಪ್ರದೇಶಗಳಿಗೆ ಈ ಅನುಮತಿ ನೀಡಲಾಗಿತ್ತು.

**7. ಗ್ರಾಮೀಣ ಕೇಂದ್ರಗಳಲ್ಲಿ ಶಾಖೆಗಳನ್ನು ತೆರೆಯುವುದು (Opening of branches in unbanked rural centers) :**

ಗ್ರಾಮೀಣ ಪ್ರದೇಶಗಳಲ್ಲಿ ಶಾಖೆಗಳನ್ನು ತೆರೆಯುವಲ್ಲಿ ಎಷ್ಟು ಶೀಘ್ರವಾಗಿ ಬ್ಯಾಂಕಿಂಗ್ ಸೇವೆ ನೀಡುವ ಮತ್ತು ಆರ್ಥಿಕ ಸೇರ್ಪಡೆ ಸುಧಾರಿಸಲು, ಹಂತಕ್ಕೆ ಸಹಕಾರಿ ಬ್ಯಾಂಕುಗಳು ಮೂಲಕ ಗ್ರಾಮೀಣ ಕೇಂದ್ರಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಸಹಕಾರ ಸಂಸ್ಥೆಗಳ ಮುಖಾಂತರ ಡಿಜಿಟಲೀಕರಣ (ಡಿಜಿಟಲ್ ಯುಗವಾಗಿದ್ದು ಪ್ರತಿ ಒಬ್ಬರ ತಂತ್ರಜ್ಞಾನದ ಉಪಯೋಗದ ವಿವರಗಳು ತಂತ್ರಜ್ಞಾನ ಒದಗಿಸುವ ಕಣ್ಗಾವಲಿನಲ್ಲೆ ಇರುತ್ತದೆ. ಭಾರತದಲ್ಲಿ ಅತಿ ಹೆಚ್ಚು ಮೊಬೈಲ್ ಸಂಪರ್ಕ ಹೊಂದಿದ್ದು ಮಕ್ಕಳಿಂದ ಹಿಡಿದು ವೃದ್ದರ ವರೆಗೆ ಆಂಡ್ರಾಯ್ಡ್ ಮೊಬೈಲ್ ಬಳಸುತ್ತಿದ್ದಾರೆ. ಇಂದು ತಂತ್ರಜ್ಞಾನವು ಊಹೆಗೂ ನಿಲುಕದಷ್ಟು ವೇಗವಾಗಿ ಟಿಜಿಟಲ್ ಕಲ್ಪನೆಯಲ್ಲಿ ಬೆಳೆಯುತ್ತಿದೆ. ಇದರ ಹಿನ್ನಲೆಯಲ್ಲಿ ಸಮಾಜ ಮತ್ತು ಸಂಘಟನೆಗಳು ಹೆಚ್ಚು ಬೆಳವಣಿಗೆಯ ಹಂತದಲ್ಲಿದೆ. ಈ ಕ್ಷಿಪ್ರ ಅಭಿವೃದ್ಧಿ ಮತ್ತು ತಾಂತ್ರಿಕ ಬೆಳವಣಿಗೆಯ ಪ್ರಗತಿ ನಮ್ಮ ವೈಯಕ್ತಿಕ ಬದುಕಿನಲ್ಲೂ ಮತ್ತು ವೃತ್ತಿಪರ ಮಾರುಕಟ್ಟೆಯಲ್ಲಿ ನಮ್ಮ

ಉಪಯೋವನ್ನು ಆದರಿಸಿ ಕ್ರಾಂತಿಕಾರಿಯಾಗುತ್ತಿದೆ. ಡಿಜಿಟಲ್ ವೇದಿಕೆಯ ಹುಟ್ಟು ಗ್ರಾಹಕರಿಗೆ ಸುಲಭವಾಗಿ ಅಂಗೈಯಲ್ಲೆ ಎಲ್ಲಾ ಸೇವೆಗಳನ್ನು ಪಡೆಯಬಹುದಾಗಿದೆ. ಈ ಅವಕಾಶಗಳನ್ನು ಮತ್ತು ದೂರವಾಣಿ ಸಂಸ್ಥೆಗಳನ್ನು ಉಪಯೋಗಿಸಿಕೊಂಡು ಭಾರತೀಯ ಬ್ಯಾಂಕಿಂಗ್ ಕ್ಷೇತ್ರದಲ್ಲಿ 1990 ರಲ್ಲಿ ತಾಂತ್ರಿಕ ಬದಲಾವಣೆಗಳನ್ನು ತರಲು ಪ್ರಯತ್ನಿಸಿದೆ. ಪ್ರಸ್ತುತ ಭಾರತೀಯ ಬ್ಯಾಂಕಿಂಗ್ ವಿಶ್ವದ ಅತ್ಯಂತ ಅಭಿವೃದ್ಧಿ ಮಾರುಕಟ್ಟೆಗಳಲ್ಲಿ ತಾಂತ್ರಿಕವಾಗಿ ಮುಂದುವರೆದಿದೆ. ಇಂದು ರಿಮೋಟ್ ಪ್ರದೇಶಗಳಿಗೆ ಬ್ಯಾಂಕಿಂಗ್ ಸೌಕರ್ಯಗಳು ಹೊಂದಲು ತಂತ್ರಜ್ಞಾನ ಸಹಾಯ ಮಾಡುತ್ತಿದೆ. ಸರ್ಕಾರ ಮತ್ತು ಸಹಕಾರಿ ಸಂಸ್ಥೆಗಳು ದೇಶದಲ್ಲಿ ಡಿಜಿಟಲ್ ಮೂಲಸೌಕರ್ಯ ನಿರ್ಮಿಸುವಲ್ಲಿ ಗುರುತರವಾದ ಹೂಡಿಕೆಯನ್ನು ಮಾಡುತ್ತಿದ್ದಾರೆ. ಡಿಜಿಟಲ್ ಸಾಲ ಮತ್ತು ಪಾವತಿ ಪರಿಹಾರಗಳು, ಇಂದು ನವೀನ ಉತ್ಪನ್ನಗಳ ಪ್ರಚಾರ ವೇದಿಕೆಗಳಿಗೆ ಎಟಿಎಂ, ಡಿಜಿಟಲ್ ಮತ್ತು ಮೊಬೈಲ್ ಬ್ಯಾಂಕಿಂಗ್ ಸಾಕ್ಷಿಯಾಗಿದೆ. ಇದನ್ನು ಸಹಕಾರ ಬ್ಯಾಂಕುಗಳು ಕೂಡ ತಂತ್ರಜ್ಞಾನ ಹೊಂದಲು ಪ್ರಯತ್ನಿಸುತ್ತಿದೆ.

ಸಹಕಾರಿ ಉದ್ಯಮದಲ್ಲಿ ತಾಂತ್ರಿಕ ಮತ್ತು ಡಿಜಿಟಲ್ ಬದಲಾವಣೆಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತಿದ್ದರು. ಸಹಕಾರ ಬ್ಯಾಂಕುಗಳು ಪೂರ್ಣ ಪ್ರಮಾಣದಲ್ಲಿ ಹೆಜ್ಜೆ ಇಡಲು ಯೋಚಿಸುತ್ತಿದೆ. ಡಿಜಿಟೈಸೆಷನ್ ಅನೇಕ ಖಾಸಗಿ ವಲಯದ ಬ್ಯಾಂಕುಗಳ ತಂತ್ರಜ್ಞಾನ ಅಳವಡಿಕೆ ಯಶಸ್ಸಿನ ಪ್ರೇರಣೆಯಿಂದ ಕೇಂದ್ರ ಸರ್ಕಾರ ಮತ್ತು ವಿವಿಧ ರಾಜ್ಯ ಸರಕಾರಗಳು ಡಿಜಿಟಲ್ ಭವಿಷ್ಯದ ಕಡೆಗೆ ಸಹಕಾರಿ ಕ್ಷೇತ್ರವನ್ನು ತೆಗೆದುಕೊಳ್ಳಲು ತಮ್ಮ ಉತ್ತಮ ಪ್ರಯತ್ನಗಳನ್ನು ಹಾಕುವಲ್ಲಿ ಪ್ರಯತ್ನಿಸುತ್ತಿದೆ. ಉದಾಹರಣೆಗೆ – ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ರಾಜ್ಯದ ಎಲ್ಲಾ ಸಹಕಾರಿ ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳನ್ನು ಡಿಜಿಟೈಜ್ ಮಾಡಲು ನಿರ್ದೇಶಿಸಿದರು. ಇದರೊಂದಿಗೆ ರಾಜ್ಯದಲ್ಲಿ ಹಲವಾರು ಕೃಷಿ ಯೋಜನೆಗಳು ಅನುಷ್ಠಾನಕ್ಕೆ ಪಾರದರ್ಶಕತೆ ತರಲು ಯೋಚಿಸಲಾಗುತ್ತಿದೆ.

ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ದೊಡ್ಡ ಮಟ್ಟದಲ್ಲಿ ಡಿಜಿಟೈಸೆಷನ್ ಕಡೆಗೆ ಪ್ರಗತಿ ಹೋಂದಲು ಪ್ರಮುಖ ಸವಾಲನ್ನು ತಳಮಟ್ಟದ ಹಂತಗಳಲ್ಲಿ ಸಹಕಾರಿ ಬ್ಯಾಂಕುಗಳು ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿ ಹೆಚ್ಚು ಸಕ್ರಿಯವಾಗಿ ಕಾರ್ಯನಿರ್ವಹಿಸಲು ಸವಾಲನ್ನು ಎದುರಿಸುತ್ತಿದೆ. ಹಲವಾರು ಸವಾಲುಗಳನ್ನು ಎದುರಿಸುತ್ತಿದೆ

### ತಂತ್ರಜ್ಞಾನ ಅಳವಡಿಕೆಯಲ್ಲಿ ಸಹಕಾರ ಕ್ಷೇತ್ರದಲ್ಲಿನ ಸವಾಲುಗಳು :

ಸಹಕಾರಿ ಕ್ಷೇತ್ರದಲ್ಲಿ ಚಾಲನೆಯಲ್ಲಿರುವ ತಂತ್ರಾಂಶ ಸಿಸ್ಟಮ್ ಕಾಪಾಡಿಕೊಳ್ಳುವ ನಿರ್ವಹಣಾ ವೆಚ್ಚದ ಹೆಚ್ಚಾಗಿದೆ. ಇದಲ್ಲದೆ, ಸೈಬರ್–ಭದ್ರತಾ ಕ್ರಮಗಳನ್ನು ಪರಿಹರಿಸಲು ಪ್ರಮುಖ ಸವಾಲಾಗಿದೆ. ಈ ಅಡೆತಡೆಗಳನ್ನು ಸರಿಪಡಿಸಲು, ಸರ್ಕಾರದ ನ್ಯಾಷನಲ್ ಇನ್ಫರ್ಮ್ಯಾಟಿಕ್ಸ್ ಸೆಂಟರ್, ಪರಿಣಾಮಕಾರಿ ಮತ್ತು ಸುಲಭವಾಗಿ ಕಾರ್ಯಗತಗೊಳಿಸಲು ಐಟಿ ಪರಿಹಾರಗಳನ್ನು ಒದಗಿಸುತ್ತಿದೆ. ನ್ಯಾಷನಲ್ ಇನ್ಫರ್ಮ್ಯಾಟಿಕ್ಸ್ ಸೆಂಟರ್ ದೇಶದಾದ್ಯಂತ ಸಹಕಾರಿ ಕ್ಷೇತ್ರಕ್ಕೆ ತಂತ್ರಜ್ಞಾನವನ್ನು ಜಾರಿಗೆ ತರಲು ಬೆಂಬಲವನ್ನು ನೀಡುತ್ತಿದೆ. ಉದಾ – ಭಾರತವು ಆರನೆಯ ಸ್ಥಾನದಲ್ಲಿ ಜಗತ್ತಿನ ತನ್ನದೇ ಆದ ಬ್ಯಾಂಕ್ RuPay ಕಾರ್ಡ್ ಅಳವಡಿಸಿಕೊಳ್ಳುವಲ್ಲಿ ಯಶ್ವಸಿಯಾಗಿದೆ. ಅದೇ ರೀತಿ ಸಹಕಾರಿ ಕ್ಷೇತ್ರದಲ್ಲಿ ಸಮೃದ್ಧಿ ಸಹಕಾರ ಬ್ಯಾಂಕ್ ನಾಗ್ಪುರ ತನ್ನ ಖಾತೆದಾರರಿಗೆ RuPay ಕಾರ್ಡ್ ವಿತರಿಸುವ ಮೊದಲ ಬ್ಯಾಂಕ್ ಆಗಿತ್ತು.

ತಾಂತ್ರಿಕತೆಯ ಅಳವಡಿಕೆಗೆ ಸಹಕಾರಿ ಬ್ಯಾಂಕುಗಳು ಗ್ರಾಹಕರು ದೂರವಾಣಿ, ಇಂಟರ್ನೆಟ್, ಸೆಲ್ಯುಲರ್ ಪೋನ್ ಮತ್ತು ಎಟಿಎಂ ನಂತಹ ಅನೇಕ ಮಾರ್ಗಗಳ ಮೂಲಕ ಅತ್ಯಾಧುನಿಕ ಉತ್ಪನ್ನಗಳು ಮತ್ತು ಸೇವೆಗಳಿಗೆ ಪ್ರವೇಶವನ್ನು ಬಯಸುತ್ತಿದ್ದಾರೆ. ಇದು ಹಲವು ಭಾರತೀಯ ಬ್ಯಾಂಕುಗಳ ಉನ್ನತ ಆಡಳಿತ ವ್ಯವಹಾರ ಅನುಕೂಲಕರ ಮತ್ತು ತಮ್ಮ ಕಾರ್ಯತಂತ್ರದ ಒಂದು ಪ್ರಮುಖ ಭಾಗವಾಗಿ ನಡೆಸುತ್ತಿದೆ.

### ಸಹಕಾರಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಅಳವಡಿಸುವಲ್ಲಿ ಇರುವ ಸಮಸ್ಯೆಗಳು :

ಸಹಕಾರಿ ಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ ಸಮಸ್ಯೆಗಳನ್ನು ನಿರ್ವಹಿಸಲು ಅಗತ್ಯವಿರುವ ಅರ್ಹ ವೃತ್ತಿಪರರ ಕೊರತೆಯಾಗಿದೆ ಇದರ ನಿರ್ವಹಣೆ ಸುಲಭದ ಸಂಗತಿಯಲ್ಲ, ಸ್ಪರ್ಧಾತ್ಮಕ ಬ್ಯಾಂಕಿಂಗ್ ಹಲವು ಚಟುವಟಿಕೆಗಳನ್ನು ವ್ಯಾಪ್ತಿಗೆ ಐಟಿ ಬಳಕೆ ಮಾಡಲು ಈ ಸಮಸ್ಯೆಗಳನ್ನು ಹೊರತಾಗಿಯೂ ಸಹಕಾರಿ ನಗರ ಬ್ಯಾಂಕುಗಳು ವೇಗ, ದಕ್ಷತೆ, ಲಾಭ, ಕಸ್ಟಮೈಸ್ ಉತ್ಪನ್ನ ಅಭಿವೃದ್ಧಿ ಮತ್ತು ಚಟುವಟಿಕೆಯ ಹೆಚ್ಚಳಕ್ಕೆ ಹೊಸ ತಂತ್ರಜ್ಞಾನ ಪ್ರಕ್ರಿಯೆಯಲ್ಲಿ ಸುಧಾರಣೆಗಳು ಮತ್ತು ಸಕಾರಾತ್ಮಕ ಫಲಿತಾಂಶಗಳನ್ನು ತೆರೆದಿಡುತ್ತದೆ ಆದರೂ ಸಹ ನವೀನ ತಂತ್ರಜ್ಞಾನ ಸಂಬಂಧಿಸಿದಂತೆ ಹಲವು ಅಪಾಯದ ಭಾಗಗಳು ಇವೆ;

- ಹೆಚ್ಚಿದ ನಗದು ಹರಿವು ದರದಲ್ಲಿ ಹೊಸ ತಂತ್ರಜ್ಞಾನ ಹೆಚ್ಚು ವೆಚ್ಚ ನಿರ್ವಹಣೆ
- ಹಳೆಯ ತಂತ್ರಜ್ಞಾನವನ್ನು ನೂತನ ತಂತ್ರಜ್ಞಾನಕ್ಕೆ ಇಂಟಿಗ್ರೇಷನ್ ಸಮಸ್ಯೆ.
- ಹೊಸ ತಂತ್ರಜ್ಞಾನದ ನಿಯಂತ್ರಣ, ಐಟಿ ಸಂಬಂಧಿತ ಕಾರ್ಯಾಚರಣೆಗಳು, ಭದ್ರತಾ ಮತ್ತು ನಿರ್ವಹಣೆ ಅತಿ ಹೆಚ್ಚು ಕಷ್ಟಕರ.
- ಹೆಚ್ಚು ತಂತ್ರಜ್ಞಾನ ನಿರ್ವಹಣಾ ವೆಚ್ಚ.

### ಉಪಸಂಹಾರ :

ಸಹಕಾರಿ ಕ್ಷೇತ್ರದಲ್ಲಿ ಗ್ರಾಹಕರು ದೂರವಾಣಿ, ಇಂಟರನೇಟ್, ಸೆಲ್ಯುಲರ್ ಪೋನ್, ಮತ್ತು ಎ.ಟಿ.ಎಂ ನಂತಹ ಆನೇಕ ಮಾರ್ಗಗಳ ಮೂಲಕ ಅತ್ಯಾಧುನಿಕ ಬ್ಯಾಂಕಿಂಗ್ ಉತ್ಪನ್ನಗಳು ಮತ್ತು ಸೇವೆಗಳಿಗೆ ಪ್ರವೇಶವನ್ನು ಬಯಸುತಿದ್ದಾರೆ. ಇದು ಹಲವು ಸಹಕಾರಿ ಕ್ಷೇತ್ರದ ಬ್ಯಾಂಕುಗಳಿಗೆ ಅನುಕೂಲಕರವಾಗಿ ಉತ್ತಮ ಆಡಳಿತ ವ್ಯವಹಾರ ಮತ್ತು ತಂತ್ರಜ್ಞಾನ ಅಳವಡಿಕೆ ತಮ್ಮ ಕಾರ್ಯ ಯೋಜನೆಯ ಒಂದು ಪ್ರಮುಖ ಭಾಗವಾಗಿ ಯಶಸ್ವಿಯಾಗುತ್ತಿದೆ. ಅದೇ ರೀತಿ ಆರ್ಥಿಕ ಸಭಲತೆಯುಲ್ಲ ಸಹಕಾರಿ ಸಂಸ್ಥೆಗಳು ತಂತ್ರಜ್ಞಾನ ಅಳವಡಿಸಿಕೊಳ್ಳುವ ಮೂಲಕ ಹೆಚ್ಚಿನ ಆರ್ಥಿಕ ಸೇರ್ಪಡೆ ಹೊಂದಲು ಉತ್ತಮ ಮಾರ್ಗವಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಮತ್ತು ಆರ್.ಬಿ.ಐ ಸಹಕಾರಿ ಕ್ಷೇತ್ರದಲ್ಲಿ ಉನ್ನತ ತಂತ್ರಜ್ಞಾನವನ್ನು ಕಡಿಮೆ ವೆಚ್ಚದಲ್ಲಿ ಒದಗಿಸಲು ಕಾರ್ಯಯೋಜನೆ ರೂಪಿಸಿ ಗ್ರಾಮೀಣ ಮಟ್ಟದಲ್ಲಿ ಅನುಷ್ಠಾನಗೊಳಿಸಿದಲ್ಲಿ ಭಾರತದಲ್ಲಿ ಆರ್ಥಿಕ ಸೇರ್ಪಡೆಯನ್ನು ಸಾಧಿಸಲು ಅವಕಾಶ ವಾದಂತಾಗುತ್ತದೆ.

# Uniform regulatory structure for co-op banks top priority : RBI

## The consolidated balance sheet of UCBs expanded moderately in 2018-19 on the back of robust deposit growth which financed the pick-up in lending.

The co-operative banking sector accounts for only 10.6% of the commercial banking.

In the aftermath of the PMC Bank crisis, the Reserve Bank of India (RBI) said that the "highest priority" needs to be assigned to the establishment of a uniform regulatory and supervisory structure and an umbrella organisation to provide liquidity and capital support.

In its 'Report on trend and progress of Banking in India', the RBI said that a number of issues continue to plague urban co-operative banks (UCBs) including a low capital base, weak corporate governance, inability to prevent frauds, slower adoption of new technology and inadequate system of checks and balances. "Going forward, UCBs need to break out of these drags," the report said.

Currently, there is duality of control over state cooperative banks, district central cooperative banks and urban cooperative banks between the Registrar of Cooperative Societies or the Central Registrar of Cooperative Societies and the RBI.

The report has identified two challenges for the cooperative banks — rising competition from not just scheduled commercial banks (SCBs), but also small finance and payments banks, and vulnerability due to internal weaknesses such as inability to prevent frauds.

The co-operative banking sector accounts for only 10.6% of the commercial banking. However, it is vital to ensure financial stability of the cooperative banks given their role in financial inclusion, presence in lower tier towns and villages and predominant domestic orientation.

During 2018-19, UCBs registered moderate improvement in their asset quality, driven by the decline in the gross non-performing asset ratio (GNPA) of non-scheduled UCBs, the report said. "Although their asset quality and provisions improved, a fall in interest income adversely affected profitability," the report found.

The consolidated balance sheet of UCBs expanded moderately in 2018-19 on the back of robust deposit growth which financed the pick-up in lending.

Among short-term rural co-operatives, the financial health of state co-operative banks and district central co-operative banks weakened on account of an increase in the NPA and slowdown in profitability, the report said. Total frauds at banks rise 74 per cent to Rs 71,543 crore in 2018-19: RBI.

## Growth down, but no fear of recession : Finance minister



Finance minister Nirmala Sitharaman said the Indian economy may be facing a slowdown but there's no danger of a recession taking hold. The government will make policy changes as and when required.

"Every step being taken is in the interest of the country," the minister said in her reply to a discussion on the economic situation in the upper house of Parliament on Wednesday. "Looking at the economy in discerning view, you see that growth may have come down but it is not recession yet; i ..

Nirmala Sitharaman blamed the slowing of GDP growth in the last two financial years on the lagged effect of the so-called twin balance sheet crisis — stress on banks due to nonperforming assets or bad loans on the one hand and heavily indebted corporate bodies.

### What is Capital Adequacy Ratio for banks?

The risk-weighted assets take into account credit risk, market risk and operational risk.

Capital Adequacy Ratio (CAR) is the ratio of a bank's capital in relation to its risk-weighted assets and current liabilities. It is decided by central banks and bank regulators to prevent commercial banks from taking excess leverage and becoming insolvent in the process.

In other words, it measures how much capital does a bank has with it as a percentage of its total credit exposure. Bank regulators enforce this ratio to ensure credit discipline in order to protect depositors interest.

# ಸಂಯುಕ್ತ ಸಹಕಾರಿಯ ಪ್ರಕಟಣೆ ಪುಸ್ತಕಗಳ ವಿವರ

| ಕ್ರ..ಸಂ. | ಪುಸ್ತಕದ ಹೆಸರು | ಬೆಲೆ |
|---|---|---|
| 1 | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 | 100/- |
| 2 | The Karnataka Souharda Sahakari Act 1997 | 75/- |
| 3 | ಸೌಹಾರ್ದ ಸಹಕಾರಿ ಮಾರ್ಗದರ್ಶಿ | 15/- |
| 4 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಉಪವಿಧಿ | 30/- |
| 5 | ಸೌಹಾರ್ದ ಪತ್ತಿನ ಸಹಕಾರಿ ಮಾದರಿ ಉಪವಿಧಿ | 25/- |
| 6 | ಸೌಹಾರ್ದ ಸಹಕಾರಿಗಳ ಮಾದರಿ ಸಾಲ ಮತ್ತು ಠೇವಣಾತಿ ನಿಯಮಗಳು | 20/- |
| 7 | ಸೌಹಾರ್ದ ಸಹಕಾರಿಗಳಿಗಾಗಿ ನೌಕರರ ಮಾದರಿ ಸೇವಾ ನಿಯಮಗಳು | 15/- |
| 8 | ಸೌಹಾರ್ದ ಸಹಕಾರಿಗಳಿಗಾಗಿ ಮಾಹಿತಿ ಕೈಪಿಡಿ | 15/- |
| 9 | ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾ ನಿಯಮಗಳು | 25/- |
| 10 | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಾಕರ ಕೈಪಿಡಿ | 15/- |
| 11 | ಕರ್ನಾಟಕ ರಾಜ್ಯದ ವಿಶಿಷ್ಠ ಸಹಕಾರ ಸಂಸ್ಥೆಗಳು | 40/- |
| 12 | Special Co-opearative Societies of Karnataka | 25/- |
| 13 | ಇ–ಸ್ಟಾಂಪಿಂಗ್ ಮಾಹಿತಿ ಕೈಪಿಡಿ | 50/- |
| 14 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳು ಸಾರಾಂಶ | 100/- |
| 15 | ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು | 50/- |
| 16 | Karnataka High Court Judgements Related to Co-operative Sector | 200/- |
| 17 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಹಕ್ಕು ಕಾಯ್ದೆಯನ್ವಯ ನೀಡಲಾದ ನ್ಯಾಯಾಲಯಗಳ ತೀರ್ಪುಗಳ ಸಾರಂಶ | 100/- |
| 18 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ತೀರ್ಪುಗಳ ಸಾರಂಶ ಭಾಗ – 2 | 100/- |
| 19 | ಸಹಕಾರಿಗಳಿಗೆ ಉಪಯುಕ್ತವಾದ ಮಾದರಿಗಳ ಕೈಪಿಡಿ | 50/- |
| 20 | ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಸಂಬಂಧಿತ ತೀಪುಗಳು | 120/- |
| 21 | Karnataka High Court Judgements Related to Co-operative Sector Vol -2 | 400/- |
| 22 | Supreme Court Judgement Related to Co-operative Sector Volume - 1 | 150/- |
| 23 | Supreme Court Judgement Related to Co-operative Sector Volume - 2 | 500/- |
| 24 | ಸ್ವಾಭಿಮಾನಿ ಸಹಕಾರಿ ವಾರ್ಷಿಕ ಚಂದಾ 1 ವರ್ಷಕ್ಕೆ | 100/- |
| 25 | ಸಹಕಾರ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್ ಡಿಪ್ಲೋಮಾ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳು | 300/- |
| 26 | ವಿಷಯ–01 – ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 250/- |
| 27 | ವಿಷಯ–02 – ಸಹಕಾರಿ ಪತ್ತು ನಿರ್ವಹಣೆ | 250/- |
| 28 | ವಿಷಯ–03 – ಬ್ಯಾಂಕಿಂಗ್ ಮೂಲ ಮಾಹಿತಿ | 250/- |
| 29 | ವಿಷಯ–04 – ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 250/- |
| 30 | ವಿಷಯ–05 – ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 250/- |
| 31 | ವಿಷಯ–06 – ಮಾಹಿತಿ ತಂತ್ರಜ್ಞಾನ | 250/- |

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2017-19 RNI NO. KARBIL-2004/18001/Pages 40

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

## ಆಡಳಿತ ಮಂಡಳಿ ಸದಸ್ಯರು

## 2020 ನೂತನ ವರ್ಷದ ಹಾರ್ದಿಕ ಶುಭಾಶಯಗಳು


ಬಿ.ಹೆಚ್. ಕೃಷ್ಣಾರೆಡ್ಡಿ
ಅಧ್ಯಕ್ಷರು


ಜಗದೀಶ ಕವಟಗಿಮಠ
ಉಪಾಧ್ಯಕ್ಷರು


ಗುರುನಾಥ ಜಾಂತಿಕರ
ನಿರ್ದೇಶಕರು


ಹೆಚ್.ವಿ. ರಾಜೀವ್
ನಿರ್ದೇಶಕರು


ವಿಶ್ವನಾಥ ಚ. ಹಿರೇಮಠ
ನಿರ್ದೇಶಕರು


ಎಸ್.ಆರ್. ಲಕ್ಷ್ಮೀಕಾಂತರೆಡ್ಡಿ
ನಿರ್ದೇಶಕರು


ರಂಗಪ್ಪಯ್ಯ ದೇಶಪಾಂಡೆ
ನಿರ್ದೇಶಕರು


ಮಾರುತಿ ಬಿ. ಕಲಾಲ
ನಿರ್ದೇಶಕರು


ಗುರುನಗೌಡ ಪಾಟೀಲ
ನಿರ್ದೇಶಕರು


ವಾಯ್. ಟಿ. ಪಾಟೀಲ
ನಿರ್ದೇಶಕರು


ಜಿ. ನಂಜನಗೌಡ
ನಿರ್ದೇಶಕರು


ಬಿ. ಗಂಗಾಧರಯ್ಯ
ನಿರ್ದೇಶಕರು


ಸಿದ್ರಾಮಪ್ಪ ಉಪ್ಪಿನ
ನಿರ್ದೇಶಕರು


ಎ.ಆರ್. ಪ್ರಸನ್ನಕುಮಾರ್
ನಿರ್ದೇಶಕರು


ಆರ್. ತಿಮ್ಮಯ್ಯಶೆಟ್ಟಿ
ನಿರ್ದೇಶಕರು


ಸಂಜೀವ ಮಹಾಜನ
ನಿರ್ದೇಶಕರು


ಜಿ. ಶ್ರೀಧರ
ನಿರ್ದೇಶಕರು


ಬಿ.ಎಸ್. ಗುಂಡುರಾವ್
ನಿರ್ದೇಶಕರು


ಮಂಜುನಾಥ
ನಿರ್ದೇಶಕರು


ಚಂದ್ರಕಾಂತ ಪಡಚಣ್ಣನವರ
ನಿರ್ದೇಶಕರು


ಶ್ರೀಮತಿ ಸರಸ್ವತಿ
ನಿರ್ದೇಶಕರು


ಬಿ. ರಾಜಶೇಖರ
ವೃತ್ತಿಪರ ನಿರ್ದೇಶಕರು


ಎಮ್. ಜಿ. ಪಾಟೀಲ
ವೃತ್ತಿಪರ ನಿರ್ದೇಶಕರು


ಶರಣಗೌಡ ಜಿ. ಪಾಟೀಲ
ವ್ಯವಸ್ಥಾಪಕ ನಿರ್ದೇಶಕರು

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010